ಕೊಡಗು ಸಂಗಾತಿ

ಜುಲೈ 1 ರಿಂದ 31, 2003 ಪಾಕ್ಷಿಕ ಪತ್ರಿಕೆ (ಕಾರ್ತಿಂಗ 16-31 ಆಟಿ 1-15)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R.No. KA/SK/MYS-88/2003 ಸಂಪುಟ : 7 ಸಂಚಿಕೆ : 7-8 ಪುಟಗಳು : 24 ಬೆಲೆ ರೂ. : 12-00



LT. POOJA VASANTH. K.



CONGRATULATIONS

Lt. Pooja Vasanth. K., B.Com., (Hon) PGDHR (D/o Mrs. Vimla & Kuyyamudi Vasanth)

on successful passing out of 20th batch at OTA, Chennai on 7th Sept. 2002. She is the first Lady Army Officer of Gowda community and recipient of the award for 'Best in Physical Training'.

: ಲೇಖನ ಒಳಪುಟದಲ್ಲಿ

ಭಾರತೀಯ ಭೂಸೇನೆಯ ಪ್ರಪ್ರಥಮ ಗೌಡ ಮಹಿಳೆ.
ಲೆಫ್ಟಿನೆಂಟ್ ಕುಯ್ಯುಮುಡಿ ಪೂಜಾ ವಸಂತ.

ಎಡಿಕೇರಿ ಸಿ. ಸುಜಿತ್ ಮತ್ತು ಕಾಂಗೀರ ಪಿ.ಪ್ರೀತು.

ಶುಭ ವಿವಾಹ



ದಿನಾಂಕ 22-5-2003 ರ ಗುರುವಾರ ನಮ್ಮ ಮಕ್ಕಳ ಮದುವೆ ಶುಭ ಕಾರ್ಯವು ಮರಗೋಡು ಗೌಡ ಸಮಾಜದಲ್ಲಿ ನಡೆಯಿತು. ನೀವುಗಳು ನೆಂಟರಿಷ್ಟರು, ಹಿತೈಷಿಗಳು ಎಲ್ಲಾ ಬಂದು ಆಶೀರ್ವದಿಸಿದಿರಿ. ನಮಗೆ ಧನ್ಯತೆಯನ್ನು ತಂದಿದೆ. ನೀವುಗಳಿಗೆಲ್ಲಾ ನಮ್ಮ ಕುಲಗುರು ವೆಂಕಟರಮಣ ಮತ್ತು ಶಾರದಾಂಬೆಯರ ಕೃಪಾ ಕಟಾಕ್ಷೆ ಸದಾ ಇದ್ದು ಐಶ್ವರ್ಯ ಆಯಿರಾರೋಗ್ಯ ಸುಖ ಸಂಪತ್ತು ನೀಡಿ ಅನುಗ್ರಹಿಸಲಿ ಎಂದು ನಾವುಗಳು ಈ ಮೂಲಕ ಶುಭ ಹಾರೈಸುತ್ತೇವೆ.

ಯಿಂದ: ಎಡಿಕೇರಿ ಚಿಣಪ್ಪ, ಎಡಿಕೇರಿ ರುಕ್ಮಿಣಿ, ಎಡಿಕೇರಿ ಸಚಿನ್
ವಿಳಾಸ: ಗೋಕುಲ್ ನಿಲಯ, ಹಾರಂಗಿ ರಸ್ತೆ, ಗುಮ್ಮನ ಕೊಲ್ಲಿ,
ಕುಶಾಲನಗರ **Ph. : 674627**

ಮತ್ತು

ಕಾಂಗೀರ ಪೂಣಚ್ಚ, ಕಾಂಗೀರ ಸರಸ್ವತಿ,
ಕಾಂಗೀರ ಚೇತನ್, ಕಾಂಗೀರ ಮುಖೇಶ್
ವಿಳಾಸ : ಕಟ್ಟೆಮಾಡು ಗ್ರಾಮ
ಮರಗೋಡು ಪೋಸ್ಟು, Ph. : 241670

ಶುಭ ಹಾರೈಕೆ



ಕುಮಾರಿ ಚಿಂತನ

ಮಡಿಕೇರಿ ನಿವಾಸಿ ದೊಡ್ಡಮನೆ ತಮ್ಮಪ್ಪ ಮತ್ತು ಶ್ರೀಮತಿ ಸುಮತಿ ಇವರ ಮಗಳು ಕುಮಾರಿ ಚಿಂತನ 2002-03 ನೇ ಸಾಲಿನ 7 ನೇ ತರಗತಿಯ ಪರೀಕ್ಷೆಯಲ್ಲಿ ಒಟ್ಟು 578 ಅಂಕಗಳನ್ನು ಗಳಿಸಿ (96.33%) ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾಳೆ. ಇವಳು ಮಡಿಕೇರಿ ಬ್ಲಾಸಂ ಶಾಲೆಯ ವಿದ್ಯಾರ್ಥಿನಿಯಾಗಿದ್ದು, ಇವಳಿಗೆ ಉತ್ತಮ ಭವಿಷ್ಯವನ್ನು ಹಾರೈಸುವ

ಅಜ್ಜಿ : ಬಾರನ ಲಕ್ಷ್ಮಮ್ಮ, ಅಣ್ಣ : ದೊಡ್ಡಮನೆ ರವಿತೇಜ, ಚಿಕ್ಕಮ್ಮ ಮತ್ತು ಚಿಕ್ಕಪಂದಿರು.

ದ್ವಿತೀಯ ಪಿಯುಸಿ ಫಲಿತಾಂಶ
ಸಲೀನಾ ಮುಹಮ್ಮದ್ ಜಿಲ್ಲೆಗೆ ತೃತೀಯ



ಸಲೀನಾ ಮುಹಮ್ಮದ್

ಕಳೆದ ಏಪ್ರಿಲ್ ತಿಂಗಳಿನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮಡಿಕೇರಿಯ ರಾಜೇ ರಾಜೇಶ್ವರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕಲಾ ವಿಭಾಗದ ಸಲೀನಾ ಮುಹಮ್ಮದ್499 ಅಂಕ ಪಡೆಯುವ ಮೂಲಕ ಕೊಡಗು ಜಿಲ್ಲೆಗೆ ಮೂರನೆ ಸ್ಥಾನ ಪಡೆದಿದ್ದಾಳೆ. ಈ ಕಾಲೇಜಿಗೆ 100% ಫಲಿತಾಂಶ ದೊರೆತಿರುವುದು ವಿಶೇಷ. ಈಕೆಯು ಫಿರ್ದೌಸ್ ವಾರಪತ್ರಿಕೆಯ ಸಂಪಾದಕ ಎಂ.ಇ. ಮುಹಮ್ಮದ್ ಹಾಗೂ ಸಾರಾ ದಂಪತಿಗಳ ಪುತ್ರಿ. ಎಂ.ಇ. ಮುಹಮ್ಮದ್‌ನವರು ಬರೆದ 'ಕರಿಚಿನ್ನ' ಕಥೆಯು ಕೊಡಗು ಸಂಗಾತಿ ಪತ್ರಿಕೆಯಲ್ಲಿ ಈ ಹಿಂದೆ ಧಾರವಾಹಿಯಾಗಿ ಪ್ರಕಟವಾಗಿದ್ದುದನ್ನು ಸ್ಮರಿಸಬಹುದು.

ಮಡಿಕೇರಿ, ದೂರವಾಣಿ: ***225842***

ಉದಿಯನ ಸುರೇಶ ಮತ್ತು ಪೊಡನೋಳನ ಜಯಶ್ರೀ

ದಿನಾಂಕ 2-6-2003 ರ ಸೋಮವಾರ ನಮ್ಮ ಮಕ್ಕಳ ಮದುವೆ ಶುಭ ಕಾರ್ಯವು ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ನಡೆಯಿತು. ನೀವುಗಳು ಹಿತೈಷಿಗಳು ಎಲ್ಲಾ ಬಂದು ಆಶೀರ್ವದಿಸಿದಿರಿ. ನಮಗೆ ತುಂಬಾ ಖುಷಿ ನೀಡಿದೆ. ನೀವುಗಳಿಗೆಲ್ಲಾ ನಮ್ಮ ಕುಲಗುರು ವೆಂಕಟರಮಣ ಮತ್ತು ಶೃಂಗೇರಿ ಶರ್ವಾಂಬೆಯ ಆಶೀರ್ವಾದವಿರಲೆಂಬುದಾಗಿ ಈ ಮೂಲಕ ಹಾರೈಸುತ್ತೇವೆ.

ಯಿಂದ: ಶ್ರೀಮತಿ ಮತ್ತು ಶ್ರೀ ಉದಿಯನ ದೇವಯ್ಯ ,
ಮಂಗಳಾದೇವಿ ನಗರ, ಮಡಿಕೇರಿ. **Mobile : 98453513**

ಮತ್ತು

ಶ್ರೀಮತಿ ಪೊಡಳೋಳನ ಮಾದಪ್ಪ

ಕೊಡಗು ಸಂಗಾತಿ ನಿರಂತರ ನಡಿಯಲು ಬೇಕು, ಹಿತೈಷಿಗಳ ಮನಪೂರ್ವಕ ಸಹಕಾರ. ಸಂಗಾತಿ ಪತ್ರಿಕೆ ಯಾವುದೇ ಕಾರಣಕ್ಕೂ ನಿಲ್ಲಬಾರದು. ಮುದುಡಬಾರದು. ಸಂಗಾತಿ ಪತ್ರಿಕೆ ಮುದುಡಿದರೆ ಜನಾಂಗದ ಪ್ರತಿಭೆ ಮುದುಡಿದ ಹಾಗೆ. ಅಭಿವೃದ್ಧಿಗೆ ಮಾರಕ, ಕಂಟಕಪ್ರಾಯ, ಉಳಿಸಿ ಬೆಳೆಸುವುದು ಮಹಾ ಜನತೆಯ ಹಕ್ಕು.

- ಪಟ್ಟಡ ಪ್ರಭಾಕರ.

2003, ಜುಲೈ 1 ರಿಂದ 31ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	**ಕೊಡಗು ಸಂಗಾತಿ,** 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. **ಫೋನ್ : 0821/2404290** ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94480-87790**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ ಪುಸ್ತಕ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಇತ್ಯಾದಿಗಳು	**ಕೊಡಗು ಸಂಗಾತಿ** C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 **ಫೋನ್ : 228380** ಬೈತಡ್ಕ ಜಾನಕಿ ಬೆಳ್ಯಪ್ಪ **ಫೋನ್ : 228047**
ವಿರಾಜಪೇಟೆ	**ಬಾರಿಕೆ ಮನೋಜ್‌ಕುಮಾರ್,** ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ **ಫೋನ್ :** 08274/456591
ಕುಶಾಲ ನಗರ	**ಕುಂಭಗೌಡನ ಸೋಮಣ್ಣ,** ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್ :** 08276/673370
ಬೆಂಗಳೂರು ಮಹಾನಗರ	**ನಂಗಾರು ಮೋದನ ಪ್ರಿಯ,** ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 12ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), **ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.**

ಸಂಪಾದಕೀಯ : ಚಿಂತನ - ಮಂಥನ

ಭಾರತೀಯ ಸಂಸ್ಕೃತಿ ಸಾಧಾರಣ ಏಳೆಂಟು ಸಾವಿರ ವರ್ಷಗಳ ಪ್ರಾಚೀನವಾದ ಸಂಸ್ಕೃತಿ. ವೇದಗಳ ಕಾಲದಿಂದ ಇಂದಿನವರೆಗೆ ನೂರಾರು ಸಾವಿರಾರು ಬುದ್ಧಿವಂತರು, ಋಷಿವರ್ಯರು ಕವಿಗಳು ಆಚಾರ್ಯರು ಈ ಸಂಸ್ಕೃತಿಯನ್ನು ಎಡೆಬಿಡದೆ ಹರಿ ಯುತ್ತಿರುವ ಗಂಗಾ ಕಾವೇರಿ ನದಿಗಳಂತೆ ಮುಂದುವರಿಸುತ್ತಾ ಇದ್ದು ಗ್ರೀಕ್, ಚಂಗೆಸ್ ಖಾನ್, ಮಹಮ್ಮದಿಯರು, ಯುರೋಪಿಯನ್ನರು ಧಾಳಿ ಮಾಡಿ ಮತಾಂತರವು ಬಲತ್ಕಾರ ಕುತಂತ್ರಗಳಿಂದ ಪ್ರಯತ್ನಪಟ್ಟವು. ಅವುಗಳ ಅಡಿಪಾಯವನ್ನು ಅಲುಗಾಡಿಸಲಾಗದೆ ಇಂದಿಗೂ ಮುಂದುವರಿಯುತ್ತಿದೆ.

ಆದರೆ ಈಗ ಐವತ್ತು ಅರವತ್ತು ವರ್ಷಗಳಿಂದ ಈಚೆಗೆ ಪಾಶ್ಚಾತ್ಯ ವ್ಯಾಮೋಹದಿಂದ ಸಾವಿರಾರು ವರ್ಷಗಳಿಂದ ಮುಂದುವರಿಸಿದ ಋಷಿಮುನಿಗಳು ಮೇಧಾವಿಗಳು ಮಾರ್ದಗರ್ಶನ ಮಾಡಿದ ಈ ನಮ್ಮ ಸಂಸ್ಕೃತಿಯನ್ನು ಮರೆತು ಪಾಶ್ಚಾತ್ಯರ ವೇಷ ಭೂಷಣಗಳಿಗೆ, ತಿಂಡಿ ತಿನಿಸುಗಳಿಗೆ, ಆಟೋಟಗಳಿಗೆ ಮಾರುಹೋಗಿ ನಮ್ಮ ಪ್ರಾಚೀನ ನಾಗರಿಕತೆಗಳಿಂದ ಈಜಿಫ್ಟ್, ಬೇಬಿಲೋನಿಯ, ಇರಾಕ್, ಇರಾನ್, ಗ್ರೀಸ್, ರೋಮ್ಸ್, ಯುರೋಪಿನಾದ್ಯಂತ ಇದ್ದ ಪೇಗನ್ ಚೈನಾ ಸಂಸ್ಕೃತಿ ಹೆಸರು ಮಾತ್ರ ಉಳಿದಿದ್ದು, ಸಂಸ್ಕೃತಿಯಾಗಿ ಉಳಿದಿರುವುದು ಭಾರತೀಯ ಸಂಸ್ಕೃತಿ ಮಾತ್ರ. ಸಂಸ್ಕೃತಿಯನ್ನು ತಿರಸ್ಕರಿಸುತ್ತಿದ್ದಾರೆ.

ಅಮೇರಿಕ ಇಂಗ್ಲೇಂಡ್ ಮುಂತಾದ ಐಶ್ವರ್ಯವಂತ ರಾಷ್ಟ್ರಗಳಿಗೆ ವಲಸೆ ಹೋಗಿ ಅಲ್ಲಿಯ ಪ್ರಜೆಗಳಾಗಿ ಸ್ವದೇಶದ ಪ್ರಾಚೀನವಾದ ಸಂಸ್ಕೃತಿಯನ್ನು ಕಡೆಗಣಿಸಿ ಇಲ್ಲಿ ನಡೆಯುತ್ತಿರುವ ಪೂಜೆ, ಹೋಮ ಮದುವೆಗಳಲ್ಲಿ ನಡೆಯುತ್ತಿರುವ ಅರಶಿಣ ಶಾಸ್ತ್ರ ಅಕ್ಕಿ ಹಸೆ - ವೀಳ್ಯಶಾಸ್ತ್ರ - ಲಗ್ನ ಪತ್ರಿಕೆಗಳೆಲ್ಲವು ಗೊಡ್ಡು ಸಂಪ್ರದಾಯವೆಂದು ಹಿಯ್ಯಾಳಿಸಿ ತನ್ನ ಮಾತೃಭಾಷೆಯನ್ನು ಅಸಡ್ಡೆಯಿಂದ ಕಂಡು, ಇದು ಗೊಡ್ಡು ಸಂಪ್ರದಾಯವೆಂದು ಜರಿಯುತ್ತಿದ್ದಾರೆ ಇಂತಹ ಪ್ರವೃತ್ತಿಯಿಂದ ನಮ್ಮ ಯುವಕ - ಯುವತಿಯರು ಈ ರೀತಿ ನಮ್ಮ ದೇಶದಿಂದ ದೂರ ಹೋದರೂ ನಮ್ಮ ಸಂಸ್ಕೃತಿಯಿಂದ ದೂರ ಸರಿಯದಂತೆ ನಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ನಮ್ಮ ಸಂಸ್ಕೃತಿ ಬಗ್ಗೆ ಸರಿಯಾದ ತಿಳುವಳಿಕೆಯನ್ನು ತಾಯಂದಿರು ಕೊಟ್ಟು, ನಮ್ಮ ಧಾರ್ಮಿಕ ವಿಧಿ- ವಿಧಾನಗಳ ಶ್ರೇಷ್ಠತೆ ಅವುಗಳ ಅನುಷ್ಠಾನದಿಂದ ವ್ಯಕ್ತಿಗಳ ಮನಸ್ಸು ಕಾಯದ ಆರೋಗ್ಯ ಅವುಗಳನ್ನು ಉಪಯೋಗಿಸುವುದಕ್ಕೆ ನಮ್ಮ ಋಷಿ ಪುಂಗವರು ಮಾಡಿದ ಸಾಧನೆಗಳನ್ನು ವಿವರಿಸಿ ನಮ್ಮ ಸಂಸ್ಕೃತಿ ಖರೆ ಜ್ಞಾನಾರ್ಜನೆಗೆ ಮಾತ್ರ ಸೀಮಿತ ವಾಗಿರದೇ ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ-ಮಾನಸಿಕ ಹಾಗೂ ಆರೋಗ್ಯದ ಬೆಳವಣಿಗೆಗಳಿಗೆ ಸಹಾಯವಾಗುವಂತೆ ಪ್ರೇರೆಪಿಸಬೇಕು. ವಿಷಯವನ್ನು ತಿಳಿಯ ಹೇಳುವ ಏರ್ಪಾಡು ಪ್ರತೀ ಸಮಾಜದಲ್ಲಿ ಆಗಿ ಆಯಾಯ ಸಮಾಜಗಳ ಧುರೀಣರು, ಗುರುಗಳು ಈ ದಿಕ್ಕಿನಲ್ಲಿ ಗಮನ ಹರಿಸಿ ಪ್ರತಿಯೊಬ್ಬರೂ ಮಕ್ಕಳಾಗಿದ್ದಾಗಲೇ ನಮ್ಮ ಸಂಸ್ಕೃತಿಯ ಎಲ್ಲಾ ಸೂಕ್ತಿಗಳನ್ನು ತಿಳಿದುಕೊಂಡರೆ ಮಾತ್ರ ನಮ್ಮ ಯುವಕ-ಯುವತಿಯರಿಂದ ನಮ್ಮ ಸಂಸ್ಕೃತಿಯ ಪಲಾಯನವನ್ನು ತಡೆಗಟ್ಟಬಹುದು. ಇಲ್ಲದಿದ್ದರೆ ನಮ್ಮ ಮುಂದಿನ ಪೀಳಿಗೆ ಈ ಕಡೆ ಭಾರತೀಯ ಸಂಸ್ಕೃತಿಯನ್ನು ತಿಳಿಯದೆ, ಇತ್ತ ಆ ಕಡೆ ಪಾಶ್ಚಾತ್ಯ ಸಂಸ್ಕೃತಿಯನ್ನು ಅರಿಯದೆ ತ್ರಿಶಂಕುವಿನ ಪರಿಸ್ಥಿತಿಯಾಗಿ ಇನ್ನೂ ಹತ್ತಿಪ್ಪತ್ತು ವರ್ಷಗಳು ಉರಳಿದರೆ ಸಂಸ್ಕೃತಿಯ ಗಂಧವೇ ಇಲ್ಲದ ಸಮಾಜ ಸೃಷ್ಟಿಯಾಗುವುದರಲ್ಲಿ ಸಂಶಯವೇ ಇಲ್ಲ. ಆದರಿಂದ ಪ್ರತೀ ಸಮಾಜದಲ್ಲೂ ಒಬ್ಬೊಬ್ಬ ಮಾರ್ಗದರ್ಶಿ ಗುರುಗಳು ಇರಬೇಕೆಂದು ಸಂಗಾತಿಯ ಬಯಕೆ. ಈ ರೀತಿ ಪ್ರತಿ ಸಮಾಜವು ಎಚ್ಚರಗೊಳ್ಳದೆ ಹೋದರೆ ನಮ್ಮ ಸಂಸ್ಕೃತಿಯ ಅವಸಾನ ಬಹಳ ದೂರವಿಲ್ಲ.

ಹೆಣ್ಣ್‌ನ ಸಾಕತ್

ಜೊಲ್ಲು ಸುರಿವ ಬಾಯಿಲಿ
ಅಯ್ಯೊ, ಅಯ್ಯೊ ಅಂತ
ಹೇಳ್ಸುವ ಹೆಣ್ಣ್

ಅದ್ ಹೆಣ್ಣ್‌ನ ತಾಕತ್ತ್
ಎಲ್ಲಾನ ಕಲ್ಸಿದ
ಎಲ್ಲನ ತಿಳ್ಸಿದ

ಗುಂಡ್‌ಕಲ್ಲಿಗೆ
ಜೀವನೇ ಕೊಟ್ಟೆ
ಗತಿ ಇಲ್ಲದವುಕೆ

ನೀ ಮತಿ ಕೊಟ್ಟೆ
ಗಂಡ್ ಹೆಣ್ಣ್ ಆಗಿ
ಹೆಣ್ಣ್ ಗಂಡ್ ಆಗಿ ಬಾಳ್ದೆ

ನಂಗೆ ಯಾಕೆ ಪೆರ್ಚುದು
ಶೀಲ ತಾಳ್ಮೆನ ಕಲ್ಲ್ ಕಟ್
ಗಟ್ಟಿಯಾನ ಯಾರ್ ನಿನ್ನ ಕ್ಯಾರ್ ಮಾಡುವೆ?

ಪ್ರಕೃತಿನು ಹೆಣ್ಣಲ್ಲನಾ?
ಜಗತ್ತ್‌ನ ಮೂಲವೇ ಹೆಣ್ ಅಲ್ಲನಾ?
ಬುದ್ಧಿ, ಪ್ರತಿಭೆನ ಕಟ್ಟೆ ಹಾದಕೆ

ಹೆಣ್‌ನ ತಾಕತ್ ನೀ ಆಗಿ
ನೀ ಆಗ್‌ವಿಶ್ವಕೆ ಶಕ್ತಿಯಾಗ್

-ರಚನೆ ಶ್ರೀಮತಿ ಲಲಿತಾಜ ಮಲ್ಲಾರ.

63. ದುರ್ವಿಯೋಚನ 64. ಸುನಾಭ 65.ಅಯೋಬಾಹು

ಸುಂದರ ಕೊಡಗು ನಾಡಿನಲ್ಲಿ ಅರಳಿದ ಪ್ರತಿಭೆ

ಪ್ರಪ್ರಥಮ ಲೇಡಿ ಲೆಫ್ಟಿನೆಂಟ್ ಪೂಜಾ ವಸಂತ



ಕೊಡಗಿನ ಮತ್ತು ದಕ್ಷಿಣ ಜಿಲ್ಲೆಯ ಹತ್ತು ಕುಟುಂಬ ಹದಿನೆಂಟು ಗೋತ್ರದ ಅರೆಗನ್ನಡ ಭಾಷಿಕ ಗೌಡಜನಾಂಗದ ಮಹಿಳೆ ಕು|| ಕುಯ್ಯಮುಡಿ ಪೂಜಾ ವಸಂತನವರು ಭಾರತೀಯ ಭೂದಳಕ್ಕೆ ಸೇರ್ಪಡೆಗೊಂಡ ಮೊಟ್ಟ ಮೊದಲ ಮಹಿಳಾ ಮಣಿಯಾಗಿರುವುದು ಗೌಡ ಸಮುದಾಯಕ್ಕೆ ಹಾಗೂ ಕೊಡಗು ನಾಡಿಗೆ ಕೀರ್ತಿ ತಂದಿದೆ. ಇವಳು ಭಾರತೀಯ ಆರ್ಮೀಸ್ ಆರ್ಡಿನೇನ್ಸ್ ಕ್ರಾಪ್ಸ್‌ನಲ್ಲಿ ಸೇವೆಸಲ್ಲಿಸುತ್ತಿರುವರು. ಇವಳು ಕುಯ್ಯಮುಡಿ ಕೆ. ವಸಂತ ಮತ್ತು ಶಾಂತಿಯವರ ಮಗಳಾಗಿದ್ದು, ಇವರ ತಂದೆ ಕುಯ್ಯಮುಡಿ ವಸಂತನವರು ನಿವೃತ್ತ D.G.M. (NGE) ಉದ್ಯೋಗಿ ಹಾಗೂ ತಾಯಿ ವಿಮಲ ನಿವೃತ್ತ DYSPಕಾಳೇರಮ್ಮನ ನಾಣಯ್ಯನವರ ಮಗಳು. ಪೂಜಾರವರು ದಿನಾಂಕ 18-10-1978 ರಲ್ಲಿ ಅವಳಿ ಜವಳಿ ಮಕ್ಕಳಲ್ಲಿ ಒಬ್ಬಳಾಗಿ ಜನಿಸಿದಳು.

ಪೂಜಾಳು ತನ್ನ ಬಾಲ್ಯದ ವಿದ್ಯಾಭ್ಯಾಸವನ್ನು 1 ರಿಂದ 9 ನೇ ತರಗತಿಯವರೆಗೆ ಚೆನ್ನೈನಲ್ಲಿಯೂ, 9 ರಿಂದ 12 ನೇ ತರಗತಿಯವರೆಗೆ ನವದೆಹಲಿಯಲ್ಲಿಯೂ, ಬಿ.ಕಾಂ. ಪದವಿ (ಹಾನರ್ಸ್) ಅನ್ನು ನವದೆಹಲಿಯಲ್ಲಿಯೂ ಪೋಸ್ಟ್ ಡಿಪ್ಲೋಮಾ ಮತ್ತು ಪರ್ಸನಲ್ ಮ್ಯಾನೇಜ್‌ಮೆಂಟ್ ಹಾಗೂ ಎಚ್. ಆರ್.ಡಿ. ಯನ್ನು ಭಾರತೀಯ ವಿದ್ಯಾಭವನ ಮುಂಬೈನಲ್ಲಿಯೂ ಪಡೆದಳು.

ಮಧ್ಯ ಪ್ರದೇಶದ ಭೂಪಾಲ್‌ನಲ್ಲಿರುವ ಸರ್ವೀಸ್ ಸೆಲೆಕ್ಷನ್ ಬೋರ್ಡು O.T.S. ಗೆ ಆಯ್ಕೆಯಾದಳು. ತದನಂತರ ಚೈನ್ನೈನ ಮಿಲಿಟರಿ ಟ್ರೈನಿಂಗ್ ಇನ್ ಆಫೀಸರ್ಸ್ ಟ್ರೈನಿಂಗ್ ಸ್ಕೂಲ್‌ನಲ್ಲಿ ತರಬೇತಿ ಪಡೆದು ದಿನಾಂಕ 7-9-2002 ರಲ್ಲಿ ಪೂಜಾಳು ತನ್ನ ತರಬೇತಿ ಮುಗಿಸಿ, ಲೆಫ್ಟಿನೆಂಟ್ ಆಗಿ ಭಾರತೀಯ ಭೂದಳಕ್ಕೆ ಖಾಯಂ ಆಫೀಸರ್ ಆಗಿ ಸೇರ್ಪಡೆಗೊಂಡಳು. ತುಂಬಾ ಚುರುಕಿನ ಚುತುರತೆಯಾದ ಈಕೆಯು ತನ್ನ ಅಭ್ಯಾಸದ ಸಮಯದಲ್ಲಿ ತನ್ನ ಅಕಾಡೆಮಿಯ "ಫ್ಲೈಯಿಂಗ್ ಕಲರ್ಸ್" ಪಡೆದು ಪಾಸಾದ ಕೀರ್ತಿ ಇವಳದು.

ತರಬೇತಿಯ ನಂತರ ಈಕೆಯನ್ನು ರಾಜಸ್ಥಾನದ ಬಾರ್ಡರ್ ಏರಿಯಾಗೆ ವರ್ಗಾಯಿಸಲಾಯಿತು. ಪ್ರಸ್ತುತದಲ್ಲಿ ಈಕೆ ಜಾರ್ಖಂಡ್ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವಳು.

ಲೆಫ್ಟಿನೆಂಟ್ ಪೂಜಾಳು ತನ್ನ ಪೋಷಕರಿಗೂ, ಕುಯ್ಯುಮುಡಿ ಮನೆತನಕ್ಕೂ ಜನಾಂಗಕ್ಕೂ, ಜಿಲ್ಲೆಗೂ, ರಾಜ್ಯಕ್ಕೂ ಕೀರ್ತಿ ತಂದಿರುವ ಈಕೆ ಕುಯ್ಯುಮುಡಿ ಕುಟುಂಬದ ಮೂರನೇ ಆರ್ಮಿ ಆಫೀಸರ್ ಆಗಿ ನೇಮಕವಾಗಿದ್ದು ನಿಜಕ್ಕೂ ಪ್ರಶಂಸನೀಯ ಹಾಗೂ ಹೆಮ್ಮೆ ಪಡುವಂತದಾಗಿದೆ. ಈ ಹಿಂದೆ 2 ನೇ ಜಾಗತಿಕ ಯುದ್ಧದಲ್ಲಿ ಕುಯ್ಯುಮುಡಿ ಸುಬ್ಬಯ್ಯನವರು ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿದ್ದರು. ತದನಂತರ ಇವರ ಮಗ ಲೆಫ್ಟಿನೆಂಟ್ ಕರ್ನಲ್ ಆಗಿ ಸೇವೆ ಸಲ್ಲಿಸಿ ಈಗ ಬೆಂಗಳೂರಿನಲ್ಲಿ ನಿವೃತ್ತಿ ಜೀವನ ನಡೆಸುತ್ತಿರುವರು.

ಲೆಫ್ಟಿನೆಂಟ್ ಪೂಜಾ ತನ್ನ ಧೈರ್ಯ, ನಿಷ್ಠೆ, ದೃಢಚಿತ್ತದಿಂದ ಭಾರತೀಯ ಭೂದಳಕ್ಕೆ ಸೇವೆ ಸಲ್ಲಿಸಿ ಉನ್ನತ ಪದವಿಗೇರಿ ಜನಾಂಗಕ್ಕೂ, ನಾಡಿಗೂ ಕೀರ್ತಿ ತರಲೆಂಬುದಾಗಿ ಕುಲದೇವತೆ ವೆಂಕಟರಮಣ ಮತ್ತು ತಾಯಿ ಶೃಂಗೇರಿ ಶಾರದಾಂಬೆಯರ ಕೃಪಾಕಟಾಕ್ಷ ಸದಾ ಇರಲೆಂದು ಸಂಗಾತಿ ಈ ಸಂದರ್ಭದಲ್ಲಿ ಶುಭ ಹಾರೈಸುತ್ತದೆ.

ಲೇಖನ: ಪಟ್ಟಡ ಪ್ರಭಾಕರ, ಗೌ. ಸಂಪಾದಕ, ಕೊಡಗು ಸಂಗಾತಿ.

ತಕ ಕನ್ನಡ

ಕೇಳಿ ಕಣೆ ! ಕಾಡ್ಕೋಳಿ ಕೂಂಗಿದೆ, ಕಳಿಕಣೆ!
ಕಾಡೊಳಗೆ ಕಾಡ್ಕೋಳಿ ಕೂಂಗಿದೆ ಕೇಳಿ ಕಣೆ!
ಕೂಂಗಿದೆ ಕಾಡ್ಕೋಳಿ ಹೂಂಜ, ಕೇಳಿಕಣೆ.

ರೆಂಕೆನ ಟಪಟಪ ಬಡ್‌ದ್
ಕುತ್ತಿಗೇನ ನೀಂಟಾ ಎತ್ತಿ
ಬಲವಾಗಿ ರೆಕ್ಕೆ ಬಡ್‌ಡ್,
ತೆಕ್ಕ್ ತೆರೆತೆಕ್ಕ್, ತಕ್ಕ್‌ತೆರೆ ತೆಕ್ಕ್‌ತ,
ಕೂಂಗಿದೆ ಕಾಡ್ಕೋಳಿ ಕೂಂಗಿದೆ,

ಬೆಡಿನ ಮೆಟ್ಟ್‌ಲಿಟ್ಟ್ ಬಿಲ್ಲ್ ಕರೆಲಿಟ್ಟ್,
ಕೆಬಿ ಮುಚ್ಚದಿದ್ದ್,ಮನ್ಸ್ ಕಯಿಲಿದ್ದ್,
ನೀವೆಲ್ಲಾ ಬನ್ನಿ, ಓಡ್ಯೋಡಿ ಬನ್ನಿ ಕೇಳಿಕಣೆಕೇಳಿ

ಕೇಳಿ ಕಣೆ, ಕಾಡ್ಕೋಳಿ ಕೂಂಗಿದೆ ಕೇಳಿ ಕಣೆ
ಬೆಪ್ಪರ ಹಂಗೆ ಕುದ್ದದ್-ಯಾಕೆ?
ಕೆಪ್ಪರ ಹಂಗೆ ನೋಡುದು-ಯಾಕೆ?

ಅದ್ ಹೇಳ್‌ದು ಗೊತ್ತಾತೊ ನೀವ್‌ಗೆ?
ಹೇಳ್ತೊಂದ್ ಕೇಳಿರೇ ಇಂಬಾದು ನಾವ್ಗೆ
ತಕೊಣಕಡ! ಎಂತದರ ಹೇಳ್ದು ಕಾಡ್ಕೋಳಿ?

ಕನ್ನಡಲಿ ಹೇಳ್ದೆ ಅದ್! ಕೆಬಿ ಕೊಟ್ಟ್‌ಕೇಳಿ
ಗೌಡ ಗನ್ನಡದೆಲ್ಲ ಹರಳಿಲ್ಲಿ ಚೆಲ್ಲಿ
ದರ್ಗಡಿಲಿ ಹೊಕ್ಕುಟ್ಟು! ಹುಡ್ಕಿ ಹೆರ್ಕಿಕಣೆ

ಬರಿ ಪಳಮೆ, ಹಾಳಾಟ, ಹೋರಾಟ ಬೇಕೋ?
ಹೈದಂಗ ಗೂಡೆಗ ಕೇಳ್‌ಸದೇ ಕೆಪ್ಪರಾಕೊ?
ತಕೋ, ತಕಣೆ! ತಕೊ! ತಕಣೆ! ತಕೊ, ಹೆರ್ಕಿ ತಗಣೆ

ಕಾಡ್ಕೋಳಿ ಹೇಳ್ದಲೇ! ಕನ್ನಡನ ಹೆರ್ಕಿಕೊ
ಗೌಡ ಕನ್ನಡನ-ಬಾ, ಬಂದ್ ಬಾಚಿಕೋ

-ಎಂ. ಬಿ. ಶಿವರಾಯ

66.ಮಹಾಬಾಹು 67.ಚಿತ್ರಾಂಗ 68.ಬಳಾರೆ

ಕೇಂದ್ರದ ಹಿಂದುಳಿದ ಪಟ್ಟಿಗೆ ಗ್ರಾಮೀಣ ಗೌಡ ಜನಾಂಗ. ಕರ್ನಾಟಕದ ಗ್ರಾಮೀಣ ಗೌಡ (Gouda or Gowda)

ಜನಾಂಗವನ್ನು ಕೇಂದ್ರ ಸರ್ಕಾರವು ಹಿಂದುಳಿದ ವರ್ಗಗಳ ಪಟ್ಟಿಗೆ ಇತ್ತೀಚೇಗೆ ಸೇರಿಸಿದೆ.

ಕರ್ನಾಟಕ ಸೇರಿದಂತೆ ಎಂಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ೨೨ ಜನಾಂಗಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಹಿಂದುಳಿದ ವರ್ಗದ ಮೇಲಿನ ರಾಷ್ಟ್ರೀಯ ಮಂಡಳಿ ಶಿಫಾರಸಿನ ಮೇರೆಗೆ ಇತ್ತೀಚೆಗೆ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆ ಅನುಮೋದನೆ ನೀಡಿತು.

ಇದರನ್ವಯ ಈ ೨೨ ಜಾತಿ ಹಾಗೂ ಜನಾಂಗಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರದ ಉದ್ಯೋಗದಲ್ಲಿ ವಿಶೇಷ ಸವಲತ್ತು ಪಡೆದುಕೊಳ್ಳಲಿವೆ. ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು (ಎನ್‌ಸಿಬಿಸಿ) ಕರ್ನಾಟಕದಲ್ಲಿ ಒಕ್ಕಲಿಗ ಸಮುದಾಯ ಸೇರಿದಂತೆ ಆಂಧ್ರ ಪ್ರದೇಶ, ಹರಿಯಾಣ, ಒರಿಸ್ಸಾ, ರಾಜಸ್ತಾನ, ಪಶ್ಚಿಮ ಬಂಗಾಳ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ ಮತ್ತು ಚಂಡೀಗಡದ ಕೆಲ ಜನಾಂಗಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಿತ್ತು. ಆಯೋಗದ ಶಿಫಾರಸನ್ನು ಪರಿಗಣಿಸಿ ಕೇಂದ್ರ ಸಂಪುಟವು ಈ ಕುರಿತು ನಿರ್ಧಾರ ಕೈಗೊಂಡಿತ್ತು.

ದೆಹಲಿಯ ಜುಲಾಹ-ಅನ್ಸಾರಿ, ಇದ್ರಿಶಿ, ನದ್ದಾಫ್-ಮನ್ಸೂರಿ ಹಾಗೂ ಸಾಲ್ಮಾನಿ ಸೇರಿದಂತೆ ನಾಲ್ಕು ಜನಾಂಗಗಳು, ರಾಜಾಸ್ತಾನದ ಸಿಲಾವತ್, ಆಂಧ್ರ ಪ್ರದೇಶದ ತುರುಪು ಕಾಪು, ಹರಿಯಾಣದ ಲೂಧಿ, ಒರಿಸ್ಸಾದ ಗೋಪ, ಸದಗೋಪ, ದುಮಾಲ್‌ಗೌಡ, ರಂಗಾನಿ, ತಂಟಿ-ರಂಗಾನಿ, ತಂಟೀ-ರಂಗಾನೇ, ತಂಟೀ-ರಂಗೀನಿ, ತನಿ-ರಂಗೂನಿ ತಂಟಿ, ಪಂಡರಮಾಲಿ- ಮುನಿ, ಮತ್ತು ರಾವುಲಾ ಹಾಗೂ ಕಲಾಲ್, ಪಶ್ಚಿಮ ಬಂಗಾಳದ ನಷ್ಯ-ಸೆಖ್ ಹಾಗೂ ಶೇರ್ ಬಾಡಿಯಾ, ಚಂಡಿಗಡದ ಯಾದವ್-ಎರಿ ಸಮುದಾಯಗಳು ಇದೀಗ ಹಿಂದುಳಿದ ವರ್ಗಕ್ಕೆ ಸೇರಿಸಲ್ಪಟ್ಟಿರುವುದಾಗಿ ತಿಳಿದು ಬಂದಿದೆ.

ಆರ್ಥಿಕವಾಗಿ ಹಿಂದುಳಿದ ಜನಾಂಗಗಳಿಗೆ ವಿಶೇಷ ಸವಲತ್ತು ಕಲ್ಪಿಸಲು ವಾಜಪೇಯಿ ನೇತೃತ್ವದ ಭಾರತೀಯ ಜನತಾಪಕ್ಷ ಈ ತೀರ್ಮಾನ ಕೈ ಗೊಂಡಿದೆಯಾದರೂ ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ ಎಂದು ಅಭಿಪ್ರಾಯ ಪಡಲಾಗಿದೆ.

ಪಶ್ಚಿಮ ಘಟ್ಟ ಪ್ರದೇಶದ ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದ ಅರೆಗನ್ನಡ ಭಾಷಿಕ ಈ ಗ್ರಾಮೀಣ ಗೌಡ ಜನಾಂಗವು ಈಗ ಕೇಂದ್ರದ ಹಿಂದುಳಿದ ಪಟ್ಟಿಗೆ ಸೇರ್ಪಡೆಯಾಗಿದೆ.

: ಸಂಗಾತಿ

ಗೌಡ ಜಾತಿ ಕೇಂದ್ರದ ಒ.ಬಿ.ಸಿ. ಪಟ್ಟಿಗೆ.

ಗೌಡ ಯುವ ಸೇವಾ ಸಂಘ ಸ್ವಾಗತ

10 ಕುಟುಂಬ 18 ಗೋತ್ರದ ಗೌಡ ಜಾತಿಯನ್ನು ಕೇಂದ್ರ ಸರಕಾರವು ಇತರ ಹಿಂದುಳಿದ ಜಾತಿ (ಒ.ಬಿ.ಸಿ.) ಪಟ್ಟಿಗೆ ಸೇರಿಸಿರುವುದನ್ನು ಸುಳ್ಯ ತಾಲ್ಲೂಕು ಗೌಡ ಯುವ ಸೇವಾ ಸಂಘ ಸ್ವಾಗತಿಸಿದೆಯಲ್ಲದೆ ಇದಕ್ಕಾಗಿ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರವನ್ನು ಅಭಿನಂದಿಸಿದೆ.

ಜೂ. 7 ರಂದು ವೆಂಕಟ್ರಮಣ ಕೆಡಿಟ್ ಕೋ. ಆಪರೇಟಿವ್ ಬ್ಯಾಂಕ್‌ನಲ್ಲಿ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಂಘದ ಪದಾಧಿಕಾರಿಗಳು "ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ ಮತ್ತು ಕೊಡಗು ಜಿಲ್ಲೆಯಲ್ಲಿ ವಾಸಿಸುವ ಅರೆಗನ್ನಡ ಹಾಗೂ ತುಳು ಮಾತನಾಡುವ ಗೌಡರು ಹತ್ತು ಕುಟುಂಬ 18 ಗೋತ್ರದವರಾಗಿದ್ದು ನಾವು ಒಕ್ಕಲಿಗರಲ್ಲ. ಸಾಂಸ್ಕೃತಿಕವಾಗಿಯೂ ಪ್ರತ್ಯೇಕ ಇತಿಹಾಸ ಹೊಂದಿದವರು. ನಮ್ಮ ಜಾತಿಯನ್ನು ಒಬಿಸಿ ಪಟ್ಟಿಗೆ ಸೇರಿಸಬೇಕೆಂದು 1980 ರಿಂದಲೇ ಪ್ರಯತ್ನ ಆರಂಭವಾಗಿತ್ತು. 1998 ರಲ್ಲಿ ಕೇಂದ್ರ ಸರಕಾರ ನೇಮಿಸಿದ ಬೆಂಜಮಿನ್ ಆಯೋಗಕ್ಕೆ ಈ ಬಗ್ಗೆ ಮನವರಿಕೆ ಮಾಡಲಾಗಿತ್ತು. 2000 ಇಸವಿಯಲ್ಲಿ ರಾಜ್ಯ ಸರಕಾರ ನೇಮಿಸಿದ ರವಿವರ್ಮ ಕುಮಾರ್ ಹಿಂದುಳಿದ ವರ್ಗದ ಆಯೋಗಕ್ಕೆ ಎಂ. ಆರ್. ಬಾಲಕೃಷ್ಣರ ನೇತೃತ್ವದಲ್ಲಿ ನಾವು ಹೋಗಿ ಮನವಿ ಕೊಟ್ಟು ಮನವರಿಕೆ ಮಾಡಿದ್ದೆವು. ಹಿಂದೆ ನಾವು ಒಕ್ಕಲಿಗ ಗೌಡರೊಂದಿಗೆ ಗುರುತಿಸಿಕೊಳ್ಳಬೇಕಾಗಿತ್ತು. ಯಾಕೆಂದರೆ ನಮಗೆ ಗೌಡ ಜಾತಿಯ ಸರ್ಟಿಫಿಕೇಟ್ ಸಿಗುತ್ತಿರಲಿಲ್ಲ. ಒಕ್ಕಲಿಗ ಎಂದು ಮಾತ್ರ ಸಿಗುತ್ತಿತ್ತು. ಜಾತಿ ಸರ್ಟಿಫಿಕೇಟ್ ಸಿಗದಿದ್ದುದರಿಂದ ನಮ್ಮ ಜನಾಂಗದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿತ್ತು. ಕೇಂದ್ರ ಸರಕಾರದ ಉದ್ಯೋಗಕ್ಕೆ ಸೇರುವಾಗ ಹಿಂದುಳಿದ ವರ್ಗದ ಮೀಸಲಾತಿ ಸಿಗುತ್ತಿರಲಿಲ್ಲ. ಈಗ ಕೇಂದ್ರ ಸರಕಾರವು ನಮ್ಮ ಗೌಡ (Gouda/Gowda) ಜಾತಿಯನ್ನು ಒಬಿಸಿ ಪಟ್ಟಿಗೆ ಸೇರಿಸಿರುವುದರಿಂದ ನಮ್ಮ ಜಾತಿಗೆ ಪ್ರತ್ಯೇಕ ಅಸ್ತಿತ್ವ ಕಲ್ಪಿಸಿದಂತಾಗಿದೆ. ಇನ್ನು ಮುಂದೆ ಜಾತಿ ಸರ್ಟಿಫಿಕೇಟಿಗೆ ನಮಗೆ ಸಮಸ್ಯೆ ಯಾಗುವುದಿಲ್ಲ. ಕೇಂದ್ರ ಸರಕಾರದ ಉದ್ಯೋಗದಲ್ಲಿ ಮೀಸಲಾತಿ ಸಿಗುತ್ತದೆ. ರಾಜಕೀಯವಾಗಿಯೂ ಹೆಚ್ಚಿನ ಪ್ರಾತಿನಿಧ್ಯಕ್ಕೆ ಅವಕಾಶವಾಗುತ್ತದೆ ಎಂದು ಅವರು ತಿಳಿಸಿದರು. ನಮ್ಮನ್ನು ವರ್ಗ 2 ಕ್ಕೆ ಸೇರಿಸಲು ರಾಜ್ಯ ಸರಕಾರಕ್ಕೆ ನಾವು ಮನವಿ ಸಲ್ಲಿಸಿದ್ದೇವೆ ಎಂದೂ ಅವರು ಹೇಳಿದರು. ಆಯೋಗಗಳಿಗೆ ವಿಷಯವನ್ನು ಮನವರಿಕೆ ಮಾಡುವಲ್ಲಿ ನೇತೃತ್ವ ವಹಿಸಿದ ಮಾವಾಜಿ ಬಾಲಕೃಷ್ಣ ಗೌಡರನ್ನು ಈ ಸಂದರ್ಭದಲ್ಲಿ ಅವರು ಸ್ಮರಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಗೌಡ ಯುವ ಸೇವಾ ಸಂಘದ ಅಧ್ಯಕ್ಷ ಕೆ. ಸಿ. ನಾರಾಯಣ ಗೌಡ, ಮಹಾತ್ಮಗಾಂಧಿ ಮಲ್ನಾಡ್ ಪ್ರೌಢಶಾಲೆಯ ಸಂಚಾಲಕ ಚಂದ್ರ ಕೋಲ್ಚಾರ್, ವೆಂಕಟ್ರಮಣ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಪಿ.ಸಿ. ಜಯರಾಮ್, ದಿನೇಶ್ ಮಡಪ್ಪಾಡಿ, ಮದುವೆಗದ್ದೆ, ಬೋಜಪ್ಪ ಗೌಡ ನಿತ್ಯಾನಂದ ಮುಂಡೋಡಿ, ಕುರುಂಜಿ ಗಂಗಾಧರ ಕೆ.ವಿ. ಹೇಮನಾಥ, ಕುಕ್ಕೆಟ್ಟಿ ಮಾಧವಗೌಡ, ಪಿ. ಎಸ್. ಗಂಗಾಧರ, ಎಸ್. ಆರ್. ಸೂರಯ್ಯ, ನಾರ್ಕೋಡು ದಾಮೋದರ ಗೌಡ, ಕೆ.ಟಿ. ವಿಶ್ವನಾಥ, ದೊಡ್ಡಣ್ಣ ಬರಮೇಲು, ಸದಾನಂದ ಮಾವಾಜಿ, ಕೊಡಗು ಗೌಡ ಅಕಾಡೆಮಿ ಸಾಂಸ್ಕೃತಿಕ ಅಧ್ಯಕ್ಷ ತುಂತಜೆ ಗಣೇಶ್ ಮೊದಲಾದವರು ಉಪಸ್ಥಿತರಿದ್ದರು.

- ಕೆ.ಆರ್. ಗಂಗಾಧರ ಗೌಡ, ಅರಂತೋಡು.

69.ಚಿತ್ರಕುಂಡಲ 70.ಭೀಮವೇಗ 71.ಭೀಮಬಳ

ಕೊಡಗು ಮತ್ತು ದ. ಕ. ಜಿಲ್ಲಾ ಗೌಡ ಅಭಿವೃದ್ಧಿ ಸಮಾಜದ ಅಧ್ಯಕ್ಷ ಎಂ. ಪಿ. ಉಮೇಶ್ ಸ್ವಾಗತ.

ದಕ್ಷಿಣ ಕರ್ನಾಟಕದಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬಹುಸಂಖ್ಯಾತರಾಗಿರುವ ಗೌಡ ಜಾತಿಯನ್ನು ಇತರ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿ ಕೇಂದ್ರ ಸರಕಾರ ಹೊರಡಿಸಿದ ಆದೇಶವನ್ನು ದ. ಕ. ಮತ್ತುಕೊಡಗು ಗೌಡ ಸಮಾಜ ಅಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಪಿ. ಉಮೇಶ್ ಹಾರ್ದಿಕವಾಗಿ ಸ್ವಾಗತಿಸಿ ಕೇಂದ್ರ ಸರಕಾರವನ್ನು ಅಭಿನಂದಿಸಿದ್ದಾರೆ. ಬಹುತೇಕ ಬಡ ಹಾಗೂ ಹಿಂದುಳಿದ ಜನಾಂಗದವರಾದ ದ.ಕ. ಮತ್ತು ಕೊಡಗು ಜಿಲ್ಲೆಯ ಗೌಡ ಜಾತಿಯವರನ್ನು ಹಿಂದುಳಿದ ವರ್ಗದವರೆಂದು ಕೇಂದ್ರ ಸರಕಾರ ಪರಿಗಣಿಸಿ ಹೊರಡಿಸಿದ ಆದೇಶ ನಮ್ಮ ಜನಾಂಗದವರಿಗೆ ಒಂದು ವರವಾಗಿ ಮೂಡಿ ಬಂದಿದೆ. ಈ ದಿಸೆಯಲ್ಲಿ ಎಲ್ಲಾ ದಾಖಲೆಗಳೊಂದಿಗೆ, ನಿರಂತರವಾಗಿ ಕಳೆದ 5 ವರ್ಷಗಳಿಂದ ನಮ್ಮ ಬೇಡಿಕೆಯನ್ನು ಆಯೋಗಗಳ ಮುಂದೆ ಸಮರ್ಥವಾಗಿ ಮಂಡಿಸಿ ಮನದಟ್ಟು ಮಾಡುವಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ನೇತೃತ್ವವನ್ನು ವಹಿಸಿದ ಎಂ. ಆರ್. ಬಾಲಕೃಷ್ಣ ಗೌಡರಿಗೂ, ಜನಪ್ರತಿನಿಧಿಗಳಿಗೂ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಿದ್ದಾರೆ.

ಕೇಂದ್ರ ಸರಕಾರ ಹೊರಡಿಸಿದ ಆದೇಶಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ಸರಕಾರವು ಕೂಡ ಪ್ರತ್ಯೇಕ ಆದೇಶವನ್ನು ಹೊರಡಿಸಿ ನಮ್ಮ ಜನಾಂಗದ ಬಡ ಜನತೆಯ ಏಳಿಗೆಗೆ ಕಾರಣರಾಗಬೇಕಾಗಿ ಅವರು ಆಗ್ರಹಪಡಿಸಿದ್ದಾರೆ.

-ಕೆ. ಆರ್. ಗಂಗಾಧರ ಗೌಡ.

ಕಣ್ಮರೆಯಾಗುತ್ತಿರುವ 'ಆಟಿ ಕಳೆಂಜ'



ಒಂದು ಕಾಲದಲ್ಲಿ ಆಟಿ ತಿಂಗಳು ಎಂದರೆ ಎಲ್ಲದಕ್ಕೂ ನಿಷಿದ್ಧವಿತ್ತು. ಮಳೆ ಸುಖಗಳ ಮಧ್ಯದಲ್ಲಿ ಬರುವ ಈ ತಿಂಗಳಲ್ಲಿ ಮಳೆ ಆಡಿ ಆಡಿ ಬರುತ್ತದೆ ಎಂಬುದು ರೂಢಿ ಮಾತು. ಬದಲಾದ ಇಂದಿನ ಕಾಲದಲ್ಲಿ ಆಟಿ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ಮುಸಲಧಾರೆಯೆ ಸುರಿದರೆ, ಹೆಮ್ಮರವನ್ನು ಹೊರಳಿಸುವ ಬಿರುಗಾಳಿ, ಚಟ-ಚಟ ಶಬ್ದ ಮಾಡುವ ಗುಡುಗು, ಕಣ್ಣು ಕೋರೈಸುವ ಸಿಡಿಲು-ಮಿಂಚು, ಇವೆಲ್ಲದಕ್ಕೂ ಆಟಿ ತಿಂಗಳು ಸ್ಥಾನ ಪಡೆದುಕೊಂಡಿದೆ.

ಸೌರಮಾನದ ಕರ್ಕಾಟಕ ಮಾಸವೇ ಆಟಿ. ತುಳುನಾಡಿನವರಿಗೆ ಆಟಿ ತಿಂಗಳು ಅನಿಷ್ಟ. ಈ ತಿಂಗಳಿನಲ್ಲಿ ಸೃಷ್ಟಿಯಾದರೆ ಅದರಿಂದ ಕೇಡು ಬಂದೀತೆಂದು ನಂಬಿಕೆ. ಯಾವುದೇ ಶುಭ ಕಾರ್ಯಕ್ಕೆಈ ತಿಂಗಳಲ್ಲಿ ತುಳುನಾಡಿನ ಜನರು ಕೈ ಹಾಕುವುದಿಲ್ಲ. ಹೊಸ ಮದುವೆಯಾದ ಜೋಡಿಗಳು ಈ ತಿಂಗಳಲ್ಲಿ ಬೇರೆ ಬೇರೆಯಾಗಿರಬೇಕೆನ್ನುವ ನಂಬಿಕೆಯಿಂದ ಮಗಳನ್ನು ತವರು ಮನೆಗೆ ಕರೆತರುವುದು ಸಂಪ್ರದಾಯ. ಗಿಡನೆಡುವುದಿರಲಿ, ಬಿತ್ತನೆ ಪ್ರಾರಂಭಿಸುವುದಿರಲಿ ಎಲ್ಲವನ್ನು ಮುಂಚಿತವಾಗಿ ಯಾ ಆಟಿ ಕಳೆದು ಪ್ರಾರಂಭಿಸುತ್ತಾರೆ. ಅನಿಷ್ಟ ಕಳೆಯಲು ಜನಪದ ಬದುಕಿಗೆ ಜೀವ ತರುತ್ತಾರೆ.

ಆಟಿ ತಿಂಗಳಲ್ಲಿ ತುಳು ನಾಡಿನಲ್ಲಿ ಸುಮಾರು 40 ಕ್ಕೂ ಹೆಚ್ಚು ಜನಪದ ಕುಣಿತಗಳಿದ್ದು, ಅವುಗಳಲ್ಲಿ 'ಆಟಿ ಕಳೆಂಜ' ಮಹತ್ವ ಸ್ಥಾನ ಪಡೆದಿದೆ. ಆಯಾಯ ಪ್ರದೇಶಕ್ಕನುಗುಣವಾಗಿ ಆಟಿ ಕಳೆಂಜನ ವೇಷಭೂಷಣಗಳಲ್ಲಿ ಬದಲಾವಣೆ ಇರುತ್ತದೆ. ಮುಖ್ಯವಾಗಿ ಸುಳ್ಯ, ಪುತ್ತೂರು, ಬಂಟ್ವಾಳ್, ಬೆಳ್ತಂಗಡಿ, ಮಂಗಳೂರು, ಕಾಸರಗೋಡು ಹೀಗೆ ಬೇರೆ ಬೇರೆ ಕಡೆಯಲ್ಲಿ ಅದರದ್ದೇ ಆದ ಜಾನಪದಿಯ ಹಿನ್ನಲೆಯಲ್ಲಿ ಆಟಿ ಕಳೆಂಜ ಕಾಣಿಸಿಕೊಳ್ಳುತ್ತದೆ. ಭೂತನರ್ತನ ಮಾಡುವ ನಲ್ಕೆ ಜನಾಂಗದವರು ಆಟಿ ಕಳೆಂಜ ಕಟ್ಟುತ್ತಾರೆ. ವೃತ್ತಿ ಕಲಾವಿದರಾದ ಇವರು ಭೂತವನ್ನೇ ಹೋಲುವ ವೇಷ ಕಟ್ಟುತ್ತಾರೆ. ಕೆಂಪು, ಕಪ್ಪು ಬಿಳಿ, ಚುಕ್ಕೆಗಳಿಂದ ಚಿತ್ತಾರ, ಕಾಲಿಗೆ ಗೆಜ್ಜೆ, ಕೈಗೆ ಬಳೆ, ತೊಟ್ಟುಕೊಳ್ಳುತ್ತಾರೆ. ಕಳಂಜ ಕಟ್ಟಿದಾತನ ಜೊತೆಯಲ್ಲಿ ಓರ್ವ ದುಡಿ ಬಾರಿಸುವವ, ಇನ್ನೋರ್ವ ಸ್ತ್ರೀ ಸಹಾಯಕರಾಗಿರುತ್ತಾರೆ. ದುಡಿ ಬಾರಿಸುತ್ತಾ ಹಾಡು ಹೇಳಿದಾಗ ಕಳೆಂಜ ಲಯಬದ್ಧ ನರ್ತನ ಮಾಡುತ್ತದೆ.

ಮನೆಯಂಗಳಕ್ಕೆ ಬಂದು ಕುಣಿದು ಮನೆಯವರನ್ನು ಸಂತೋಷಗೊಳಿಸಿದ್ದಕ್ಕೆ ಏನಾದರೂ ದಾನ ಮಾಡುವುದು ಹಳ್ಳಿ ಮಂದಿಯ ಸಂಪ್ರದಾಯ ಹಾಗೂ ವಿಶಿಷ್ಟತೆ ಪಡೆಯುತ್ತದೆ. ಅಕ್ಕಿ, ಬೇಯಿಸಿ ಒಣಗಿಸಿದ ಹಲಸಿನ ಬೀಜ, ಅರಿಸಿನ, ಉಪ್ಪು, ಮೆಣಸು, ಮಸಿ ಇವುಗಳನ್ನು ಕೊಡಲೇಬೇಕು. ಕೆಲವೆಡೆ ಕಳೆಂಜ ಬಂದ ಕೂಡಲೆ ಅಂಗಳದಲ್ಲಿ ದೀಪ ಹಚ್ಚಿ, ಅರಸಿನ-ಸುಣ್ಣ ಬೆರೆಸಿದ ನೀರು ತಂದು ಕಳೆಂಜನ ಕಾಲಿಗೆ ಹುಯ್ದು ಸ್ವಾಗತಿಸುತ್ತಾರೆ. ತನ್ನ ಕಾರ್ಯ ವ್ಯಾಪ್ತಿಯಲ್ಲಿ ಬರುವ ಪ್ರತಿ ಮನೆಗೆ ಕಳೆಂಜ ತೆರಳಿ ಮನೆಯ ಅನಿಷ್ಟವನ್ನು ದೂರ ಮಾಡುತ್ತಾನೆ. ಗ್ರಾಮದ ಎಲ್ಲಾ ಮನೆಗಳಿಗೆ ತೆರಳಿ, ಆಮೇಲೆ ಗ್ರಾಮದ ಗಡಿಯಲ್ಲಿ ಬಂದು ಸಂಪ್ರದಾಯದಂತೆ ಮಾರಿ ಬಿಡಲಾಗುತ್ತದೆ.

ಆಟಿ ಕಳೆಂಜ ಆಟಿ ತಿಂಗಳ ಅಮವಾಸ್ಯೆಯಿಂದ ಅಥವಾ ತಿಂಗಳ ಯಾವುದಾದರೊಂದು ದಿನ ಪ್ರಾರಂಭಿಸಿ 3,5 ಅಥವಾ 7 ದಿವಸ ಕಳೆಂಜ ಸುತ್ತಬಹುದು. 10-16 ವರ್ಷದ ಪ್ರಾಯದವರು ಕಳೆಂಜ ಕಟ್ಟಬೇಕಾದ ನಿಯಮವಿದೆ. ಕಳೆಂಜ ರಾಜ ದೈವದ ಪ್ರತಿರೂಪ ಎಂದು ನಂಬಲಾಗಿದ್ದು, ವೇಷ ತೊಡುವಾಗಲು, ಕಳಚುವಾಗಲು ದೇವರಲ್ಲಿ ಪ್ರಾರ್ಥಿಸಿ ಸುಭಿಕ್ಷೆ ಕಾಪಾಡಲು ಪ್ರಾರ್ಥಿಸಬೇಕು.

ಮಾಂತ್ರಿಕ ಶಕ್ತಿಯನ್ನು ಕಳೆಂಜ ಹೊಂದಿದ್ದು, ರೋಗ ರುಜಿನಗಳನ್ನು ದೂರ ಮಾಡುತ್ತಾನೆಂದು ಜನಪದರಲ್ಲಿ ನಂಬಿಕೆ.

ಏನೇ ಇರಲಿ ಆಟಿ ತಿಂಗಳ "ಆಟಿ ಕಳೆಂಜ" ಇಂದು ಕಣ್ಮರೆಯ ಹಾದಿ ಹಿಡಿದಿದೆ. ಒಂದು ಜನಾಂಗದ ವೃತ್ತಿಯಾಗಿರುವ ಇದು ನಶಿಸಿ ಹೋಗುತ್ತಿದ್ದು ಮುಂದೊಂದು ದಿನ ಜನಪದದಲ್ಲಿ ಎಲ್ಲಿಯೂ ಕಂಡುಕೊಳ್ಳಲಾರದ ಸಂದರ್ಭವೇ ಬರಬಹುದು.

-ಎಂ. ಆರ್. ಗೋಪಾಲ್, ಪೆರಾಜೆ.

72.ನಿಷಂಗಿ 73.ಬಲವರ್ಧನ 74.ಉಗ್ರಾಯುಧ

"ಗೌಡ" ಎಂಬ ಜಾತಿಯ ಹೆಸರನ್ನು ಹಿಂದುಳಿದ ಪಂಗಡಗಳ ಪಟ್ಟಿಯಲ್ಲಿ ರಾಜ್ಯದಲ್ಲಿ ಹಾಗೂ ರಾಷ್ಟ್ರಮಟ್ಟದ ಪಟ್ಟಿಯಲ್ಲಿ ಸೇರಿಸಲು ಶ್ರಮಿಸಿದ ಸಂಸ್ಥೆಗಳು ಹಾಗೂ ವ್ಯಕ್ತಿಗಳು.

"ಗೌಡ" ಎಂಬ ಜಾತಿಯ ಹೆಸರು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಇದೆ. 1913 ರಲ್ಲಿ ಶೃಂಗೇರಿ ಜಗದ್ಗುರುಗಳು ಕೊಟ್ಟ ನಿರೂಪಣೆ ಪ್ರಕಾರ "ಹಾಲು ಒಕ್ಕಲು ಮಕ್ಕಳು" ಯಾನೆ ಗೌಡ (Gowda) ರೆಂದು ನಮೂದಿಸಲಾಗಿದೆ. ಈ ಹೆಸರನ್ನು Gowda) ಇಂಗ್ಲೀಷ್ ಪದದಿಂದ Gouda ಎಂಬುದಾಗಿ ಉಚ್ಛಾರ ದೋಷದಲ್ಲಿ ತಪ್ಪಾಗಿದ್ದುದ್ದರಿಂದ "ಗೌಡರು" ತಮ್ಮ ಮಕ್ಕಳ ವಿದ್ಯಾಭ್ಯಾಸ ಹಾಗೂ ಸರ್ಕಾರಿ ಕೆಲಸಕ್ಕೆ ಸೇರುವುದಕ್ಕಾಗಿ ಸಂಬಂಧ ಪಟ್ಟ ತಾಲ್ಲೂಕಿನ ತಹಸಿಲ್ದಾರರಲ್ಲಿ ಹೋಗಿ ಜಾತಿ ಸರ್ಟಿಫೀಕೇಟನ್ನು ಕೇಳಿದಾಗ ಸರ್ಕಾರದ ಪಟ್ಟಿಯಲ್ಲಿ Gouda ಎಂಬುದಾಗಿರುವುದರಿಂದ, ಕೊಡಗು, ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೌಡರ ಹೆಸರು ಶಾಲೆಯಲ್ಲಿಯೂ ಹಾಗೂ ಕಂದಾಯ ಇಲಾಖೆಯಲ್ಲಿ Gouda ಎಂಬದಾಗಿರುವುದರಿಂದ ನಮಗೆ ಜಾತಿ ಸಟೀಫಿಕೇಟು ಕೊಡಲು ಸಾಧ್ಯವಿಲ್ಲವೆಂದು ತಿರಸ್ಕರಿಸಿದ ಉದಾಹರಣೆಗಳು ಅನೇಕ ಇವೆ. ಆದರೆ ಈಗ ಆ ತೊಂದರೆ ನಿವಾರಣೆಯಾಗಿ ಗೌಡರ ಹೆಸರುಇಂಗ್ಲೀಷಿನಲ್ಲಿ Gouda/Gowda ಎಂಬುದಾಗಿ ಎರಡು ಹೆಸರು ಇರುವುದರಿಂದ ಅದರ ತೊಂದರೆ ನೀಗಿದಂತಾಗಿದೆ. ಇದನ್ನು ಸರಿಪಡಿಸುವುದಕ್ಕೆ ಈ ಕೆಳಗಿನ ಸಂಘ ಸಂಸ್ಥೆಗಳು ಹಾಗೂ ಅದಕ್ಕಾಗಿ ಶ್ರಮಿಸಿದ ವ್ಯಕ್ತಿಗಳ ಹೆಸರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ಸೂಕ್ತವೆನಿಸಿದೆ.

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಬೆಂಗಳೂರು, ಮತ್ತು ಕೊಡಗು ಗೌಡ ಸಮಾಜ ಬೆಂಗಳೂರು, ಇವುಗಳ ಮುಖಾಂತರ ಶ್ರೀ ಕುರಿಯ ಚಾಮಯ್ಯನವರು (ಕರ್ನಾಟಕ ಸರ್ಕಾರದ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿ (ನಿವೃತ್ತ) ಹಾಗೂ ಕರ್ನಾಟಕ ಎಡ್‌ಮಿನಿಸ್ಟ್ರೇಟಿವ್ ಟ್ರ್ಯೂಬಿಲನ್‌ನ ಉಪಾಧ್ಯಕ್ಷರು (ನಿವೃತ್ತ) ಇವರು, ಡಾ|| ಕಾವೇರಿ ಮನೆ ಬೋಜಪ್ಪನವರು, ನಿವೃತ್ತ ಪ್ರೋಪೇಸರ್ ಬೆಂಗಳೂರು, ಪ್ರೊ.ಪೂಜಾರಿ ಮೊಣ್ಣಪ್ಪನವರು, ಹೈಕೋರ್ಟು ವಕೀಲರು, ಶ್ರೀ ದಂಬೆಕೋಡಿ ಆನಂದನವರು, ಜನರಲ್ ಮ್ಯಾನೇಜರ್, ಕರ್ನಾಟಕ ಹಣಕಾಸು ನಿಗಮದ ಅಧ್ಯಕ್ಷರು, ಮತ್ತು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಸಮಾಜ, ಬೆಂಗಳೂರು, ಹೈಕೋರ್ಟು ನ್ಯಾಯವಾದಿ ಪನ್ನೇಟಿ ಪೊನ್ನಪ್ಪನವರು, ಶ್ರೀ ಚೀಯಂಡಿರ ಬಸಪ್ಪನವರು, ನಿವೃತ್ತ ಕಲೆಕ್ಟರ್, ಸೆಂಟ್ರಲ್ ಎಕ್ಸೈಜ್, ಶ್ರೀ ನೂಜಿ ದಿನಕರ, ಗೌಡರು, ಕಾರ್ಯದರ್ಶಿ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಸಮಾಜ, ಬೆಂಗಳೂರು, ಶ್ರೀ ನಂಗಾರು ನಿಂಗರಾಜು, ಪ್ರಾಧ್ಯಾಪಕರು, ಕಾರ್ಯದರ್ಶಿ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಸಮಾಜ ಬೆಂಗಳೂರು, ಶ್ರೀ ಪೂಂಬಾಡಿ ತಮ್ಮಪ್ಪಗೌಡರು, ಮ್ಯಾನೇಜರ್, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಸಮಾಜ ಬೆಂಗಳೂರು, ಶ್ರೀ ಮಾವಾಜಿ ಬಾಲಕೃಷ್ಣಗೌಡರು ಸುಳ್ಯ, ಮಂಗಳೂರು ಗೌಡ ಸಮಾಜ, ಕೊಡಗು ಗೌಡ ವಿದ್ಯಾ ಸಂಘ, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಕೊಡಗು ಗೌಡ ಸಮಾಜ, ಮಡಿಕೇರಿ, ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ, ಕೊಡಗು ಗೌಡ ನಿವೃತ್ತಿ ನೌಕರರ ಸಂಘ, ಮಡಿಕೇರಿ, ದಕ್ಷಿಣ ಕನ್ನಡ ಗೌಡ ವಿದ್ಯಾಸಂಘ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಅಭಿವೃದ್ಧಿ ಸಂಘ, ಸುಳ್ಯ ಇವರುಗಳು.

ಒಂದು ಸಮಿತಿ ರಚಿಸಿ ಇದಕ್ಕೆ ಶ್ರೀ ಚಾಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ದಿನಕರ ಗೌಡರು ಕಾರ್ಯದರ್ಶಿ ಯಾಗಿಯೂ ಕಾರ್ಯನಿರ್ವಹಿಸಲಾಯಿತು.

ಕರ್ನಾಟಕ ಹಿಂದುಳಿದ ವರ್ಗದ ಕಮಿಷನ್ನರವರು Gowda ಮತ್ತು Gouda ಎಂಬುದು ಒಂದೆ ಜಾತಿ ಎಂಬುದಕ್ಕೆ ತಕ್ಕ ಆಧಾರವನ್ನು ನೀಡಬೇಕೆಂದು ಹೇಳಿದುದರಿಂದ ಪ್ರೊ|| ಪೂಜಾರಿ ಮೊಣಪ್ಪನವರು ಬೆಂಗಳೂರಿನ ಸೆಂಟ್ರಲ್ ಲೈಬ್ರರಿಯಿಂದ ಕರ್ನಾಟಕದ ಎಲ್ಲಾ ಜಿಲ್ಲೆಗಳ ಎಲ್ಲಾ ಜಾತಿಗಳ ವಿವರವಿರುವ ಗಜೇಟ್‌ಯರ್‌ಗಳ ಜೆರಾಕ್ಸ್ ಪ್ರತಿಗಳನ್ನು ಕೊಡಗಿನ ಮಡಿಕೇರಿಯ ಸೆಂಟ್ರಲ್ ರಿಕಾರ್ಡ್‌ನಿಂದ ಹಿಂದೆ ಕೊಡಗು "ಸಿ" ರಾಜ್ಯವಾಗಿದ್ದಾಗ ಗೌಡರನ್ನು ಹಿಂದುಳಿದ ಪಂಗಡಕ್ಕೆ ಸೇರಿಸಿದ್ದ ಕೊಡಗಿನ ಗಜೇಟ್ಸ್ ಯಥಾ ನಕಲನ್ನು ಶ್ರೀ ಗುಡ್ಡೇರ ರಮೇಶ್‌ನವರ ಮುಖಾಂತರ ತೆಗೆಸಿ 1897 ನೇ ಇಸವಿಯ ಕೊಡಗು ಗಜೇಟ್‌ಯರ್‌ನ ಯಥಾ ನಕಲನ್ನು ತರಿಸಿ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡರ ಜನಸಂಖ್ಯೆಯನ್ನು ಕಂಡು ಹಿಡಿಯಲು ಕೊಡಗಿನ ಮೂರು ತಾಲ್ಲೂಕುಗಳು ಪ್ರತಿಯೊಂದು ಗ್ರಾಮದ ಜನಸಂಖ್ಯೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ 4 ತಾಲ್ಲೂಕಿನ ಪ್ರತಿಯೊಂದು ಗ್ರಾಮದ ಜನಸಂಖ್ಯೆಯ ಆಧಾರದ ಮೇಲೆ ಗೌಡರ ಜನಸಂಖ್ಯೆಯನ್ನು ಕಂಡುಹಿಡಿಯಲು ಕೊಡಗಿನ ಪರವಾಗಿ ಡಾ|| ಕಾವೇರಿಮನೆ ಬೋಜಪ್ಪ, ನಂಗಾರು ನಿಂಗರಾಜು, ಶ್ರೀ ಶಿರಕಜೆ ಚಿಣಪ್ಪನವರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡರ ಜನಸಂಖ್ಯೆಯನ್ನು ಕಂಡುಹಿಡಿಯಲು ಶ್ರೀ ನೂಜಿ ದಿನಕರ ಗೌಡರು ಮತ್ತು ಪೂಂಬಾಡಿ ತಮ್ಮಪ್ಪಗೌಡರು ತುಂಬಾ ಶ್ರಮಪಟ್ಟು, ಎರಡು ಜಿಲ್ಲೆಗಳ ಗೌಡರ ಜನಸಂಖ್ಯೆಯನ್ನು ಪ್ರತಿಗ್ರಾಮವಾರು ಕಂಡು ಹಿಡಿದರು. ಇದರಿಂದಾಗಿ ಎರಡು ಜಿಲ್ಲೆಗಳಲ್ಲಿ ಗೌಡರ ಜನಸಂಖ್ಯೆ ಎಷ್ಟಿದೆ ಎಂದು ಕಂಡುಹಿಡಿಯಲಾಯಿತು.

ಶ್ರೀ ಕೊರಿಯ ಚಾಮಯ್ಯನವರು ತಮ್ಮ ಹತ್ತಿರ ಲಭ್ಯವಿದ್ದ ಎಲ್ಲಾ ನೋಟಿಫಿಕೇಟ್‌ಗಳ ನಕಲನ್ನು ಕೊಟ್ಟಿರುತ್ತಾರೆ.

75.ಕವಚಿ 76.ಆದಿತ್ಯಕೇತ 77.ಅಗ್ರಯಾಯಿ

ಈ ರೀತಿ ಮಾಡಿದುದರಿಂದ ಕರ್ನಾಟಕ ರಾಜ್ಯ ಹಿಂದುಳಿದ ಪಂಗಡಗಳ ಆಯೋಗದ ಮುಂದೆ ಮೇಲೆ ಹೇಳಿದ ರೀತಿಯ ನಕಲುಗಳ ಆಧಾರವನ್ನು ಆಯೋಗಕ್ಕೆ ತಕ್ಕ ಅಂಕಿಅಂಶಗಳನ್ನು ಕೊಟ್ಟು ಹೇಗೆ Gouda ಮತ್ತು Gowda ಎಂಬ ಪದಗಳು ಒಂದೇ ಜಾತಿಯವು ಎಂದು ಕರ್ನಾಟಕದ ಎಲ್ಲಾ ಜಿಲ್ಲೆಗಳ ಜಾತಿಗಳನ್ನು ಅವಲೋಕಿಸಿದರೆ Gowda ಮತ್ತು Gouda ಎಂಬ ಪದಗಳು ಒಂದೇ ಜಾತಿಯವು ಎಂದು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಗೌಡರು ಇರುವುದೆಂದೂ ಬೇರೆ ಜಿಲ್ಲೆಗಳಲ್ಲಿ ಈ ಗೌಡರು ಇಲ್ಲವೆ ಇಲ್ಲವೆಂದು ಪ್ರೊ||ಪೂಜಾರಿ ಮೊಣ್ಣಪ್ಪನವರು ವಾದಿಸಿದ್ದರು. ನಂತರ ನ್ಯಾಯಮೂರ್ತಿ ಚಾಮಯ್ಯನವರು ತಮ್ಮಲ್ಲಿದ್ದ ಸರ್ಕಾರದ ಅನೇಕಾನೇಕ ನೋಟೀಫಿಕೇಶನ್‌ಗಳನ್ನು ಓದಿ ಹೇಳಿ ಗೌಡ ಎಂಬ ಹೆಸರನ್ನು ಖಂಡಿತ ಸೇರಿಸಬೇಕೆಂದು ಒತ್ತಾಯಿಸಿದರು.

ಇದಲ್ಲದೆ ಶ್ರೀ ಮಾವಾಜಿ ಬಾಲಕೃಷ್ಣಗೌಡರು ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಅಭಿವೃದ್ಧಿ ಸಂಘದ ಪದಾಧಿಕಾರಿಯಾಗಿ ಮಂಗಳೂರಿನಲ್ಲಿ ಆಯೋಗ ಬಂದಾಗ ವಾದಿಸುತ್ತಾ ಗೌಡರೆಲ್ಲಾ ಒಕ್ಕಲಿಗರಲ್ಲ, ಒಕ್ಕಲಿಗರೆಲ್ಲರೂ ಗೌಡರಲ್ಲ, ಗೌಡರು ಆದಿಜಾತಿ, ಆದಿಯಿಂದಲೇ ಇದ್ದವರು ಹಾಗೂ 10 ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದ ಪ್ರತ್ಯೇಕ ಜಾತಿ ಎಂಬುದಾಗಿ ವಾದಿಸಿ ಹಲವಾರು ನೋಟಿಫಿಕೇಶನ್ನ್ ನಕಲನ್ನು ಆಯೋಗಕ್ಕೆ ಸಲ್ಲಿಸಿದ್ದರು. ಮಂಗಳೂರಿನ ಒಕ್ಕಲಿಗಯಾನೆ ಗೌಡ ಸಂಘದವರು ಹಲವು ನಿದರ್ಶನಗಳನ್ನು ನೀಡಿ ಗೌಡ ಹೆಸರನ್ನು ಹಿಂದುಳಿದ ಜಾತಿಯ ಪಟ್ಟಿಗೆ ಸೇರಿಸಬೇಕೆಂದು ವಾದಿಸಿದರು.

ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ಶ್ರೀ ತೋಟಂಬೈಲು ನಾಣಯ್ಯ ಮತ್ತು ಇವರ ಪದಾಧಿಕಾರಿಗಳು, ಕೊಡಗು ಗೌಡ, ವಿದ್ಯಾ ಸಂಘದ ಅಧ್ಯಕ್ಷ ಹೊಸೂರು ರಮೇಶ್, ಮತ್ತು ಕಾರ್ಯಕಾರಿ ಮಂಡಳಿ, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಮತ್ತು ಪದಾಧಿಕಾರಿಗಳು, ಗೌಡ ಮಾಜಿ ನೌಕರರ ಸಂಘಧ ಅಧ್ಯಕ್ಷ ಸೂದನ ನಾಣಯ್ಯ ಹಾಗೂ ಪದಾಧಿಕಾರಿಗಳು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಅಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಕೋರನ ಪೂಣಚ್ಚ ಮತ್ತು ಅವರ ಪದಾಧಿಕಾರಿಗಳೆಲ್ಲರು ಹಾಜರಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಈ ಎಲ್ಲಾ ವಾದಗಳನ್ನು ಆಲಿಸಿದ ಕರ್ನಾಟಕ ಹಿಂದುಳಿದ ಪಂಗಡಗಳ ಕಮಿಷನ್ನ್‌ನವರು ಮೇಲೆ ಹೇಳಿದ ವಿಷಯಗಳನ್ನು ಗಮನಿಸಿ ಕರ್ನಾಟಕ ಸರಕಾರಕ್ಕೆ ಶಿಫಾರಸ್ಸು ಮಾಡಿ 2002 ರ ಮಾರ್ಚ್ 30 ರಲ್ಲಿ ಹೊರಡಿಸಿ ಏಪ್ರಿಲ್ 11 ಕ್ಕೆ ಕರ್ನಾಟಕ ಗಜೆಟ್‌ನಲ್ಲಿ ಪ್ರಕಟಿಸಲಾಯಿತು.

ಈ ರೀತಿಯ ರಾಷ್ಟ್ರೀಯ ಹಿಂದುಳಿದ ಕಮಿಷನ್ನ್ ಮುಂದೆ ಶ್ರೀ ಮಾವಾಜಿ ಬಾಲಕೃಷ್ಣನವರು ವಾದ ಮಾಡಿ ಗೌಡರು ಒಕ್ಕಲಿಗರಲ್ಲ, ಗೌಡರನ್ನು ಹಿಂದುಳಿದ ಪಂಗಡದವರ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೇರಿಸಬೇಕೆಂದು ವಾದಿಸಿದರು. ತದನಂತರ ಪ್ರೊ|| ಪೂಜಾರಿ ಮೊಣಪ್ಪನವರು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು ಸಂಗ್ರಹಿಸಿದ ಕರ್ನಾಟಕದ ಎಲ್ಲಾ ಜಾತಿಗಳ ವಿವರವಿರುವ ಗಜೇಟ್‌ಯರ್ ನಕಲು ಹಲವಾರು ಸರ್ಕಾರಿ ನೋಟಿಫಿಕೇಶನ್ನ್ ಒಕ್ಕಲಿಗರ ವಿವಿಧಪಂಗಡಗಳ ಚರಿತ್ರೆ, ಪದ್ಧತಿಗಳು ಹಾಗೂ ಗೌಡರ ಇತಿಹಾಸ ಮತ್ತು ಪದ್ಧತಿಗಳನ್ನು ಒಕ್ಕಲಿಗರ ಪಂಗಡದವರ ಪದ್ಧತಿಗಳಿಗೂ ವ್ಯತ್ಯಾಸವಿದೆ. ಆದ್ದರಿಂದ ಗೌಡರಿಗೂ ಒಕ್ಕಲಿಗರಿಗೂ ಸಂಬಂಧವೇ ಇಲ್ಲ. ಆದ್ದರಿಂದ ಗೌಡರನ್ನು ಪಟ್ಟಿಯಲ್ಲಿ ಸೇರಿಸಬೇಕು ಹಾಗೂ Gouda ಎಂಬುದಾಗಿ ಕರ್ನಾಟಕ ಸರಕಾರದ ಪಟ್ಟಿಯಲ್ಲಿ ಕಾಣಿಸಿರುವುದು ಅಕ್ಷರ ತಪ್ಪು ಅದನ್ನು Gowda ಎಂದು ತಿದ್ದಬೇಕೆಂದು ವಾದಿಸಿದರು.

ಇವರ ನಂತರ ಮೊಟ್ಟನ ರವಿಕುಮಾರ್, ಹೈಕೋರ್ಟು ವಕೀಲರು ಹಾಗೂ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಉಪಾಧ್ಯಕ್ಷರಾದ ಶ್ರೀ ಅನಂತರಾಜ್ ಗೌಡರು ಮಾತನಾಡಿ ಗೌಡ ಹೆಸರನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಂಡರು. ಕೊಡಗು ಮತ್ತುದಕ್ಷಿಣ ಕನ್ನಡ ಗೌಡ ಸಮಾಜದವರು ಈ ರೀತಿ ಸಾಧಾರಣ 80 ಪ್ರತಿಗಳ ಮೂರು ಸೆಟ್ಟ್‌ಗಳ ರೆಕಾರ್ಡುಗಳನ್ನು ಒದಗಿಸಿಕೊಳ್ಳುವುದಕ್ಕೆಅವುಗಳನ್ನು ಟೈಪ್ ಮಾಡುವುದಕ್ಕೆ, ಇತರ ಖರ್ಚಿಗಾಗಿ 7000/- ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಗೌಡ ಸಮಾಜಕ್ಕಾಗಿ ಸಹಾಯ ಮಾಡಿದ್ದಾರೆ, ನಿಜಕ್ಕೂ ಮೆಚ್ಚತಕ್ಕದ್ದೆ. ಜೈ ಗೌಡ ಬಾಂಧವರೆ.

-ಸಂಗಾತಿ

ಸೆಲ್ಯೂಟ್‌ನ ಇತಿಹಾಸ

ಪೋಲಿಸರು, ಸೈನಿಕರು ತಮ್ಮ ಮೇಲಾಧಿಕಾರಿಗಳನ್ನು ಕಂಡಾಗ ಸೆಲ್ಯೂಟ್ ಹೊಡೆದು ತಮ್ಮ ಗೌರವವನ್ನು ಸಲ್ಲುಸುತ್ತಾರಲ್ಲವೇ? ಈ ಸೆಲ್ಯೂಟ್ ಪ್ರಾರಂಭವಾದದ್ದಾದರೂ ಹೇಗೆ?

ಶತಮಾನಗಳ ಹಿಂದೆ ಇಂಗ್ಲೆಂಡನ್ನು ನೈಟ್ಸ್ ಎಂದು ಕರೆಯಲ್ಪಡುತ್ತಿದ್ದ ಪಡೆ ವೀರರಿದ್ದರು. ಇವರು ತಮ್ಮ ಮುಖ ಹಾಗೂ ತಲೆಯನ್ನು ಮುಚ್ಚುವಂತಹ ಕಬ್ಬಿಣದಿಂದಾದ ಕವಚವನ್ನು ಧರಿಸುತ್ತಿದ್ದರು. ಪ್ರಭುಗಳನ್ನು ಕಂಡಾಗ ಇವರು ಕವಚದ ಮುಂದಿದ್ದ ಒಂದು ಭಾಗವನ್ನು ಮೇಲಕ್ಕೆತ್ತಿ ತಮ್ಮ ಕಣ್ಣುಗಳು ಕಾಣಿಸುವಂತೆ ಮಾಡಿ ನಮಸ್ತೆ ಹೇಳುತ್ತಿದ್ದರು. ಕಾಲಕ್ರಮದಲ್ಲಿ ಈ ಕವಚದ ಬದಲಿಗೆ ಟೋಪಿಯನ್ನು ಬಳಸಲಾರಂಭಿಸಿದರು. ಆಗ ಪ್ರಭುಗಳನ್ನು ಕಂಡಾಗ ತಕ್ಷಣ ಟೋಪಿಯನ್ನು ಮೇಲಕ್ಕೆತ್ತಿ ನಮಸ್ಕಾರ ಹೇಳುತ್ತಿದ್ದರು. ಹೀಗೆ ಇವರು ಮಾಡುತ್ತಿದ್ದುದರಲ್ಲಿ ಒಂದು ಸಮಸ್ಯೆ ತಲೆದೋರಿತು. ಇವರುಗಳ ಕೈ ಬೆರಳುಗಳಲ್ಲಿ ಯಾವಾಗಲೂ ಸಿಡಿಮದ್ದಿನ ಕತ್ತಿ ಇರುತ್ತಿತ್ತು. ಆ ಕೈಗಳಿಂದ ಟೋಪಿಯನ್ನು ಎತ್ತಿ ನಮಸ್ಕಾರ ಹೇಳುತ್ತಿದ್ದುದರಿಂದ ಆ ಟೋಪಿಗಳು ಕೊಳೆಯಾಗುತ್ತಿದ್ದವು. ಇದನ್ನು ತಪ್ಪಿಸಲು ಟೋಪಿಗಳ ಹತ್ತಿರದವರೆಗೆ ತಮ್ಮ ಕೈಯನ್ನು ಒಯ್ದು ಟೋಪಿಯನ್ನು ಎತ್ತದೆಯೇ ನಮಸ್ಕಾರ ಹೇಳತೊಡಗಿದರು. ಹೀಗೆ ಅಭ್ಯಾಸವಾದದ್ದೇ ಸೆಲ್ಯೂಟ್.

ಸಂಗ್ರಹ: ಕೋಡಿಯಡ್ಕ ರಮೇಶ್, ಮಕ್ಕಂದೂರು.

78.ನಾಗದತ್ತ 79.ಕಥನ 80.ಕುಂಡಿ

ಊರು ಗೌಡ ಬುದ್ಧಿವಂತರು.



ಗೌಡ ಜನಾಂಗದಲ್ಲಿ ತನ್ನದೇ ಆದ ರೀತಿ ನಿಯಮಗಳು ಆಚರಣೆಯಲ್ಲಿವೆ. ಇವು ಕೆಲವೊಂದು ಪ್ರದೇಶಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನೂ ಹೊಂದಿರಬಹುದು. ಈ ಕಟ್ಟುಪಾಡುಗಳು ಮತ್ತು ಊರಲ್ಲಿಯ ದೈವಸ್ಥಾನ, ಮದುವೆ ಮುಂತಾದ ಕಾರ್ಯಕ್ರಮಗಳು ಇತ್ಯಾದಿ ಗೌಡ ಜನಾಂಗಕ್ಕೆ ಸಂಬಂಧಿಸಿದವುಗಳಿಗೆ ಅಡಚಣೆಯಾಗದಂತೆ ನೋಡಿಕೊಳ್ಳಲು ಪುರಾತನ ಕಾಲದಿಂದಲೇ ಗೌಡ ಜನಾಂಗ ಹೆಚ್ಚಾಗಿರುವ ಪ್ರದೇಶಗಳಲ್ಲಿ, ಆಯಾಯ ಊರುಕಟ್ಟುಗಳಲ್ಲಿ ಗೌಡ, ಬುದ್ಧಿವಂತ(ಒತ್ತು ಗೌಡ) ರೆಂಬ ನಾಯಕರನ್ನು ಆಗಿನ ಕಾಲದಲ್ಲಿ ಮುಖ್ಯರಾಗಿದ್ದ ವ್ಯಕ್ತಿಗಳನ್ನು ಆರಿಸಿದ್ದಾಗಿ ತಿಳಿದು ಬರುತ್ತದೆ. ಈ ವ್ಯಕ್ತಿಗಳ ವಂಶಸ್ಥರೇ ಇಂದು ಕೆಲ ಊರುಗಳಲ್ಲಿ ಗೌಡ ಬುದ್ಧಿವಂತರೆಂದು ಕರೆಯಿಸಿಕೊಳ್ಳುತ್ತಿದ್ದಾರೆ.

ಗೌಡ ಜನಾಂಗದವರು ಈಗ ಹೆಚ್ಚಾಗಿರುವ (ಪುತ್ತೂರು, ಬೆಳ್ತಂಗಡಿ, ಸುಳ್ಯ) ಪ್ರದೇಶಗಳಲ್ಲಿ ಹಿಂದೆ ಜೈನ ಅರಸರ ಆಳ್ವಿಕೆಯಿದ್ದುದು ಚರಿತ್ರೆಯಿಂದ ತಿಳಿದು ಬರುವ ಅಂಶ. ಕಾಲಕ್ರಮೇಣ ಅವರ ಆಳ್ವಿಕೆ ಕೊನೆಗೊಂಡಾಗ ಇಲ್ಲಿ ಬೇರೂರಿದ ಗೌಡ ಜನಾಂಗದವರು ಜೈನ ಅರಸರ ಗುಡಿಗೋಪುರಗಳ ಪೂಜಾಕ್ರಮಗಳನ್ನು ಮುಂದುವರಿಸಲು ನಿಶ್ಚಯಿಸಿದ್ದು ಅದರ ಉಸ್ತುವಾರಿಯನ್ನು ಈ ಗೌಡ ಬುದ್ಧಿವಂತರೇ ನೋಡಿಕೊಳ್ಳುತ್ತಿದ್ದು, ಅದು ಈಗಲೂ ಹೆಚ್ಚಿನ ಪ್ರದೇಶಗಳಲ್ಲಿ ಮುಂದುವರೆದಿದೆ.

ಒಂದು ಕಾಲದಲ್ಲಿ ಗೌಡ ಸಮಾಜದಲ್ಲಿ, ಗೌಡ ಬುದ್ಧಿವಂತರಿಗೆ ಹೆಚ್ಚಿನ ಮರ್ಯಾದೆಗಳಿದ್ದವು. ಯಾವುದೇ ಶುಭಾಶುಭ ಕಾರ್ಯಗಳಲ್ಲಿ ಇವರದೇ ಅಂತಿಮ ತೀರ್ಮಾನವಾಗಿರುತ್ತಿತ್ತು. ಸಮಾಜದಲ್ಲಿ ಇವರ ಮಾತಿಗೆ ಹೆಚ್ಚಿನ ಬೆಲೆಯಿತ್ತು. ಅದನ್ನು ತಪ್ಪದೆ ಪಾಲಿಸುತ್ತಿದ್ದರು. ಗೌಡ ಬುದ್ಧಿವಂತರು ಜನಾಂಗಕ್ಕೆ ಆದರ್ಶರಾಗಿರುತ್ತಿದ್ದರು. ಮದುವೆ ಇತ್ಯಾದಿ ಶುಭ ಕಾರ್ಯಗಳಲ್ಲಿ ಇವರಿಗೆ ಸೂಡಿ ಎಲೆ ಅಡಿಕೆಯಿಟ್ಟು ಹೇಳಿಕೆ ಮಾಡುವ ಕ್ರಮವಿತ್ತು. (ಕೆಲವೆಡೆ ಈಗಲೂ ಇದೆ.) ಇವರು ಕಾರ್ಯಕ್ರಮ ಸುಧಾರಕರೂ ಆಗಿರುತ್ತಿದ್ದರು.

ಊರಿನಲ್ಲಿರುವ ದೈವಸ್ಥಾನಗಳಲ್ಲಿ ಉತ್ಸವಗಳು ನಡೆಯುವ ಕಾಲದಲ್ಲಿ ಎಲ್ಲಾ ಜನಾಂಗದವರನ್ನು ಒಟ್ಟು ಸೇರಿಸಿ ನಿಯಮ ಪ್ರಕಾರ ವಂತಿಗೆ ವಸೂಲಿ ಮಾಡಿ ಭೂತಕೋಲ, ತಂಬಿಲಗಳನ್ನು ನಡೆಯಿಸುವ ಜವಾಬ್ದಾರಿ ಇವರದು. ಊರ ದೈವಸ್ಥಾನಗಳ ಉತ್ಸವಗಳಲ್ಲಿ ಗೌಡ ಜನಾಂಗದವರಲ್ಲದೆ ಆ ಊರಿಗೆ ಸಂಬಂಧಿಸಿದ ಇತರ ಜನಾಂಗದವರೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಈ ಉತ್ಸವಗಳಲ್ಲಿ ಗೌಡ ಜನಾಂಗದವರಲ್ಲದೆ ಆ ಊರಿಗೆ ಸಂಬಂಧಿಸಿದ ಜಗಳ, ವ್ಯಾಜ್ಯ ಇತ್ಯಾದಿಗಳನ್ನು ಈ ನಾಯಕರು ಬಗೆಹರಿಸುತ್ತಿದ್ದರು. ಇಂದಿಗೂ ಊರ ಮುಖ್ಯ ಭೂತದೆದುರು ಎಲ್ಲಾ ಜನರು ತಾವೆಲ್ಲ ಒಂದೇ ಎನ್ನುವ ಭಾವನೆಯನ್ನು ಬಿಂಬಿಸಲು ಒಬ್ಬರಿಂದೊಬ್ಬರು ತಾಗಿಕೊಂಡು ನಿಂತು ಪ್ರಾರ್ಥಿಸುವುದನ್ನು ಕಾಣಬಹುದು.

ಇತ್ತೀಚಿನ ದಿನಗಳಲ್ಲಿ ಈ 'ಗೌಡ ಬುದ್ಧಿವಂತರು" ಸಮಾಜದಲ್ಲಿ ಅಪ್ರಸ್ತುತರಾಗುತ್ತಿರುವುದು ಕಂಡು ಬರುತ್ತಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಜನಾಂಗದವರು ವಿದ್ಯಾವಂತರಾಗುತ್ತಿರುವುದು, ಹಳೆಯ ಪದ್ಧತಿಗಳನ್ನು ನಿರ್ಲಕ್ಷಿಸುವುದು, ತಾವು ಯಾರಿಂದಲೂ ಹೇಳಿಸಿಕೊಳ್ಳಬೇಕಿಲ್ಲ ಎನ್ನುವ ಭಾವನೆ, ಇತ್ಯಾದಿಗಳೂ ಕಾರಣವಿರಬಹುದು. ಒಟ್ಟಿನಲ್ಲಿ ಪುರಾತನ ಕಾಲದಿಂದ ನಡೆದು ಬರುತ್ತಿದ್ದ, ಪುರಾತನ ಕಾಲದಲ್ಲಿ ತಮ್ಮ ಜನಾಂಗದವರೇ ನಿಶ್ಚಯಿಸಿದ್ದ ವಂಶಸ್ಥ ನಾಯರ ನಾಯಕತ್ವವನ್ನು ಸಮಾಜ ಶಾಶ್ವತವಾಗಿ ಕಳೆದುಕೊಳ್ಳುವ ಕಾಲ ದೂರವಿಲ್ಲವೆನ್ನಬಹುದು.

-ಮಂಜುನಾಥ ಉಂಞನ, ಬಿ.ಎ., ಸುಳ್ಯ ತಾಲ್ಲೂಕು.

ಓದಿರೆ ಹಿಂಗೆ ಓದೊಕು ?!

ಪರೀಕ್ಷೆ ಹತ್ರ ಬಾತ್‌ತ್ತೇಳಿ
ಕೋಂಬರೆ ಬಾಗ್‌ಲ್ ಹಾಕ್ಕಂಡ್
ಅನ್ನ ನೀರ್ ಬುಟ್ಟ್‌ಕಂಡ್
ಪಾಠನ ಬಾಯಿಪಾಠ ಹೊಡೆತ್ತಿತ್
ನಮ್ಮ ತಿಪ್ಪ ಹೈದ ನಾನ್ ಗುಂಡಿ ಮನೆಗೆ
ಹೋಕನ ಮೊನ್ನೆ......
ರಿಸಲ್ಟ್ ಬಂದ್ ಪಾರ್ಟಿ
ಕೊಡ್ಸುರಾತ ಕೇಳಿಕಾಕನ
ಮಾರ್ಕ್ಸ್‌ಕಾರ್ಡ್ ತೆಗ್ದ್ ತೋರ್ಸಿದೆ ಹೈದ
ಅವಂಗೆ ಬಂದುಟು ದೊಡ್ಡದೊಂದು ಸೊನ್ನೆ...............

-ಕಾನೆಹಿತ್ಲು ಕೆ. ಜಯಪ್ರಕಾಶ್, ಕೊಡಗು ಜಿಲ್ಲೆ.

ನಾನ್ ಸೊಳ್ಳೆಗೆ ಹೊಡ್ದೆ

ಕುಂಞಿ: ಯಾಕೆರ ಸೋಂಪ ನೀನ್ ಮರ್‍ನ್ದಾತ ಒಳಾ?
ಸೋಂಪ: ನಾನ್ ಒಂದ್ ಸೊಳ್ಳೆನ ಕೋಲ್‌ಂದ ಹೊಡ್ದೆ, ಅದ್ದಿಕ್ಕೆ ನನ್ನಪ್ಪ ನಂಗೆ ಹೋಡ್ತ್.
ಕುಂಞಿ: ಅದಿಕ್ಕಾಕೆ ಅಪ್ಪ ಹೋಡಿಯೊಕು?
ಸೋಂಪ: ಸೊಳ್ಳೆ ಅಪ್ಪನೆ ಮೂಕ್‌ನ ಮ್ಯಾಲೆ ಕುದ್ದಿತ್ತ್ ಅದಿಕ್ಕೆ.

-ಪಟ್ಟಡ ವಿಶಾಲಾಕ್ಷಿ ಹರೀಶ್, ಮಂಡ್ಯ.

81.ಕುಂಡಧರ 82.ಭೀಮರಥ 83.ವೀರಬಾಹು

ವೆಂಕಟರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಸುಳ್ಯದ ಸಾಧನಾ ಪಥ



ಸುಳ್ಯ ತಾಲ್ಲೂಕು ಗೌಡರ ಯುವ ಸೇವಾ ಸಂಘವು ದಿನಾಂಕ 18-02-1995 ರಂದು ಶ್ರೀ ಚೈತನ್ಯ ಸ್ವಾಮಿಯವರ ಮಾರ್ಗ ದರ್ಶನ ದಲ್ಲಿ ಆರಂಭವಾಯಿತು. ಸಂಘದ ಸ್ಥಾಪಕ ಅಧ್ಯಕ್ಷರಾಗಿ ಶ್ರೀ ನಿತ್ಯಾನಂದ ಮುಂಡೋಡಿ, ಕಾರ್ಯದರ್ಶಿ ಶ್ರೀ ಎ. ವಿ. ತೀರ್ಥ ರಾಮರ ನಾಯಕತ್ವದಲ್ಲಿ ತಾಲೂಕಿ ನಾದ್ಯಂತ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ನಮ್ಮ ಸಮಾಜದ ವತಿಯಿಂದ ಒಂದು ಆರ್ಥಿಕ ಸಂಸ್ಥೆಯನ್ನು ತೆರೆದು ಸಮಾಜದ ಜನರಿಗೂ ಇತರ ಜನರಿಗೂ ನೆರವಾಗಬೇಕೆಂಬ ಸಲಹೆಗಳು ಕೇಳಿಬಂದವು. ಅದರ ಫಲವಾಗಿ ದಿನಾಂಕ 20-4-1997 ರಂದು ಮಡಪ್ಪಾಡಿ ಗ್ರಾಮದಲ್ಲಿ ಸಂಘದ ಅಧ್ಯಕ್ಷ ಶ್ರೀ ನಿತ್ಯಾನಂದ ಮುಂಡೋಡಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸುಳ್ಯ ತಾಲ್ಲೂಕು ವ್ಯಾಪ್ತಿಯಲ್ಲಿ ಒಂದು ಸಹಕಾರಿ ಸಂಘವನ್ನು ಸ್ಥಾಪಿಸುವುದು ಎಂದು ನಿರ್ಧರಿಸಲಾಯಿತು. ಉದ್ದೇಶಿತ ಸಹಕಾರಿ ಸಂಘಕ್ಕೆ ಜನಾಂಗದ ಕುಲದೇವರಾದ "ಶ್ರೀ ವೆಂಕಟರಮಣ" ಹೆಸರಿನಲ್ಲಿ ಶ್ರೀ ವೆಂಕಟರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಎಂದು ನಾಮಕರಣ ಮಾಡಲಾಯಿತು. ಉದ್ದೇಶಿತ ಸಂಘದ ಮುಖ್ಯ ಪ್ರವರ್ತಕರಾಗಿ ಯುವ ಸಂಘದ ಕೋಶಾಧಿಕಾರಿ ಶ್ರೀ ಪಿ. ಸಿ. ಜಯರಾಮರನ್ನು ಆಯ್ಕೆ ಮಾಡಲಾಯಿತು.

ಪ್ರವರ್ತಕ ಸಮಿತಿ ಸಂಘ ಸ್ಥಾಪಿಸುವ ಬಗ್ಗೆ ಉಪ ನಿಬಂಧನೆ ತಯಾರಿಸಿ ಸಹಕಾರಿ ಸಂಘಗಳ ಉಪನಿಬಂಧಕರಿಂದ ಅನುಮತಿ ಪಡೆದು ದಿನಾಂಕ 5-8-1997 ರಂದು ಸದಸ್ಯತ್ವ ಅಭಿಯಾನ, ಪಾಲು ಬಂಡವಾಳ ಸಂಗ್ರಹಣೆ ಕಾರ್ಯ ಆರಂಭವಾಯಿತು. ಆರಂಭದಲ್ಲಿ ಸುಳ್ಯದ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್‌ನ ಸ್ಥಾಪಕಾಧ್ಯಕ್ಷರಾದ ಶ್ರೀ ಕುರುಂಜಿ ವೆಂಕಟ್ರಮಣ ಗೌಡರು ನಿಯೋಜಿತ ಸಹಕಾರಿ ಸಂಘದ ಪ್ರಥಮ ಸದಸ್ಯರಾಗಿ ಪಾಲು ಬಂಡವಾಳ ಖರೀದಿಸಿ ಸಂಘಕ್ಕೆ ಶುಭ ಕೋರಿದರು. ಕೇವಲ ಒಂದು ವಾರದಲ್ಲಿ 391 ಸದಸ್ಯರಿಂದ ರೂಪಾಯಿ 5,12,581 ಪಾಲು ಬಂಡವಾಳ ಸಂಗ್ರಹಿಸಿ ಉಪನಿಬಂಧನೆಯೊಂದಿಗೆ ನೋಂದಾವಣೆಯಾಯಿತು. ಸದ್ರಿ ಆದೇಶದ ಪ್ರಕಾರ 16-11-1997 ರಂದು ಪ್ರಥಮ ಮಹಾಸಭೆ ಕರೆದು ಉಪನಿಬಂಧನೆಯನ್ನು ಅಂಗೀಕರಿಸಲಾಯಿತು.

ದಿನಾಂಕ 23-12-1997 ರಂದು ಸಹಕಾರಿ ಸಂಘಗಳ ಉಪನಿಬಂಧಕರು ಈ ಕೆಳಗಿನ 15 ಜನರನ್ನು ಸಂಘದ ನಿರ್ದೇಶಕರಾಗಿ ನಾಮಕರಣ ಮಾಡಿ ಆದೇಶ ಹೊರಡಿಸಿದರು.

1. ಪಿ.ಸಿ. ಜಯರಾಮ, 2. ನಿತ್ಯಾನಂದ ಮುಂಡೋಡಿ 3. ಎ. ವಿ. ತೀರ್ಥರಾಮ 4. ಭೋಜಪ್ಪ ಗೌಡ ಮದುವೆಗದ್ದೆ 5. ಕೆ. ಸಿ. ನಾರಾಯಣ ಗೌಡ, 6. ಯಸ್. ಆರ್. ಸೂರಯ್ಯ 7. ಲಕ್ಷ್ಮೀನಾರಾಯಣ ನಡ್ಕ, 8. ಪಿ. ಯಸ್. ಗಂಗಾಧರ ಗೌಡ, 9. ಕೆ. ವಿ. ಹೇಮನಾಥ, 10. ಯು.ಜಿ. ಗುಣಪಾಲ, 11. ಗೌರಿಶಂಕರ ಯಂ. 12. ಜಾಕೆ ಸದಾನಂದ ಗೌಡ, 13. ಶ್ರೀಮತಿ ಕಮಲಾ ಪಿ. ಗೌಡ, 14. ಶ್ರೀಮತಿ ಕೆ. ಯಸ್. ಜಯಲಲಿತ. 15. ಶ್ರೀಮತಿ ಹರಿಣಿ ಸದಾನಂದ.

ದಿನಾಂಕ 19-1-1998 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ಅಧ್ಯಕ್ಷರಾಗಿ ಶ್ರೀ ಪಿ. ಸಿ. ಜಯರಾಮ ಮತ್ತು ಉಪಾಧ್ಯಕ್ಷರಾಗಿ ಶ್ರೀ ಬೋಜಪ್ಪ ಗೌಡ ಮದುವೆಗದ್ದೆಯವರನ್ನು ಆಯ್ಕೆ ಮಾಡಲಾಯಿತು.

ಸಂಘವು ಸದಸ್ಯರ ಅಭಿವೃದ್ಧಿ ಕಾರ್ಯಗಳಿಗೆ ಜ್ಯಾಮೀನು ಸಾಲ, ಆಭರಣ ಈಡಿನ ಸಾಲ, ನಿತ್ಯನಿಧಿ ಸಾಲ, ವಾಹನ ಭದ್ರತಾ ಸಾಲ, ಜಮೀನು ಅಡವು ಸಾಲ, ವೇತನ ಪತ್ರದ ಮೇಲಿನ ಸಾಲ, ನಿರಖು ಠೇವಣಿ ಮೇಲಿನ ಸಾಲ, ವಿಮಾ ಭದ್ರತಾ ಸಾಲ, ಇನ್ನಿತರ ಅವಶ್ಯಕ ಸಾಲಗಳನ್ನು ನೀಡುತ್ತಾ ಬಂದಿದ್ದು ಇವುಗಳೊಂದಿಗೆ ವಿವಿಧ ರೀತಿಯ ಠೇವಣಿಗಳನ್ನು ಕೂಡ ಸಂಗ್ರಹಿಸುತ್ತಾ ಬಂದಿದೆ.

ಸಂಘದಲ್ಲಿ ಪ್ರಸ್ತುತ 1900 ಕ್ಕೂ ಮಿಕ್ಕಿ ಸದಸ್ಯರಿದ್ದು 22 ಲಕ್ಷಕ್ಕೂ ಮಿಕ್ಕಿ ಪಾಲು ಬಂಡವಾಳ, 2 ಕೋಟಿ ಠೇವಣಿ ಸಂಗ್ರಹಿಸಿ, ಸಾಲವಿತರಿಲಿ 12 ಕೋಟಿಗೂ ಮಿಗಿಲಾಗಿ ವಾರ್ಷಿಕ ವಹಿವಾಟು ನಡೆಸಿರುತ್ತದೆ. ಸಂಘವು ಆರಂಭದ ವರ್ಷದಿಂದಲೇ ಲಾಭದಲ್ಲಿ ಮುನ್ನಡೆಯುತ್ತಿದ್ದು ಕಳೆದ ವರ್ಷ 25% ಡಿವಿಡೆಂಡ್ ವಿತರಿಸಿ ಗಣನೀಯ ಸಾಧನೆಗೈದಿದೆ.

ಮುಂದಿನ ಯೋಜನೆಗಳು: ಸಂಘವು ಪ್ರಸ್ತುತ ಸುಳ್ಯ ಸಿ.ಎ. ಬ್ಯಾಂಕಿನವರ ಕಟ್ಟಡದಲ್ಲಿ ಕಛೇರಿಯನ್ನು ಹೊಂದಿದ್ದು ಸ್ವಂತ ನಿವೇಶನ ಹೊಂದಿ ಕಟ್ಟಡವನ್ನು ನಿರ್ಮಿಸುವ ಗುರಿ ಹೊಂದಿದೆ. ಸಂಘಕ್ಕೆ ಕಂಪ್ಯೂಟರನ್ನು ಅಳವಡಿಸುವ ತಯಾರಿಯಲ್ಲಿದೆ. ಸಂಘವು ಕಾರ್ಯಕ್ಷೇತ್ರವನ್ನು ಜಿಲ್ಲಾ ಮಟ್ಟಕ್ಕೆ ಕೊಂಡೊಯ್ಯಲು ನಿಶ್ಚಯಿಸಿದ್ದು ಪುತ್ತೂರು ಮತ್ತು ಬೆಳ್ತಂಗಡಿಗಳಲ್ಲಿ ಶಾಖೆ ತೆರೆಯಲು ಅನುಮತಿ ದೊರಕಿರುತ್ತದೆ.

ಆಡಳಿತ ಮಂಡಳಿ: ಸಂಘದ ಹಾಲಿ ಅಧ್ಯಕ್ಷರಾಗಿ ಪಿ. ಸಿ. ಜಯರಾಮ, ಉಪಾಧ್ಯಕ್ಷರಾಗಿ ಮದುವೆಗದ್ದೆ ಭೋಜಪ್ಪ ಗೌಡ, ನಿರ್ದೇಶಕರಾಗಿ, ನಿತ್ಯಾನಂದ ಮುಂಡೋಡಿ, ಎ. ವಿ. ತೀರ್ಥರಾಮ, ಕೆ.ಸಿ. ನಾರಾಯಣ ಗೌಡ, ಜಾಕೆ ಸದಾನಂದಗೌಡ, ಪಿ. ಯಸ್. ಗಂಗಾಧರ ಗೌಡ, ಲಕ್ಷ್ಮಿ ನಾರಾಯಣನಡ್ಕ, ಯಸ್ ಆರ್. ಸೂರಯ್ಯ ಶ್ರೀಮತಿ ಕಮಲಾ ಪಿ. ಗೌಡ, ಶ್ರೀಮತಿ ಕೆ. ಎಸ್. ಜಯಲಲಿತ ಇವರುಗಳು ಕಾರ್ಯನಿರ್ವಹಿಸುತ್ತಿರುವರು.

ಸಿಬ್ಬಂದಿಗಳಾಗಿ ಕೆ. ಟಿ. ವಿಶ್ವನಾಥ, ಚಂದ್ರಶೇಖರ ಮೇರ್ಕಜೆ, ಕುಸುಮಾಧರ ಜಿ., ಲತೀಶ್ ಕುಮಾರ್ ಕೆ. ಯಸ್. ಇವರುಗಳು ಸಂಘದ ಪ್ರಗತಿಗೆ ದುಡಿಯುತ್ತಿರುವರು.

ಅತೀ ಕಡಿಮೆ ಅವಧಿಯಲ್ಲಿ ಕ್ಷಿಪ್ರ ಬೆಳವಣಿಗೆ ಸಾಧಿಸಿದ್ದು ಸುಳ್ಯ ತಾಲ್ಲೂಕಿನ ಪ್ರತಿಷ್ಠಿತ ಸಂಸ್ಥೆಯಾಗಿ ಇದು ರೂಪುಗೊಂಡಿರುತ್ತದೆ.ಜೈ ಗೌಡ ಬಾಂಧವರೆ !

-ಶ್ರೀ ಪಿ. ಸಿ. ಜಯರಾಮ, ಅಧ್ಯಕ್ಷರು, ಶ್ರೀ ವೆಂಕಟರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.) ಸುಳ್ಯ.

84.ಅನಾದೃಶ್ಯ 85.ಕುಂಡಭೇದಿ 86.ವಿರಾವಿ

ಪತ್ರ ವಿಭಾಗ : ಒಂದ್

ಪ್ರೀತಿಯ ಸಂಪಾದಕರಿಗೆ,

ಜೂನ್ ತಿಂಗಳ ಕೊಡಗು ಸಂಗಾತಿ ನನಗೆ ತುಂಬಾ ಹಿಡಿಸಿತು. ಅದರಲ್ಲಿ ವಿಚಾರಣೆ, ವಿಶೇಷತೆ, ತಿಳುವಳಿಕೆ ಹಾಗೆ ಸ್ವಲ್ಪ ಬೇಸರವೂ ಆಯಿತು.

1) ಎಲ್. ಟಿ. ಕಾರ್ಲೆಯವರ ಬಗ್ಗೆ ಚೆನ್ನಾಗಿ ವಿವರಿಸಿದ್ದೀರಿ. ಯಾವ ಜನಾಂಗದ ವ್ಯಕ್ತಿಯೇ ಆಗಲಿ ಲೋಕ ಕಲ್ಯಾಣ, ಜನಾಂಗ ಕಲ್ಯಾಣ ಕಾರ್ಯಗಳನ್ನು ಪ್ರಶಂಸಿಸಬೇಕು.

2) ಆಜಾದಿ ಬಚಾವೋ ಆಂದೋಲನ: ಹಳೆಯದನ್ನು ಹೊಸತಿಗೆ ಮಾರ್ಪಡಿಸಿ ಜನತೆಯನ್ನು ಎಚ್ಚರಿಸಿದ್ದೀರಿ. ಸ್ವದೇಶಿ ಜೀವನದ ಮಟ್ಟವನ್ನು ಅರಿತು ಕೊಳ್ಳುವುದು ಬುದ್ಧಿವಂತಿಕೆ.

3) ಜೀವನದಲ್ಲಿ ಯಶಸ್ಸನ್ನು ಹೇಗೆ ಸಂಪಾದಿಸಬೇಕೆಂಬ ಸ್ವಾಮಿ ವಿವೇಕಾನಂದ ಸಂಗ್ರಹ ಜೀವನಕ್ಕೆ ಆದರ್ಶ. ಇದರಲ್ಲಿ ಒಂದನ್ನಾದರೂ ನಾವು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಶ್ರೇಷ್ಠರಾಗಬಹುದು.

4) ಸ್ವಂತ ಚಿಂತನೆ ಮೇಲೆ ನಿಲ್ಲಿ, ಶ್ರಮವಹಿಸುವುದು ಭೂಮಿ ತಾಯಿಯ ಸೇವೆಗಾಗಿ ಎಂಬ ತತ್ವ ನೀವು ಮೀರಬಾರದು ತಾಯಂದಿರು ತಮ್ಮ ಮಕ್ಕಳಿಗೆ ಕಲಿಸಬೇಕಾದ ಪಾಠ ಇದು.

5) ನಮ್ಮ ಜನಪದ ಆಟಗಳು ಹೆಚ್ಚಾಗಿ ಆನಂದ ತಂದಿದೆ. ಇದೆಲ್ಲಾ ಬರೇ ಆಟಗಳಲ್ಲ. ನಮ್ಮ ನಾಡಿನ ಜೀವನಶೈಲಿ ಘನತೆ ಗಾಂಭೀರ್ಯದ, ಖರ್ಚಿಲ್ಲದ ಆಟಗಳು. ಇಂದು ವಿಡಿಯೋ ಗೇಮ್‌ನಲ್ಲಿ ಬರುವ ಕಾಯಿಲೆಗಿಂತ ಜನಪದ ಆಟ ಹಿತವಾದದ್ದು.

6) ಆಟದಿಂದ ಸಂಘಟನೆ, ಇದೊಂದು ಜನಾಂಗೀಯ ಸೇವೆ, ಒಗ್ಗಟ್ಟು, ಸಹಬಾಳ್ವೆಗೆ ಇಲ್ಲಿ ಒತ್ತು ಕೊಡಬೇಕು.

7) ಅಯ್ಯೆಟ್ಟೀರ ಗಣಪತಿ ಮನೋಜ್ ಕುಮಾರ್‌ರವರಿಗೆ ನನ್ನ ಅನಂತ ನಮನಗಳು. ಅವರು ಉನ್ನತ ಪದವಿಗೇರಲಿ.

ಬೇಸರ:1 ಸೋಮಯ್ಯನವರ ಮೂಗರ್ಜಿ ಪತ್ರ ಧೈರ್ಯವಿಲ್ಲದವರ ನಿಂದನೆ ಮಾತು. ಜನಾಂಗ, ಜನಾಂಗ ನಿಂದೆ ಮಾಡಬಾರದು. ಲೋಕಖ್ಯಾತಿ ಪಡೆದವರ ಜೀವನ ಚರಿತ್ರೆ ಪ್ರತೀ ಜನಾಂಗಕ್ಕೂ ಅನ್ವಯಿಸುತ್ತದೆ. ಸೋಮಯ್ಯನವರಿಗೆ ಸಹನೆ ಇರಲಿ, ತನ್ನನ್ನು ತಾನು ವಿಮರ್ಶೆ ಮಾಡಿಕೊಳ್ಳಲಿ.

2. ಬಕ್ಕತ ಕೊಲ್ಲಿ: ಇದು ಜನಾಂಗ ಜನಾಂಗವನ್ನು ದ್ವೇಶಿಸುವುದಕ್ಕಲ್ಲ. ಒಂದು ಜನಾಂಗದ ಸರ್ವತೋಮುಖ ಏಳ್ಗೆಗಾಗಿ ಇಲ್ಲಿ ಘರ್ಷಣೆ ಇಲ್ಲ. ಇಲ್ಲಿ ಎನ್. ವಿ. ನಾಚಪ್ಪನ ಮುಂದಾಲೋಚನೆ ಮೆಚ್ಚತಕ್ಕದ್ದು. ಒಬ್ಬರ ಆಹಾರ ಇನ್ನೊಬ್ಬರಿಗೆ ವಿಷವಾಗುವುದೂ ಇದೆ. One man's food is another man's poison ಅನ್ನುತ್ತಾರೆ. ಒಟ್ಟಿನಲ್ಲಿ ಜೂನ್ ತಿಂಗಳ ಕೊಡಗು ಸಂಗಾತಿ ಉತ್ತಮ ಕೊಡುಗೆ ನೀಡಿತ್ತು, ವಂದನೆಗಳು.

ನಿಮ್ಮ ವಿಶ್ವಾಸಿ,
ಚೆಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ.

ಪ್ರಾರ್ಥನೆ

ನಮಿಸುವೆ ನಿನಗೆ ಗೌಡ ಮಾತೆಯೇ
ಹರಸು ನಮ್ಮ ನನವರತ
ಬೇಡುವೆ ನಿನ್ನಪಾದದ ಬಳಿಯೇ
ಕಂದನ ಹರಸು ಗೌಡ ಮಾತೆಯೇ||೧||

ತಾಯೇ ನಮ್ಮ ಮನ ಗೊಂದಲವ
ದೂರೀಕರಿಸಲು ಹರಸಮ್ಮ
ಗೌಡ ಗಡಿಸಿನ ಹೆಮ್ಮೆಯ ತಾಯೇ
ತನುಜರ ನೀನು ಮರೆಯದಿರೆ||೨||

ನಮ್ಮಲ್ಲಿ ಇರುವ ದಾಯಾದಿ ಮತ್ಸರ
ನೀಗುವ ಪರಿಯೊಳು ಹರಸಮ್ಮ
ಚೆಲ್ಲಿದ ಸ್ವರ್ಣದ ತುಣುಕುಗಳೆಲ್ಲವ
ಒಂದಾಗುವಂತೆ ನಡೆಸಮ್ಮ ||೩||

ಬೆಳೆಯಲಿ ಗೌಡ ಮಾತೆಯೆ ನಿನ್ನ
ಮಕ್ಕಳು ಮುಂದೆ ಶಾಶ್ವತವು
ಕದಲದೆ ಅಳಿಯದೆ ನಿನ್ನಲಿ ಮುಂದೆ
ಚಿರಾಯುವಾಗಲು ಹರಸಮ್ಮ ||೪||

ಕವನ:ಮಾಯಿಪನ ಮನೆ ಲಕ್ಷ್ಮಣ ಗೌಡ, ಸುಳ್ಯ.

ನನ್ನ ಆಶೆ

ನಮ್ಮ ಗೌಡ ಜನಾಂಗವು ಯಾರಿಗೂ ಕಮ್ಮಿ ಇಲ್ಲೆ
ಹೇಳುವಷ್ಟು ಮುಂದೆ ಮುಂದೆ ಬರಕ್ಕು
ನಾವ್ ನಮ್ಮದ್‌ತ್ತೇಳ್ಟು ಅಭಿಮಾನ ಬೇಕ್
ನಮ್ಮ ಗೌಡ ಜನಾಂಗಲಿ ಮುಂದೆ ಬರಕ್ಕು||
ಹಿರಿಯವ್ ನಡ್ಸಿಕಂಡ್‌ಬಂದ ಆಚಾರ ವಿಚಾರಗಳ್ನ
ಕಿರಿಯವ್ ನಾವ್ ಮುಂದಿನ ಪೀಳಿಗೆಗೆ ಕೊಡಕ್ಕು
ಹಲವ್ ಜನ ನಮ್ಮದ್ ಸಂಘ ಸಂಸ್ಥೆಗಳ್ಲಿ ದುಡ್ದವೆ
ಬ್ಯಾಡ ಯಾರು ದೂಷಿಸಿ ಕಾಲೆಳೆದು ಹಾಕುದು||
ಯಾರ್ ಸಹ ಹೊಟ್ಟೆಕಿಚ್ಚು ಪಡಿಕಾಗದ್
ಯಾರ್ ಸಹ ದ್ವೇಷಿಸ್‌ಕ್ಕಾಗದ್
ಯಾರ್ ಸಹ ಕೇಡ್ ಮತ್ಸರ ಪಡಿಕಾಗಾದ್
ಯಾರ್ ನಾವೆಲ್ಲಾ ಒಂದೆ ಗೌಡ ಜನಾಂಗದವ್
ಗೌಡ ಜನಾಂಗದ ಬಾಸೆಗೆ ಪುನಜ್ಜೀವನ ಬಂದುಟ್ಟು
ಗೌಡ ಜನಾಂಗದ ಪದ್ಧತಿ ಕೈ ಜಾರುತ ಉಟ್ಟು
ಈಗ ನವುಕ್ಕೆ ಬೇಡದ್ ಮುಂದುನವುಕ್ಕೆ ಬೇಕಾ?
ಇರ್‍ಲಿ ನಮ್ಮ ನಿಮ್ಮ ಪ್ರಯತ್ನ ಹಿಂಗೆ ಮುಂದುವರ್‍ಲಿ
ಸಂಗಾತಿಗೆ ನೀಡಕ್ಕು ಪ್ರೋತ್ಸಾಹ, ಇರ್‍ಪು ಒಂದ್ ಪತ್ರಿಕೆ
ಬೇಕ್ ನಾವ್‌ಗೆ ಅದ್ ಮುಂದಿನ ಪೀಳಿಗೆಗೆ ಹೇಳಿಕ್ಕೆ
ಸಂಗಾತಿ ಮನೆ ಮನೆಗೆ ಬಾಕನ ಸ್ವಾಗತನೀಡಕ್ಕು
ಮನೆಗೊಂದ್ ಕೊಂಡ್ ಓದಕ್ಕು ಆಗಬೇಲ್ದ್‌ದೆ ಸಂಗಾತಿ.

-ಕಟ್ರತನ ದೇವಯ್ಯ, ಮೂಡಿಗೆರೆ.

"ಗೌಡರ ಬಳಿ (ಗೋತ್ರ) ಹಾಗೂ ಗೌಡ" ಎಂಬ ಪದದ ಬಗ್ಗೆ ಬಂದ ವಿಶ್ಲೇಷಣೆ.

ಇಕ್ಕೇರಿ ಗೌಡ ಅರಸರ ಮತ್ತು ಗುಂಡಣ್ಣ ಬಳಿಯ ಕುರಿತಾಗಿ ಒಂದು ಅವಲೋಕನ ಎಂಬ ಲೇಖನವನ್ನು ಮಾನ್ಯ ಶ್ರೀ ಡಿ.ಜಿ. ನಡ್ಕರವರು ಬರೆದ ಲೇಖನವನ್ನು ಓದಿದೆನು. ಶ್ರೀಯುತರ ಪ್ರಕಾರ ಗೌಡರಿಗೆ ಬಳಿ ಪದ್ಧತಿಯು ಗೌಡರು ಬೇರೆ ಕಡೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ (ತುಳುನಾಡು) ವಲಸೆ ಬಂದ ನಂತರ ಬಳಿ ಪದ್ಧತಿ ಬಂತೆಂದು ಬರೆಯುತ್ತಾರೆ. ಕೊಡಗು ಮತ್ತುದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನೆಲಸಿದ "ಗೌಡ ಜಾತಿಯವರು ಹಿಂದೂ ಸಮಾಜದ ಒಂದು ಅಂಗವಾಗಿದ್ದು, ಬಳಿ ಪದ್ಧತಿ ತುಳುನಾಡಿಗಾಗಲಿ ಇನ್ನು ಯಾವುದೇ ಪ್ರದೇಶಕ್ಕೆ ಸೀಮಿತವಾಗಿರದೆ ಇಡೀ ಹಿಂದೂ ಸಮಾಜಕ್ಕೆ ಸೀಮಿತವಾಗಿದೆ. ಹಿಂದೂ ಸಮಾಜದ ರೂಪರೇಖೆಗಳನ್ನು ನಮ್ಮ ಋಷಿವರ್ಯರು ಸಂಶೋಧಿಸಿ ಸೂತ್ರ, ಶ್ರುತಿಗಳ ಮುಖಾಂತರ ಸಾಮಾನ್ಯ ಜನರಿಗೆ ತಿಳಿಯುವಂತೆ ಮಾಡಿದ್ದಾರೆ. ನಮ್ಮ ಧರ್ಮಶಾಸ್ತ್ರಗಳು ಪ್ರತಿಯೊಂದು ಜಾತಿ ಪದ್ಧತಿಗಳನ್ನು ಆಚರಿಸುವುದಕ್ಕೆ ಮಾರ್ಗದರ್ಶನ ನೀಡಿವೆ. ಇಂತಹ ಧರ್ಮಶಾಸ್ತ್ರಗಳಲ್ಲಿ ಗೌತಮನ ಧರ್ಮಶಾಸ್ತ್ರ, ಬಾದರಾಯಣ ಅಪಸ್ತಂಭ, ಹರೀತ, ವಶಿಷ್ಮ, ಯಜ್ಞವಲ್ಯ, ಮನು ಮುಂತಾದವರ ನಿರ್ದೇಶನ ಪ್ರಕಾರ ಜಾತಿ ಕಟ್ಟು, ಕಟ್ಟಳೆಗಳನ್ನು ಆಯಾಯ ಜಾತಿಯ ಗುರುಪೀಠದ ಮುಖಾಂತರ ಅನುಷ್ಠಾನಕ್ಕೆ ತರುವಂತೆ ಮಾಡಿದ್ದಾರೆ. ಆದ್ದರಿಂದ ಗೌಡರು ತುಳುನಾಡಿಗೆ ಬಂದ ನಂತರ ಬಳಿ ಪದ್ಧತಿಯನ್ನು ಅಳವಡಿಸಿಕೊಂಡರೆನ್ನುವುದು ಸರಿಯಲ್ಲ.

ಕ್ರಿ.ಶ. 9,10 ನೇ ಶತಮಾನದಲ್ಲಿ ಹಿಂದೂ ಸಂಸ್ಕೃತಿ ಅಧೋಗತಿಗೆ ಇಳಿದು ಹೋಗಿದ್ದ ಕಾಲದಲ್ಲಿ ಅದನ್ನು ಉದ್ಧರಿಸಲು ಶ್ರೀ ಶಂಕರಾಚಾರ್ಯ, ಶ್ರೀ ಮಾಧ್ವಚಾರ್ಯ, ಶ್ರೀ ರಾಮಾನುಜಚಾರ್ಯರು ಮುಂದೆ ಬಂದು ಹಿಂದೂ ಸಂಸ್ಕೃತಿಯನ್ನು ಉಳಿಸಿದರು. ಶ್ರೀ ಶಂಕರಾಚಾರ್ಯರು ಶೃಂಗೇರಿಯಲ್ಲಿ ಶಾರದಾಪೀಠವನ್ನುಸ್ಥಾಪಿಸಿ ಅವರಿಗೆ ದೇಶದ ಎಲ್ಲಾ ಕಡೆಗಳಲ್ಲಿ ಶಿಷ್ಯವೃಂದದವರಿದ್ದರು. ಅವರ ಪೈಕಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ ಹಿಂದೂಧರ್ಮವನ್ನು ಉದ್ಧರಿಸಬೇಕೆಂದು ವಿಜಯನಗರದ ಸಂಸ್ಥಾಪಕರಾದ ಹಕ್ಕಬುಕ್ಕರಿಗೆ ಪ್ರೋತ್ಸಾಹ ಮಾಡಿದ ಶ್ರೀ ವಿದ್ಯಾರಣ್ಯರು ಒಬ್ಬರು. ಅವರ ಮಾರ್ಗದರ್ಶನದಲ್ಲಿ ಹಿಂದೂ ಸಮಾಜದಲ್ಲಿ ಹುಟ್ಟಿ ಸರ್ವರಗರುವಾಗಿ ಎಲ್ಲಾ ಹಂತದ ಪದ್ಧತಿಗಳನ್ನು ಅಳವಡಿಸುವುದಕ್ಕೆ ಸಾಧ್ಯವಾಗುವಂತೆ ಗುರು ಉಪದೇಶದಂತೆ ರೂಪಿತಗೊಂಡಿದೆ. ಕರ್ನಾಟಕದ ಎಲ್ಲಾ ಭಾಗದಲ್ಲಿ ಈ 3 ಗುರುಪೀಠಗಳು ಹಿಂದೂ ಸಮಾಜದ ಜನರ ಸಾಮಾಜಿಕ ಆಗು ಹೋಗುಗಳನ್ನು ನಿರ್ದೇಶಿಸಿದ್ದಾರೆ. ಗೌಡರು ವಿಜಯ ನಗರದ ಹಂಪಿಯ ಆಸುಪಾಸುಗಳಲ್ಲಿ ನೆಲಸಿದ್ದಾಗಲೇ ಶೃಂಗೇರಿ ಜಗದ್ಗುರುಗಳನ್ನು ಇವರು ಗುರುಗಳಾಗಿ ಸ್ವೀಕರಿಸಿದ್ದಾರೆ.

ಹಿಂದೆ "ಗೌಡರ ಎಲ್ಲಾ ಪದ್ಧತಿಗಳು ಶೃಂಗೇರಿ ಜಗದ್ಗುರುಗಳ ಮಾರ್ಗದರ್ಶನ ಪ್ರಕಾರ ನಡೆಯುತ್ತಿತ್ತು. 1911, 1912, 1913 ರಲ್ಲಿ ದಕ್ಷಿಣ ಕನ್ನಡ ಹಾಗೂ ಕೊಡಗಿನ ಗೌಡರೆಲ್ಲಾ ಸಭೆ ಸೇರಿ ತೀರ್ಮಾನಿಸಿ ಜಗದ್ಗುರು ಶ್ರೀ ಶಂಕರಾಚಾರ್ಯರ ನಿರೂಪದ ಪ್ರಕಾರ ಜಾತಿಯ ಕಟ್ಟು ಕಟ್ಟಳೆಗಳನ್ನು ಪುರ್ನಜ್ಜೀವನ ರೂಪಿಸಿದಂತೆ, ಬಳಿ ಪದ್ಧತಿ ಈ ಗುರು ಪೀಠದ ಮಾರ್ಗದರ್ಶನದಿಂದಲೇ ಆಗಿದೆ ಹೊರತು, ಬೇರೆ ಯಾವ ಮುಖಂಡ ಹಾಗೂ ರಾಜರ ಮುಖಾಂತರ ನಡೆದಿಲ್ಲ. ಹಾಗೆ ನಡೆದಿದ್ದರೆ ಇದಕ್ಕೆ ಸಮಾಜದ ಮನ್ನಣೆ ಇರುತ್ತಿರಲಿಲ್ಲ. ಗೋತ್ರಯಾಬಳಿ ಹೆಸರಿಟ್ಟದ್ದು ಆ ಬಳಿಯ ಗೋತ್ರದ ಮೂಲ ಪುರುಷನ ಸಂತತಿಯವರನ್ನು ಗುರ್ತಿಸುವುದಕ್ಕಾಗಿಯೆ ಇಟ್ಟ ಒಂದು ಹೆಸರೇ ಹೊರತು, ಬೇರೆ ರೀತಿಯದಲ್ಲ. ಬಳಿ ಪದ್ಧತಿ ಹಿಂದೂ ಸಮಾಜದ ಎಲ್ಲಾ ಜಾತಿಗಳಲ್ಲಿಯೂ ಇದೆ. ಆದರೆ ಒಂದೊಂದು ಪ್ರದೇಶಗಳಲ್ಲಿ ಒಂದೊದು ರೀತಿಯ ಹೆಸರಿನಿಂದ ಆ ಪಂಗಡದ ಮೂಲ ಪುರುಷರ ವಂಶಸ್ಥರನ್ನು ಒಂದುಗೂಡಿಸಲು ಇಟ್ಟ ಒಂದು ಹೆಸರೇನಲ್ಲ. ಉದಾಹರಣೆಗೆ ಹಳೇ ಮೈಸೂರಿನ ಗಂಗಡಕಾರ, ಮರಸ್ಸು, ಹಳ್ಳಿಕಾರ, ಕುಂಚಿಟಿಗ ಒಕ್ಕಲಿಗರು ತಮ್ಮ ಬಳಿಯನ್ನು ಮರಗಳ ಗಿಡಗಳ ಧಾನ್ಯಗಳ ಹೆಸರನ್ನಿಟ್ಟಿದ್ದಾರೆ ಎಂಬ ಪಕ್ಷಕ್ಕೆ ಆ ಗೋತ್ರದ ಜನರ ಬುದ್ಧಿಯಾ ನಡವಳಿಕೆ ಆಯಾಯ ಮರಗಳ ಬಳ್ಳಿಗಳ ಅಥವಾ ಧಾನ್ಯದ ಗುಣದಂತೆ ಇವೆ ಎಂದು ಹೇಳಲು ಸಾಧ್ಯವಿಲ್ಲ. ಡಿ. ವಿ. ನಡ್ಕರವರು ಹೇಳಿದ ಗುಂಡನ ಬಳಿಯ ಜನ್ನರ ಬುದ್ಧಿವಂತಿಕೆ ನಡವಳಿಕೆಯಂತೆ ಬೇರೆ ಜನರ ಬುದ್ಧಿವಂತಿಕೆಯೂ ನಡವಳಿಕೆ ಇಲ್ಲವೆಂದೂ ಹೇಳಲು ಸಾಧ್ಯವಿಲ್ಲ.

"ಗೌಡ" ಎಂಬ ಪದವು ಒಂದು ಜಾತಿಯ ಹೆಸರಲ್ಲ. ಯಾರ್‍ಯಾರೋ "ಗೌಡ" ದೇಶದಿಂದ ಬಂದವರೆಲ್ಲಾ ಗೌಡರೆಂದು ಅವರವರ ಹೆಸರಿನ ಮುಂದೆ ಹಾಕಿಕೊಳ್ಳುತ್ತಾರೆ. ಉದಾಹರಣೆಗೆ ರಾಮೇಗೌಡ ಎಂದು ಒಕ್ಕಲಿಗ ಗುಂಪಿನವರೂ ಹಾಕಿಕೊಳ್ಳುತ್ತಾರೆ. ಅದೇ ರೀತಿ ಲಿಂಗಾಯುತರು ಶಂಕರೇಗೌಡ ಎಂದು ಕರೆದುಕೊಳ್ಳುತ್ತಾರೆ. ಅದೇ ರೀತಿ ಕರಿಯಣ್ಣ ಗೌಡ ಎಂದು ಕುರುಬರ ಜನಾಂಗದವರು ಕರೆದುಕೊಳ್ಳುತ್ತಾರೆ. ಆದ್ದರಿಂದ ಗೌಡ ಎಂಬ ಶಬ್ದವು ಒಂದು ಜಾತಿಯ ಹೆಸರಲ್ಲ. ಆದರೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 10 ಕುಟುಂಬ 18 ಗೋತ್ರದವರು ತಮ್ಮ ಜಾತಿಯ ಹೆಸರನ್ನು "ಗೌಡ" ಎಂಬುದಾಗಿ ನಮೂದಿಸುವುದಕ್ಕೆ ಕಾರಣವೇನೆಂದರೆ ತುಳು ನಾಡಿನಲ್ಲಿ "ಗೌಡ" ಎಂದು ತನ್ನ ಹೆಸರಿನ ಮುಂದೆ ಕರೆಯುವ ಜನರು ಈ 10 ಕುಟುಂಬ 18 ಗೋತ್ರದವರು ಮಾತ್ರ ಇದ್ದುದರಿಂದ ಇವರ ಜಾತಿಯ ಹೆಸರನ್ನು ಬೇರೆ ಜಾತಿಯವರು "ಗೌಡ" ಎಂದಾಗಿ ಕರೆದುದರಿಂದ ಇವರ ಜಾತಿಯ ಹೆಸರು ಗೌಡ ಎಂಬುದಾಗಿ ಕರೆಯಲ್ಪಟ್ಟರು. ಗೌಡರ ಜಾತಿಯ ನಿಜವಾದ ಹೆಸರು ಹಾಲು ಒಕ್ಕಲು ಮಕ್ಕಳು ಎಂದು.

90.ಅಭಯನಾಮ 91.ಅಲೋಲುಪ 92.ಪ್ರಮಾದಿ

"ಗೌಡ ರಾಜ್ಯದ ವಿಷಯ"

ನಾನು ಈ ಹಿಂದೆ ಹೇಳಿದಂತೆ "ಗೌಡ" ಎಂಬ ಹೆಸರು ಸಾಮಾನ್ಯವಾಗಿ ಕರ್ನಾಟಕದ ಹೆಚ್ಚಿನ ಜಾತಿಯವರ ಹೆಸರಿನ ಮುಂದೆ ಗೌಡ ಎಂಬುದಾಗಿ ಬರುತ್ತದೆ. ಈ ರೀತಿ ಗೌಡ ಎಂಬುದಾಗಿ ಬಂದವರೆಲ್ಲಾ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡರಲ್ಲ ಅಥವಾ ಗಂಗಡಿಕಾರ, ಮರಸ್ಸು, ಕುಂಚಿಟಿಗ, ಮುಂಜಾದ ಪಂಗಡಗಳ ಒಕ್ಕಲಿಗರಲ್ಲದೆ ಲಿಂಗಾಯುತರು, ಹಾಲಕ್ಕಿ ಒಕ್ಕಲ್ ಕುರುಬರು ಸಹ ತಮ್ಮ ಹೆಸರಿನ ಜೊತೆಯಲ್ಲೇ ಗೌಡ ಎಂಬುದಾಗಿ ಇಟ್ಟು ಕೊಳ್ಳುವುದರಿಂದ ಅವರೆಲ್ಲಾ ಗೌಡ ದೇಶದಿಂದ ಬಂದವರು. ಹಿಂದೆ ಗೌಡರು ಲಿಂಗಧಾರಣೆ ಮಾಡಿ ಲಿಂಗಾಯಿತರಾದರೂ ತಮ್ಮ ಹೆಸರಿನ ನಂತರ ಗೌಡ ಪದವನ್ನು ಈಗಲೂ ಬಳಸು ತ್ತಿರುವುದು ಉತ್ತರ ಕರ್ನಾಟಕದಲ್ಲಿ ಈಗಲೂ ಚಾಲ್ತಿಯಲ್ಲಿದೆ. ಉದಾ: ರಾಮಪ್ಪಗೌಡ ಭೀಮನಗೌಡ ಪಾಟೀಲ್. ಇಕ್ಕೇರಿ ವಂಶದ ನಾಯಕರು ಗೌಡರೆಂದು ಹೆಸರಿನ ಮುಂದೆ ಇಟ್ಟುಕೊಂಡಿದ್ದರೂ ಅವರು ಲಿಂಗಾಯುತರು. ಇಕ್ಕೇರಿ ವಂಶದವರೇ 1600 ನೇ ಇಸವಿಯಿಂದ 1834 ರವರೆಗೆ ಕೊಡಗನ್ನು ಆಳಿದ ರಾಜವಂಶವು. ಲಿಂಗಾಯುತರು ಇದಕ್ಕೆ ಸಾಕ್ಷಿಯಾಗಿ ಕೊಡಗಿನ ಸೋಮವಾರ ಪೇಟೆ ತಾಲ್ಲೂಕಿನ ಶನಿವಾರಸಂತೆ, ಸೋಮವಾರ ಪೇಟೆ, ಕುಶಾಲನಗರ ಹೋಬಳಿ ಗಳಲ್ಲಿ ಲಿಂಗಾಯುತರ ಹೆಸರಿನ ಜೊತೆಯಲ್ಲಿ ಗೌಡ ಎಂಬುದಾಗಿ ಇಟ್ಟುಕೊಡಿದ್ದಾರೆ. ಆದ್ದರಿಂದ "ಗೌಡ ಎಂಬುದಾಗಿ ಕರೆದವರೆಲ್ಲಾ ಒಕ್ಕಲಿಗರಾಗಲೀ, ಗೌಡರಾಗಲೀ ಆಗಿರುವುದಿಲ್ಲ. ಬೆಂಗಳೂರನ್ನು ಆಳಿದ ಕೆಂಪೇ ಗೌಡರು ಮರಸ್ಸು ಒಕ್ಕಲಿಗರ ಸಂತತಿಯವರು. ಹಿಂದೆ ಲಿಂಗಾಯಿತರಲ್ಲಿ ತಮ್ಮ ಹೆಸರಿನ ನಂತರ ಗೌಡ " ಎಂಬ ಶಬ್ಧವನ್ನು ಉಪ ಯೋಗಿಸುವವರಲ್ಲಿ ಹೆಚ್ಚಿನ ಜನರು ಒಕ್ಕಲಿಗರಿಂದ ಲಿಂಗಾಯಿತರಾಗಿ ಪರಿವರ್ತಿಸಲ್ಪಟ್ಟ ವರೆಂದು ಹೇಳಬಹುದು. ಉದಾಹರಣೆಗೆ ತುಮಕೂರು ಚಿತ್ರದುರ್ಗ ಜಿಲ್ಲೆಯಲ್ಲಿರುವ ನೊಣಂಬ ಒಕ್ಕಲಿಗರಲ್ಲಿ, ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆಯ ಮರಸ್ಸು,ಒಕ್ಕಲಿಗರಲ್ಲಿ, ಉತ್ತರ ಕರ್ನಾಟಕದ ರೆಡ್ಡಿ ಒಕ್ಕಲಿಗರಲ್ಲಿ ಕೆಲವರು ಒಕ್ಕಲಿಗರೂ ಹಾಗೂ ಲಿಂಗಾಯಿತ ರೆಡ್ಡಿಗಳು ಇದ್ದಾರೆ.

ಆದ್ದರಿಂದ " ಗೌಡ ಎಂಬುದಾಗಿ ಹೆಸರಿನಲ್ಲಿ ಬರುವವರೆಲ್ಲಾ ಒಕ್ಕಲಿಗ ಗೌಡರೆಂದು ಹೇಳುವುದು ಸರಿಯಲ್ಲ.

-ಪ್ರೊ|| ಪೂಜಾರಿ ಮೊಣ್ಣಪ್ಪ

ತಿದ್ದುಪಡಿ

ಕೊಡಗು ಸಂಗಾತಿ ಮೇ1 ರಿಂದ 31,2003

ಪುಟ 11 ಕೊನೆಪ್ಯಾರ,ಬಿಳಿಗೇರಿ ಗ್ರಾಮದ ಪೂಜಾರಿ ಮನೆಯ ದುರಸ್ತಿ ಕಾರ್ಯಕ್ಕೆ ಧನ ಸಹಾಯ ಮಾಡಿದವರು "ತವರು ಮನೆಯ ಪ್ರೇಮಿಗಳಾದ ಶ್ರೀಮತಿ ನಂಗಾರು ಮಾಚಮ್ಮ ರಾಮಯ್ಯನವರು, ಶ್ರೀಮತಿ ಕುಯ್ಯಮುಡಿ ಹಂಸಾಕ್ಷಿಬಾಬು, ಶ್ರೀಮತಿ ಕರ್ಣೇಯ್ಯನ ಮಣಿಶೀಲಾ ಸೋಮಣ್ಣ, ಶ್ರೀಮತಿ ಕೋಳುಮಾಡನ ಇಂದಿರಾ ವಿನಯ" ಎಂದು ಸಹೃದಯ ಓದುಗರು ಓದಿಕೊಳ್ಳುವುದು. ಅಪೂರ್ಣ ವಿವರಕ್ಕೆ ಸಂಗಾತಿ ವಿಷಾದಿಸುತ್ತದೆ.

-ಸಂಪಾದಕಿ

ಕೆಲವು ಸಂಕೇತಗಳು ಮತ್ತು ಅವುಗಳ ಅರ್ಥ

ಸಂಕೇತ		ಅರ್ಥ
1. ಕೆಂಪು ತ್ರಿಕೋನ	-	ಕುಟುಂಬ ಯೋಜನೆಯ ಸಂಕೇತ
2. ಕಪ್ಪು ಧ್ವಜ	-	ಪ್ರತಿಭಟನೆ ಸೂಚಕ
3. ಕೆಂಪು ಬೆಳಕು	-	ಅಪಾಯಕಾಗಿ ಮತ್ತು ತುರ್ತು ಪರಿಸ್ಥಿತಿ ಮತ್ತು ಟ್ರಾಫಿಕ್ ರಸ್ತೆಗಳಲ್ಲಿ ನಿಲ್ಲುವ ಸೂಚನೆ
4. ಕೆಂಪು ಧ್ವಜ	-	ಅಪಾಯಕಾರಿ ಸಂದರ್ಭ ಅರ್ಥ ಕ್ರಾಂತಿಯ ಸೂಚನೆ
5. ಹಸಿರು ದೀಪ	-	ಶಾಂತಿ ಮತ್ತು ಸರಳತೆಯ ಸೂಚಕ
6. ಚಕ್ರ	-	ಪ್ರಗತಿಯ ಸಂಕೇತ
7. ಕಮಲ	-	ಸಂಸ್ಕೃತಿ, ನಾಗರಿಕತೆಯ ಸಂಕೇತ
8. ಪಾರಿವಾಳ	-	ಶಾಂತಿ ಸಂಕೇತ
9. ಕೆಂಪು ಕತ್ತರಿಯ ವಿದ್ಯೆ	-	ವೈದ್ಯಕೀಯ ಚಿಕಿತ್ಸೆಯ ಸಂಕೇತ
10. ಆಲ್ಿವ್ ಟೊಂಗೆ	-	ಶಾಂತಿ ಸಂಕೇತ
11. ತ್ರಿವರ್ಣ	-	ಭಾರತ ರಾಷ್ಟ್ರೀಯ ಧ್ವಜದ ಸಂಕೇತ
12. ಅರ್ಧಕ್ಕೆ ಇಳಿಸಿದ ಧ್ವಜ	-	ವಿಷಾದ ಸೂಚಕ
13. ಮಹಾರಾಜ	-	ಭಾರತ ವಾಯುಪಡೆ ಮತ್ತು ವಿಮಾನ ಹೆದ್ದಾರಿಗಳ ಸೂಚನೆಗಳು

ಸಂಗ್ರಹ: ಕೋಡಿಯಡ್ಕ ರಮೇಶ್, ಮಕ್ಕಂದೂರು.

ಟಾಪ್ ಟೆನ್

2002 ನೇ ಸಾಲಿನಲ್ಲಿ ಹೆಚ್ಚು ಹಾಲು ಉತ್ಪಾದಿಸಿರುವ ರಾಜ್ಯಗಳು. ಕರ್ನಾಟಕಕ್ಕೆ 7ನೇ ಸ್ಥಾನ.

ಉತರ ಪ್ರದೇಶ	16, 506 ಟನ್‌ಗಳು
ಪಂಜಾಬ್	8375 ಟನ್‌ಗಳು
ರಾಜಸ್ಥಾನ	6330 ಟನ್‌ಗಳು
ಮಧ್ಯ ಪ್ರದೇಶ	6091 ಟನ್‌ಗಳು
ಮಹಾರಾಷ್ಟ್ರ	6024 ಟನ್‌ಗಳು
ಗುಜರಾತ್	5573 ಟನ್‌ಗಳು
ಕರ್ನಾಟಕ	5357 ಟನ್‌ಗಳು
ಆಂಧ್ರ ಪ್ರದೇಶ	5145 ಟನ್‌ಗಳು
ತಮಿಳುನಾಡು	4926 ಟನ್‌ಗಳು
ಪಶ್ಚಿಮ ಬಂಗಾಳ	4926 ಟನ್‌ಗಳು

(ಸಾವಿರ ಟನ್‌ಗಳಲ್ಲಿ)

93.ದೀರ್ಘರೋಮ 94.ವೀರ್ಯದಾನ 95.ದೀರ್ಘ

ಬಾಲ ಸಂಗಾತಿ ವಿಭಾಗ : ಜ್ಞಾನ -12

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ವೈಮಾನಿಕ ಶಾಸ್ತ್ರ:- ಬಹಳ ಅಪೂರ್ವವಾದ ಈ ಕೃತಿನ (ಶಾಸ್ತ್ರನ) ಸನ ರಚನೆ ಮಾಡ್ದ್ ಮಹರ್ಷಿ, ಭರದ್ವಾಜರ್. ಇವರ್‌ಂದ ಪ್ರಣೀತವಾದ ಸೂತ್ರಗ ಭೋಧಾನಂದವೃತ್ತಿ"ತ್ತೇಳುವ ಶ್ಲೋಕರೂಪದ ವ್ಯಾಖ್ಯೆನೂ ಇದರ್ಲಿ ಉಟ್ಟು.

ವಿವಿಧ ಪ್ರಕಾರದ ವಿಮಾನನ ತಯಾರ್ಸುವ ಬಗ್ಗೆ ಈ ಗ್ರಂಥಲಿ ಮಾಹಿತಿ ಕೊಡಲಾಗುಟ್ಟು. ವಿಮಾನದ ತಯಾರಿಕೆಗೆ ಬೇಕಾದ ಧಾತುಗಳ ಹಾಗೂ ಉಪಕರಣಗಳ ವರ್ಣನೆ ಇದರ್ಲಿ ಉಟ್ಟು. ವಿಮಾನ ಚಾಲಕರ್ ಏನೇನ್ ತಿಳ್‌ದಿರೋಕು, ವಿಮಾನ ಚಾಲನೆಗೆ ಶಕ್ತಿ ಕೊಡುವ ವಸ್ತುಗ ಯಾವುದ್ ಮುಂತಾದವುಗಳ ಬಗ್ಗೆ ವಿವರ ಆಗಿ ಇಲ್ಲಿ ವರ್ಣನೆ ಮಾಡ್ಯೊಳೊ. ಇದೊಂದು ಬುದ್ಧಿ ಪ್ರಚೋಧಕ ಗ್ರಂಥ. ಇದರ ಇನ್ನೊಂದು ವೈಶಿಷ್ಟ್ಯತ್ತೇಳ್ರೆ ಎರಡ್ ಅಥವಾ ಮೂರ್ ಮಹಡಿಗ ಇರುವ ವಿಮಾನನ ಹೆಂಗೆ ರಚನೆ ಮಾಡಕ್‌ತ್ತೇಳುವ ವಿವರನೂ ಇಲ್ಲಿ ಉಟ್ಟು.

ಈ ಗ್ರಂಥಲಿ ಮಹರ್ಷಿ ಭರಧ್ವಾಜರ್ ವಿಮಾನದ ಮೂಲಕ ವಿಶ್ವ ಪರ್ಯಟನೆ ಮಾಡಿಕ್ಕಾಗಿ, ವಸ್ತುಗಳ ಸಾಗಾಟ ಮಾಡಿಕ್ಕಾಗಿ ಬೇಕಾದ ಸೂಚನೆಗಳ್ನ ನೀಡ್ಯೊಳೊ. ಇದಲ್ಲದೆ, ವಿಮಾನದ ಮೂಲಕ ನಕ್ಷತ್ರಗಳ ಛಾಯಾಪಥನ ತಲ್ಪುವ ಬಗ್ಗೆನೂ ಇಲ್ಲಿ ವಿವರಣೆ ಕೊಟ್ಟೊಳೊ.

ಈ ಗ್ರಂಥಲಿ ಹೇಳ್ದ "ಮರೂತ್ಸವ" ತ್ತೇಳುವ ಹೆಸ್‌ರ್‌ನ ವಿಮಾನನ ಮುಂಬಯಿಯ "ತಾಲ್ಪಿಡೆ" ದಂಪತಿಗ ಮಾಡಿದ್ದೊ. ಸೌರ ಶಕ್ತಿಯ ಸಹಾಯಂದ ಎರಡ್ ಸಾವಿರ ಅಡಿ ಎತ್ತರಕ್ಕೆ ಹಾರಿ ಯಾವುದೇ ಅಡೆ ತಡೆ ಇಲ್ಲದೇ ಸಮುದ್ರ ತೀರಲಿ ಇಳ್ದಿದ್ದೊ. ಈ ಘಟನೆ ನಡ್ದದ್ದ್ 1865 ರ್‌ಲಿ. ಇದರಿಂದ ಗೊತ್ತಾದೆ ಭಾರತೀಯರೆ ಎಲ್ಲಕ್ಕಿಂತ ಮೊದಲ್ ವಿಮಾನನ ಕಂಡ್ ಹಿಡ್ದ್ ರಚನೆ ಮಾಡ್ದ್‌ತ.

ಈಗ ಹೇಳಿ ಮಕ್ಕಳೆ ವಿಮಾನನ ಕಂಡ್ ಹಿಡ್ದದ್ದ್ ರೈಟ್ ಸಹೋದರರ್‌ತ್ತೇಳಿಕ್ಕೆ ನಿಮ್ಮ ಆತ್ನ ಒಪ್ಪಿದೆಯಾ? ತೇತ್ರಾಯುಗಲಿ ರಾವಣನ ಹತ್ರ ಪುಷ್ಪಕ ವಿಮಾನ ಇತ್ತ್. ನಮ್ಮ ಪ್ರಾಚೀನ ಇತಿಹಾಸನ ನೋಡಿರೆ ಪುಷ್ಪಕ ವಿಮಾನ ಕೇವಲ ಕಾಲ್ಪನಿಕ ಅಲ್ಲ, ಭರದ್ವಾಜರ್ ಬರ್ದ ಸೂತ್ರಗಳ ನೋಡ್ರೆ ಹಿಂದಿನವು ವಿಮಾನ ತಯಾರಿಕೆಲಿ ಪಳಗಿದ್ದೊತ ಲಾಯಾಕಾಗಿ ಗೊತ್ತಾದೆ. ಇಷ್ಟೆಲ್ಲ ಇದ್ದೂ ನಮ್ಮವು ವಿದೇಯತೆಯಿಂದ ಕೈ ಕಟ್ಟಿಕಂಡ್ 1903 ರಲ್ಲಿ ರೈಟ್ ಸಹೋದರರೇ ಮೊಟ್ಟಮೊದಲ್ ವಿಮಾನನ ಕಂಡ್ ಹಿಡ್ದದ್‌ತ ಎಳೆ ಮಕ್ಕಳಿಗೆ ಬೋಧಿಸುವೆ. ಇದ್ ನಾಚಿಕೆಗೇಡಿನ ಸಂಗತಿ ಅಲ್ಲದೆ ಮತ್ತೇನ್ ಅಲ್ಲ.

-ಬಿಟ್ಟೀರ ಚೊಂದಮ್ಮ ಶಂಭು.

ಮುಂದುವರ್ದದೆ

ಬಾಲ ಸಂಗಾತಿ ವಿಭಾಗ ಕತೆ -2

ಮಿತಿ ಇಲ್ಲದ ಆಶೆಯ ಫಲ

ಒಬ್ಬ ಕಟ್ಟ್‌ಗಾರ ಇತ್ತ್. ಅಂವ ಊರಿಂದ ಊರಿಗೆ ಕಟ್ಟ್ ಹೊತ್ತ್‌ಕಂಡ್, ಸಾಮಾನ್‌ಗಳ್ನ ಮಾರಿ ಕತ್ತಲೆ ಆಗೋದ್ರೊಳ್ಗೆ ತನ್ನ ಊರಿಗೆ ವಾಪಾಸ್ಸ್ ಬಾತಿತ್ತ್.

ಒಂದು ದಿನ ಹಿಂಗೆ ವ್ಯಾಪಾರ ಮುಗ್ಸಿಬಾಕಾಕನ ಸ್ವಲ್ಪ ತಡ ಆಗಿಹೋತ್. ಅಂದ್ ಅಮವಾಸೆ ಬೇರೆ. ಅಂವ ಕತ್ತಲೆ ಆಗೋದ್ರೊಳ್ಗೆ ಊರು ತಲ್ಪಕುತ ದಾಪುಗಾಲ್ ಹಾಕಂಡ್ ಬೇಗ ಬೇಗ ನಡ್ದದೆ. ಒಂದು ದೊಡ್ಡ ಕುರುಚಲ್ ಕಾಡ್ ದಾಟಿರೆ ಅವನ ಊರ್ ಸಿಕ್ಕ್‌ತಿತ್ತ್. ಎಷ್ಟ್ ಬೇಗ ನಡ್ದರೂ ಕತ್ತಲೆ ಸ್ವಲ್ಪ ಸ್ವಲ್ಪ ಆಗಿ ಪೂರ್ತಿ ಆವರಿಸಿಕಂಡದೆ. ಇನ್ನೂ ಅರ್ಧ ಕಾಡ್ ಕೂಡ ದಾಟಿತ್‌ಲೆ. ಕಟ್ಟ್‌ಗಾರ ಧೈರ್ಯ ಮಾಡಿಕಂಡ್ ಆಗಾಗ ಮಿಂಚ್‌ತಿದ್ದ ಸಿಡ್ಲ್‌ನ ಬೆಳ್ಕಲಿ ಸುಧಾರಿಸ್ಕಂಡ್ ನಡ್‌ಕಂಡ್ ಹೋಗ್‌ತಿತ್ತ್. ಆಗ ಇದ್ದಕ್ಕಿದಂಗೆ ಒಮ್ಮೆ ಜೋರಾಗಿ ಗಾಳಿ ಬೀಸಿತ್, ದೂರಲಿ ಯಾರೋ ಕರ್ದಂಗೆ ಆತ್. ಕಟ್ಟಿಗಾರಂಗೆ ಹೆದ್ರಿಕೆ ಆತ್. ಆಗ ದೂರಂದ ಮಂದ ಸ್ವರ ಕೇಳ್ತ್. ಓ ದಾರಿಗ ನಿಲ್ಲ್ ಓ ದಾರಿಗ ನಿಲ್ಲ್‌ತ್ತೇಳ್ತ್. ಅಂವ ನಿತ್ತ್ ಸುತ್ತಲೂ ನೋಡ್ತ್ ಒಂದೂ ಕಾಂಬತ್ತಿತ್ತಲೆ. ಕತ್ತಲೆ ಗುಯ್‌ಗುಟ್ಟ್‌ತಿತ್ತ್. ಎಲ್ಲೊ ನಂಗೆ ಭ್ರಮೆ ಈ ಕರಿಗುಟ್ಟುಕತ್ತಲೆಲಿ ಯಾರ್ ಇದ್ದವೆತ ಗ್ಯಾನಮಾಡಿ ಎರಡ್ ಹೆಜ್ಜೆ ಮುಂದೆ ಹೋತ್. ಆಗ ಪುನಃ ಅದೆ ಸ್ವರ ಅವನ ಹತ್ರಲಿ ಕೇಳ್ತ್. ಓ ದಾರಿಗ ಓ ದಾರಿಗ ನಿಲ್ಲ್ ನಿಲ್ಲ್‌ತ್ತೇಳ್ತ್. ಆಜ್ಞೆ ಮಾಡುವ ಈ ಗಟ್ಟಿ ಸ್ವರ ಕೇಳಿ ಕಟ್ಟ್‌ಗಾರಂಗೆ ಕೈ ಕಾಲ್ ನಡ್ಗಿಕೆ ಶುರು ಆತ್. ಆಗ ಮತ್ತೆ ಅದೇ ಸ್ವರ ಹೆದ್‌ರ್‌ಬಡ, ನೀನ್ ಇಲ್ಲಿ ಬಿದ್ದಿರುವ ಕಲ್ಲ್‌ಗಳನ್ನ ನಿಂಗೆ ಬೇಕಾದಷ್ಟು ತಕಂಡ್ ಹೋಗು. ನಾಳೆ ಬೆಳಿಗ್ಗೆ ಇದೆಲ್ಲಾ ಚಿನ್ನ ಆಗಿದ್ದದೆ. ಒಂದೇ ದಿನ ಆಮೇಲೆ ಆದುಲೆತ ಹೇಳ್ತ್. ಆ ಸ್ವರ ಮತ್ತೆ ಕೇಳ್‌ಲೆ. ದಾರಿಗಂಗೆ ನಗೆಬಾತ್. ಕಲ್ಲ್ ಚಿನ್ನ ಆದೆಯಾ? ಇದ್ ಭೂತ ಚೇಷ್ಟೆತ ಗ್ಯಾನ ಮಾಡ್ತ್. ಆದರೂ ನೋಡ್ನೊತ ಮೂರುನಾಕ್ ಕಲ್ಲ್‌ಗಳ್ನ ಹೆರ್ಕಿಕಂಡ್ ಚೀಲದೊಳಗೆ ಹಾಕಂಡತ್. ಹೆಂಗೋ ಕತ್ತಲೆಲೆ ಮನೆ ತಲ್ಪಿತ್. ಬೆಳಿಗ್ಗೆ ಎದ್ದ್ ನೋಡ್‌ಕಾಕ್‌ನ ಕಲ್ಲ್‌ಗ ಚಿನ್ನ ಆಗಿದ್ದೊ. ಅವಂಗೆ ಕುಷಿಯಾಗುವ ಬದ್‌ಲ್ ಬೇಜಾರಾತ್. ಅಯ್ಯೋ ಮಂಕೇ ನಾನ್ ತುಂಬಾ ಕಲ್ಲ್ ತಕಂಡ್ ಬಾತ್‌ಲೆಲಾತ. ಸ್ವಲ್ಪ ಚಿನ್ನನ ಮಾರಿ, ಬಂಗಲೆ ತಕಂಡತ್. ಸುಂದರಿ ಹೆಣ್ಣ್‌ನ ಮದುವೆ ಆತ್. ಕೈಕಾಲಿಗೆ ಆಳ್ ಕಾಳ್‌ಗ ಆದೊ. ಆದರೂ ಅವಂಗೆ ಖುಷಿ ಆತ್‌ಲೆ, ಸುಖ ಇತ್ತ್‌ಲೆ. ಆ ಸ್ವರ ಹೇಳ್ದಂಗೆ ನಾನ್ ಅಲ್ಲಿಂದ ತುಂಬಾ ಕಲ್ಲ್‌ಗಳ್ನ ತಾತ್‌ಲೆಲಾತ ಕೊರ್‌ಗಿ ಕೊರ್‌ಗಿ ಹಾಸಿಗೆ ಹಿಡ್ತ್.

ಮಕ್ಕಳೇ ಅದಿಕ್ಕೆ ಹೇಳ್ದು. ಇದ್ದದ್ದರ್ಲಿ ಖುಷಿಲಿ ಬಾಳೋಕುತ. ಇಲ್ಲದ ವಸ್ತುಗಾಗಿ ಕೊರ್ಗಿರೆ ಅದೂ ಸಿಕ್ಕುದುಲೆ ಜೊತೆಗೆ ಆರೋಗ್ಯನೂ ಹಾಳಾದೆ.

-ಮುಂದುವರ್ದದೆ.

96.ಕುಂಡಾಳಿ 97.ಕನಕಧ್ವಜ 98.ವ್ಯಾಢೋರ

ಗೌಡರ ಏಳುಬೀಳು -ಚಾರಿತ್ರಿಕ ಅವಲೋಕನ

ಎನ್. ಎಸ್. ದೇವಿಪ್ರಸಾದ್

ಒಂದೂವರೆ ಶತಮಾನದ ಹಿಂದೆ ಗೌಡ ಜನಾಂಗದವರು ಹೇಗಿದ್ದರು? ಅಮರ ಸುಳ್ಯ ದಂಗೆಯ ನಂತರದ ನೂರಹತ್ತು ವರ್ಷಗಳಲ್ಲಿ ಬ್ರಿಟಿಷ್ ವಿರೋಧಿಗಳೆಂದು ಗುರುತಿಸಿಕೊಂಡ ನಂತರ ಅವರು ಎಷ್ಟು ಅವನತಿಯನ್ನು ಕಂಡರು. ಮುಂದೆ ಸ್ವಾತಂತ್ರ್ಯ ಸಿಕ್ಕಿದ ನಂತರದ ೫೦ ವರ್ಷಗಳಲ್ಲಿ ಗೌಡ ಜನಾಂಗದ ಸಾಧಿಸಿದ ಮುನ್ನಡೆ ಇವುಗಳನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ. ಇದಕ್ಕಾಗಿ ಕೊಡಗಿನ ಮತ್ತು ಅಮರ ಸುಳ್ಯ ಸ್ವಾತಂತ್ರ್ಯ ದಂಗೆಯ ಚರಿತ್ರೆಯನ್ನು ತಿಳಿದುಕೊಳ್ಳಬೇಕಾಗುತ್ತದೆ.

ಚರಿತ್ರೆಗೆ ಸೇರಿಹೋದ ಘಟನೆಗಳು ಸಂಭವಿಸಿದ ಪಕ್ಷಿನೋಟ :

ಮಾನವ ಜೀವನಕ್ಕೆ ದುರ್ಗಮವಾದ ಅಂದಿನ ಕೊಡಗಿನ ಬಗ್ಗೆ ಹೈದರಾಲಿಗೆ ಆಸಕ್ತಿಉಂಟಾಯಿತು. ಮಲಬಾರಿಗೆ ಹೋಗಲು ಅತ್ಯಂತ ಹತ್ತಿರದ ಮತ್ತು ಅನುಕೂಲಕರವಾದ ದಾರಿ ಇದಾಗಿರುವುದೇ ಈ ಆಸಕ್ತಿಗೆ ಮೂಲ ಕಾರಣ. ಮೊದಲಾದರೆ ಸೇನೆಯ ಬಿದನೂರು ಉತ್ತರಕನ್ನಡಗಳ ಮೂಲಕವಾಗಿಯೋ ಅಥವಾ ಕೊಯಮತ್ತೂರು ಪಾಲ್‌ಘಾಟ್‌ಗಳ ಮೂಲಕ ವಾಗಿಯೇ ಮಲಬಾರಿಗೆ ಹೋಗಬೇಕಾಗಿತ್ತು. ಮೊದಲು ಕೊಡಗನ್ನು ಗೆಲ್ಲಬೇಕೆಂದು ಹೈದರ್ ನಿರ್ಧರಿಸಲು ಇದೇ ಕಾರಣ. ಆಗ ಕೋಡಗಿನ ವಿಸ್ತೀರ್ಣ ಅಂದಾಜು ೬೬೨ ಚದರ ಮೈಲು. ಜನ ಸಂಖ್ಯೆ ಹತ್ತು ಸಾವಿರ ಮೀರಿರಲಾರದು.

ಚರಿತ್ರೆಕಾರರ ಪ್ರಕಾರ ಆಗಿನ ಕೊಡಗಿನ ವರ್ಣನೆ

'ಈ ಆಶ್ಚರ್ಯಕರವಾದ ಕಾಡು ಸೀಮೆಯನ್ನು ಕುರಿತು ನಾನು ಏನನ್ನು ಹೇಳಬಲ್ಲೆ, ಅದರ ಹೆಸರು ಹೇಳುವಾಗಲೇ ಲೇಖನಿಯು ನಡಗುತ್ತದೆ. ಅದರ ಬಿದಿರಮೆಳೆಗಳು ಅಬಿಸೀನಿಯದವನ ಕುರಿ ಉಣ್ಣೆ ಕೂದಲಿಗೆ ಗುಂಗುರುಗಳಂತೆ ನುಗ್ಗಲಸಾಧ್ಯವಾಗಿವೆ. ದೊಡ್ಡ ದಾರಿಗಳೂ, ಸಣ್ಣ ದಾರಿಗಳೂ ಆಕಾಶದಲ್ಲಿ ನಕ್ಷತ್ರಗಳ ಮಧ್ಯೆ ನುಸುಳಿದಂತಿವೆ. ಈ ದೇಶದ ಗುಡ್ಡಗಳನ್ನು ಕಣಿವೆಗಳನ್ನೂ ಹಾದು ಹೋಗುವುದಕ್ಕೆ ಆಗುವುದೇ ಇಲ್ಲ. ತಗ್ಗು ಭೂಮಿಯಲ್ಲಿ ಭತ್ತದ ಬೆಳೆಯು ಎದೆಯಷ್ಟು ಎತ್ತರಕ್ಕೆ ನಿಂತಿರುತ್ತದೆ. ಸೂರ್ಯನು ಸ್ವತಃ ಶಾಖವುಳ್ಳವನಾದರೂ ಇಲ್ಲಿ ಚಳಿಗೆ ಹೆದರಿ ಪ್ರತಿದಿನವೂ ಮೋಡಗಳಿಂದ ತನ್ನನ್ನು ಮುಚ್ಚಿಕೊಂಡು ಇಲ್ಲಿಂದ ಅವಸರವಸರವಾಗಿ ಹೋಗಿಬಿಡುತ್ತಾನೆ. ಪ್ರತಿ ರಾತ್ರಿಯು ಚುರುಕಾಗಿ ಪ್ರಯಾಣ ಮಾಡುವ ಚಂದಿರನು ಆಕಾಶದ ನೀಲ ಬಣ್ಣದ ಮುಸುಕಿನಲ್ಲಿ ತನ್ನ ಮುಖವನ್ನು ಮುಚ್ಚಿಕೊಳ್ಳುತ್ತಾನೆ. ಬೇಸಿಗೆಯಲ್ಲಿ ಹೀಗಾದರೆ ಮಳೆಗಾಲದಲ್ಲಿ ದೇವರೇ ನಮ್ಮನ್ನು ಕಾಪಾಡಬೇಕು. ಮಳೆಗಾಲದ ಆರು ತಿಂಗಳುಗಳಲ್ಲಿ ಈ ದೇಶದಲ್ಲೆಲ್ಲಾ ಮಳೆಯು ಸುರಿದು ದುಃಖದಲ್ಲಿ ಇರುವ ಕಣ್ಣುಗಳಲ್ಲಿ ನೀರು ತುಂಬಿಕೊಂಡಿರುವಂತೆ ಭೂಮಿಯೆಲ್ಲಾ ನೀರಿನಿಂದ ತುಂಬಿಕೊಂಡಿರುತ್ತದೆ. ಸಾಯಂಕಾಲದಿಂದ ತೊಡಗಿ ಸೂರ್ಯೋದಯವಾಗಿ ಎರಡು ಗಂಟೆಗಳವರೆಗೆ ಹಿಮವು ಗುಡ್ಡಗಳನ್ನೂ, ಕಣಿವೆಗಳನ್ನೂ ಮುಚ್ಚಿಕೊಂಡಿರುತ್ತದೆ. ಅನೇಕ ಎತ್ತರವಾದ ದೃಢಕಾಯವಾದ ಚಟುವಟಿಕೆಯಿಂದ ಕೂಡಿದ ತರುಣರು ಚಳಿಯಿಂದ ಅವರ ಅಂಗಾಂಗಗಳ ಬಿಸಿಯನ್ನು ಕಳೆದುಕೊಂಡು ರಾತ್ರಿ ಹೊತ್ತಿನಲ್ಲಿ ತಮ್ಮ ಸಣ್ಣ ಗುಡಿಸಲಿನಲ್ಲಿ ಕಾಲುಗಳು ಎದೆಗೆ ಮುಟ್ಟುವಂತೆ ಬಿಲ್ಲಿನ ಹಾಗೆ ಶರೀರವನ್ನು ಮುದುಡಿಕೊಂಡು ಮಲಗುತ್ತಾರೆ. ಆರು ತಿಂಗಳುಗಳವರೆಗೆ ರೈತರು ತಲೆಯಿಂದ ಕಾಲಿನವರೆಗೂ ಹಳೆ ಕಂಬಳಿ ಅಥವಾ ದಪ್ಪಬಟ್ಟೆಯಿಂದ ಮುಚ್ಚಿಕೊಂಡು ಒಂಬತ್ತು, ಹತ್ತು ಗಂಟೆಗಳ ಕೆಲಸಮಾಡುತ್ತಿರುತ್ತಾರೆ. ಈ ಸಮಯದಲ್ಲಿ ಮರದ ಎಲೆಗಳ ಮತ್ತು ಕೊಂಬೆಗಳಲ್ಲಿರುವ ಜಿಗಣೆಗಳು ಅವರನ್ನೂ, ಅವರ ದನಕರುಗಳನ್ನೂ ಕಚ್ಚಿ ತಮಗೆ ಬೇಕಾದಷ್ಟು ರಕ್ತವನ್ನು ಹೀರಿದ ಮೇಲೆಯೇ ಅವರ ಮೈಯನ್ನು ಬಿಡುತ್ತವೆ. ಇಲ್ಲಿನ ಚಳಿಯನ್ನು ವಿವರಿಸುವಾಗ ಬರೆಯುವುದಕ್ಕೆ ಮೊದಲೇ ಲೇಖನಿ ಹಿಡಿದ ಕೈ ಗಡ್ಡೆ ಕಟ್ಟಿದ ಸಮುದ್ರದೊಳಗೆ ಕೈಯನ್ನು ಮುಳುಗಿಸಿದರೆ ಹೇಗೋ ಹಾಗೇ ಮರಗಟ್ಟುತ್ತದೆ. ಈ ಹವೆಯನ್ನು ವಿವರಿಸುವ ನಾಲಗೆಯು ತುಟಿಗಳ ಒಳಗಡೆ ಮುಚ್ಚಿಕೊಂಡು ಇದ್ದರೂ, ಹೆದರಿಕೆಯಿಂದಲೂ, ಆಶ್ಚರ್ಯ ದಿಂದಲೂ, ಮಂಜುಗಡ್ಡೆಯ ಹಾಗೆ ಗಟ್ಟಿಯಾಗುತ್ತದೆ.

ಇಂತಹ ಕೊಡಗಿಗೆ ಹೈದರಾಲಿಯು ಕೇರಳದ ವಯನಾಡಿಗೆ ಸೇರಿದ ಭೂ ಪ್ರದೇಶವನ್ನು ಸೇರಿಸುತ್ತಾನೆ. ಆಗ ಕೊಡಗಿನ ವಿಸ್ತೀರ್ಣವು ೧೫೫೪ ಚದರ ಮೈಲು ಆಗುತ್ತದೆ.

೧೮೦೭ ರಲ್ಲಿ ದೊಡ್ಡ ವೀರರಾಜ ಬರೆಸಿದನೆನ್ನಲಾದ ರಾಜೇಂದ್ರನಾಮೆ ಒಂದು ಕಟ್ಟು ಕಥೆಗಳ ಸಂಗ್ರಹ. ಇದರಲ್ಲಿ ೧೭೫ ವರ್ಷ ೨ ತಿಂಗಳು ೭ ದಿನಗಳ ಹಾಲೇರಿ ಮನೆತನದ ಚರಿತ್ರೆ ಬರೆಸಲ್ಪಟ್ಟಿದೆ. ಇದಕ್ಕೆ ಸಾಕ್ಷಿ ಆಧಾರಗಳಾಗಿ ಶಿಲಾಶಾಸನ, ತಾಮ್ರ ಪತ್ರ, ಕೋಟೆ, ಕೊತ್ತಲಗಳಾಗಲಿ ನೆರೆ ರಾಜ್ಯದ ಇತಿಹಾಸದಲ್ಲಿ ಸೇರಿಕೊಂಡ ದಾಖಲೆಗಳಾಗಲಿ, ಯಾವುದೂ ಇಲ್ಲ. ಇದೊಂದು ಕಪೋಲ ಕಲ್ಪಿತ ಬರವಣಿಗೆ . ರಾಬರ್ಟ್ ಅಬರ್‌ಕ್ರಾಂಬಿ ಇದನ್ನು ಇಂಗ್ಲೀಷ್‌ಗೆ ತರ್ಜಮೆ ಮಾಡಿದನೆನ್ನಲಾಗಿದೆ. ಆದರೆ ಮೂಲ ಕೃತಿ ಇಂಗ್ಲೀಷ್‌ನಲ್ಲಿ ತಯಾರಾಗಿ ಅದು ಕನ್ನಡಕ್ಕೆ ಅನುವಾದಿಸಲ್ಪಟ್ಟಿರಬಹುದೆಂದು ಒಪ್ಪುವುದು ಹೆಚ್ಚು ಸಮಂಜಸವೆನ್ನಿಸುತ್ತದೆ. ಕೊಡಗಿಗೊಂದು ಚರಿತ್ರೆ ತಯಾರಿಸುವುದು ಬ್ರಿಟಿಷರಿಗೆ ಬೇಕಾಗಿತ್ತು. ಈ ಚರಿತ್ರೆ ಬರೆಸಲ್ಪಟ್ಟ ಕಾಲದಲ್ಲಿ, ದೊಡ್ಡ ವೀರರಾಜ ಪತ್ನಿ ವಿಯೋಗದಿಂದ ಮತಿಭ್ರಮಣೆ ಹೊಂದಿದ್ದನೆಂದು ಹೇಳಲಾಗಿದೆ. ಎರಡು ಶತಮಾನಗಳ ಚರಿತ್ರೆ ಸಂಗ್ರಹಿಸುವುದು ಆತನಿಗೆ ಇಂತಹ ಸ್ಥಿತಿಯಲ್ಲಿ ಸಾಧ್ಯವಿಲ್ಲದ ವಿಚಾರ. ಕೊಡಗನ್ನು ಕೇವಲ ಮೂರು ರಾಜರು ೧೭೮೦ರಿಂದ ೧೮೩೪ರ ತನಕ ಆಳಿದರು ಎಂಬುದನ್ನು ಮಾತ್ರ ಒಪ್ಪಿಕೊಳ್ಳಬಹುದು.

ಒಮ್ಮೆ ಮಲಬಾರಿಗೆ ದಾರಿಯ ಅವಶ್ಯಕತೆಗಾಗಿ ಕರ್ನಾಟಕದ ಚರಿತ್ರೆಯಲ್ಲಿ ಗಮನಹರಿಸಲ್ಪಟ್ಟ ಕೊಡಗು ಮತ್ತೆ

99.ದುಷ್ಟರಾಜಯ 100.ವಿರಣ 101. ಕೌರವರ ತಂಗಿಯ ಹೆಸರು ದುಃಶೀಲಾ

ತಲಚೇರಿಯಲ್ಲಿದ್ದ ಬ್ರಿಟಿಷ್ ಅಧಿಕಾರಿಗಳ ಗಮನ ಸೆಳೆಯಿತು. ಶ್ರೀರಂಗಪಟ್ಟಣ ಮತ್ತು ಈಸ್ಟ್ ಇಂಡಿಯಾ ಕಂಪೆನಿಯ ಸ್ವಾಧೀನದಲ್ಲಿದ್ದ ತಲಚೇರಿಯ ನಡುವೆ ಅವರಿಗೊಂದು ಆಶ್ರಯ ಸ್ಥಾನ ಬೇಕಿತ್ತು. ಅರಣ್ಯ ಪ್ರದೇಶದ ಪ್ರಯೋಜನ ಪಡೆದುಕೊಂಡು ಕೆಲವರನ್ನು ಗೆರಿಲ್ಲಾ ಯುದ್ಧ ತಂತ್ರದಲ್ಲಿ ತರಬೇತು ಕೊಟ್ಟು ಹೈದರಾಲಿ ಮತ್ತು ಟಿಪ್ಪುಸುಲ್ತಾನನ ಆಳ್ವಿಕೆಯ ಸಂದರ್ಭದಲ್ಲಿ ತೊಂದರೆ ಕೊಡುವುದಕ್ಕೆ ನಿಯೋಜಿಸಿದರು. 'ಟಿಪ್ಪು ಸುಲ್ತಾನನು ಹಿಂದೂ ವಿರೋಧಿ ಮುಸ್ಲಿಂ' ಎಂಬ ಪ್ರಚಾರಕ್ಕಾಗಿಯೇ ಮೇ|| ಮೇಕ್ನಂಜಿ ಎಂಬ ಸೇನಾಧಿಕಾರಿಯನ್ನು ನೇಮಿಸಿದ್ದರು.

೩ನೇ ಮೈಸೂರು ಯುದ್ಧ ೧೭೮೯ ಡಿಸೆಂಬರ್‌ನಲ್ಲಿ ಪ್ರಾರಂಭವಾಯಿತು. ಅದೇ ಸಮಯ ಪೆರಿಯಪಟ್ಟಣ ಕೋಟೆಯೊಳಗೆ ಬಂಧನದಲ್ಲಿದ್ದ ಕೊಡಗು ರಾಜವಂಶಕ್ಕೆ ಸೇರಿದ ದೊಡ್ಡ ವೀರರಾಜ, ಅಪ್ಪಾಜಿ, ಮತ್ತು ಲಿಂಗರಾಜ ತಪ್ಪಿಸಿ ಕೊಂಡರೆಂದು ಹೇಳಲಾಗಿದೆ. ಟಿಪ್ಪು ಸೋತು ೧೭೯೨ರ ಮಾರ್ಚ್ ತಿಂಗಳಲ್ಲಿ ಮಾಡಿಕೊಂಡ ಸಂಧಾನ ಮಾತುಕತೆಯಲ್ಲಿ ಬ್ರಿಟಿಷರು ಕೊಡಗು ಬೇಕೆಂದು ಹಠ ಹಿಡಿದರು. ಅದು ಶ್ರೀರಂಗಪಟ್ಟಣಕ್ಕೆ ಒಂದು ಬಾಗಿಲಿದ್ದ ಹಾಗಿತ್ತು. ಹೆಚ್ಚೆಂದರೆ ಅಲ್ಲಿಂದ ರಾಜಧಾನಿಗೆ ಒಂದು ದಿನದ ಪ್ರಯಾಣ. ಕೊಡಗು ತನ್ನ ರಾಜಧಾನಿಗೆ ತುಂಬಾ ಸಮಿಪದಲ್ಲಿರುವುದರಿಂದ ಅದನ್ನು ಸಲ್ಲಿಸುವುದು ಸಾಧ್ಯ ವಿಲ್ಲವೆಂದೂ ಅದನ್ನು ಕೈಬಿಡಬೇಕೆಂದೂ ಹೇಳಿದನು. ಕೊಡಗಿನ ಪ್ರಶ್ನೆ ಸಾಕಷ್ಟು ಕಾಟ ಕೊಟ್ಟಿತು. ಕೊಡಗು ಟಿಪ್ಪುವಿಗೆ ಅನಿವಾರ್ಯವಾಗಿದ್ದರೆ, ವಿಜಯಿಯಾಗಿದ್ದ ಕಾರನ್‌ವಾಲಿಸನಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಕೊಡಗನ್ನು ಬಿಡುವುದಿಲ್ಲ ಎಂದು ಟಿಪ್ಪುವು ಪಟ್ಟು ಹಿಡಿದನು.

ಮತ್ತೆ ಮಾರ್ಚ್ ೧೫ ರಂದು ಕೊಡಗಿನ ಬೇಡಿಕೆಯನ್ನು ದಯವಿಟ್ಟು ಕೈಬಿಡಬೇಕೆಂದು ಮನವಿ ಮಾಡಿಕೊಂಡರು. ಅದೊಂದು ವಿಚಾರದ ಮೇಲೆ ಇಡೀ ಒಪ್ಪಂದವೇ ಮುರಿದು ಬಿದ್ದು ಹೋಗಬಹುದು ಎಂದು ಸೂಚನೆ ಕೊಟ್ಟರು. ಒಂದು ವೇಳೆ ಸೈನ್ಯ ಕಾರ್ಯಾಚರಣೆಗಳು ಮತ್ತೆ ಪ್ರಾರಂಭವಾದರೆ ಒತ್ತೆಯಾಗಿ ಕೊಟ್ಟಿರುವ ರಾಜಕುಮಾರರನ್ನು ಹಿಂದಕ್ಕೆ ಕಳುಹಿಸುತ್ತಾರೆಯೇ ಎಂದು ವಕೀಲರು ಕೇಳಿದರು. ಆದರೆ ಕಾರನ್ ವಾಲಿಸನು ಅವರನ್ನು ತನ್ನ ಬಳಿಯೇ ಉಳಿಸಿಕೊಳ್ಳಲಾಗುತ್ತದೆ ಎಂದು ಉತ್ತರವಿತ್ತನು."

ಕೊನೆಗೆ ಟಿಪ್ಪು ಅವರ ಬೇಡಿಕೆಗಳಿಗೆ ಸಮ್ಮತಿಸಿದನು. ಇಬ್ಬರು ಮಕ್ಕಳನ್ನು ವಹಿಸಿಕೊಟ್ಟು, ಒಂದು ಕೋಟಿಗೂ ಹೆಚ್ಚು ಹಣವನ್ನು ತೆತ್ತಾಗಿದ್ದ ಈ ಹಂತದಲ್ಲಿ ಅವನು ಬಹಳ ಅಸಹಾಯಕವಾಗಿದ್ದನು. ಮಾರ್ಚ್ ೧೮ ರಂದು ವಕೀಲರು ಟಿಪ್ಪುವಿನ ಸಮ್ಮತಿಯನ್ನು ವರದಿ ಮಾಡಿದನು.

ಕಾರನ್‌ವಾಲಿಸನು ಕೊಡಗಿನ ವಿಷಯ ಪಟ್ಟು ಹಿಡಿದುದಕ್ಕೆ ಕಾರಣ ಅಲ್ಲಿಯ ರಾಜನೊಂದಿಗೆ ಒಪ್ಪಂದ ಮಾಡಿ ಕೊಂಡದ್ದೇನೂ ಅಲ್ಲ. ಆದರೆ ಮಲಬಾರ್ ಕರಾವಳಿಯಲ್ಲಿ ತಾವು ಹೊಸದಾಗಿ ಸಂಪಾದಿಸಿರುವ ಭಾಗಕ್ಕೆ ಸುಭದ್ರವಾದ ಒಂದು ಗಡಿಯನ್ನು ಹಾಕಿಕೊಳ್ಳಬೇಕಾಗುತ್ತದೆ. ಘಟ್ಟದ ಮೇಲಿನ ಯಾವುದೇ ಶಕ್ತಿಯಿಂದ ಅದನ್ನು ರಕ್ಷಿಸಬೇಕಾಗಿರುವುದರಿಂದ ಅವನಿಗೆ ಕೊಡಗು ಅಗತ್ಯವಾಗಿತ್ತು.

೧೭೯೨ ರಲ್ಲಿ ವೀರ ರಾಜೇಂದ್ರಪೇಟೆಯನ್ನು ಬ್ರಿಟಿಷರು ಸ್ಥಾಪಿಸಿದರು. ೧೭೯೫ರ ಏಪ್ರಿಲ್‌ನಲ್ಲಿ ಹೊಸದಾಗಿ ಕಟ್ಟಿಸಿದ ನಾಲ್ಕು ನಾಡು ಅರಮನೆಯಲ್ಲಿ ವೀರ ರಾಜ ವಾಸಿಸತೊಡಗಿದನು.

ಇವತ್ತಿಗೆ (೨೦೦೩ರಲ್ಲಿ) ನಾಲ್ಕು ನಾಡು ಅರಮನೆಗೆ ೨೦೮ ವರ್ಷಗಳಾದರೂ ಗಟ್ಟಿಮುಟ್ಟಾಗಿಯೇ ಇದೆ. ಆದರೆ ಸುತ್ತು ಮುತ್ತಲ ಜಿಲ್ಲೆಗಳಲ್ಲಿ ಇದಕ್ಕಿಂತ ಹಳೆಯದಾದ ಭವ್ಯವಾದ ಮನೆಗಳನ್ನು ಜಮೀನ್ದಾರರು, ಪಟೇಲರು ಹೊಂದಿದ್ದಾರೆ. ದೊಡ್ಡವೀರರಾಜನ ಹಿಂದಿನ ಆತನ ವಂಶಸ್ಥರ ಯಾವುದೇ ಮನೆ, ಕೋಟೆ ಇತ್ಯಾದಿಗಳ ಕುರುಹುಗಳು ಕೂಡಾ ಉಳಿದಿಲ್ಲ.

ಮೈಸೂರು ಒಪ್ಪಂದದ ಒಂದು ವರ್ಷದ ನಂತರ ೩೧೩೧೭೯೩ ರಲ್ಲಿ ರಾಬರ್ಟ್ ಅಬರ್‌ಕ್ರಾಂಬಿಯು ಕಂಪೆನಿ ಸರಕಾರಕ್ಕೆ ವಾರ್ಷಿಕ ರೂ. ೨೪,೦೦೦ ಕಪ್ಪ ಸಲ್ಲಿಸಬೇಕೆಂದು ಕರಾರು ಮಾಡಿಕೊಂಡು ಕೊಡಗನ್ನು ವೀರ ರಾಜೇಂದ್ರನಿಗೆ ಬಿಟ್ಟು ಕೊಟ್ಟನು.

೧೭೯೨ರಲ್ಲಿಯೇ ವೀರ ರಾಜೇಂದ್ರಪೇಟೆ ಮತ್ತು ಚರ್ಚ್ ನಿರ್ಮಾಣ. ೧೭೯೩ರಲ್ಲಿ ಕರಾರು ಪತ್ರ. ೧೭೯೫ ರಲ್ಲಿ ಅರಮನೆಯ ನಿರ್ಮಾಣ, ೧೮೦೭ರಲ್ಲಿ ರಾಜವಂಶದ ಚರಿತ್ರೆಯ ರಚನೆ, ಇದರಲ್ಲಿರುವ ವಿಚಾರದ ಸತ್ಯಾಂಶದ ಬಗ್ಗೆ ಸಾಕಷ್ಟು ಸಂಶಯ ಹುಟ್ಟುವುದು ಸಹಜ.

ಬಯಲು ಸೀಮೆ ಮತ್ತು ಕರಾವಳಿಗಳ ನಡುವಿನ ಮಲೆನಾಡು ಐಗೂರು ನಾಯಕರ ಆಳ್ವಿಕೆಯಲ್ಲಿತ್ತು. ಅವರು ವಿಜಯನಗರದ ಸಾಮಂತರಾಗಿದ್ದರು. ಕೊನೆಯಲ್ಲಿ ಟಿಪ್ಪು ಸುಲ್ತಾನನ ಬೆಂಬಲಿಗರಾಗಿದ್ದರು. ಮಲೆನಾಡು ಪ್ರದೇಶದ ಮೇಲೆ ಬ್ರಿಟಿಷರಿಗೆ ಸಂಪೂರ್ಣ ಹಿಡಿತ ಸಿಕ್ಕಿರಲಿಲ್ಲ. ಎಳೆಯ ವಯಸ್ಸಿನ ವೆಂಕಟಾದ್ರಿನಾಯಕರನ್ನು ಸೆರೆ ಹಿಡಿದು ಗಲ್ಲಿಗೇರಿಸುತ್ತಾರೆ. ಇದರ ವಿವರ ಐಗೂರು ವೆಂಕಟಾದ್ರಿನಾಯಕನ ಲಾವಣಿಯಲ್ಲಿ ಸಿಗುತ್ತದೆ.

ಹದಿನೆಂಟನೇ ಶತಮಾನದೊಂದಿಗೆ ಟಿಪ್ಪು ಸುಲ್ತಾನನ ಅಧ್ಯಾಯ ಕೊನೆಗೊಳ್ಳುತ್ತದೆ. ಮುಂದೆ ಬ್ರಿಟಿಷರಿಗೆ ವಿರೋಧಿಗಳಾಗಿ ಮುಂದುವರೆದ ಆತನ ಸಾಮಂತರನ್ನು ಸೆರೆ ಹಿಡಿಯಲು ಪ್ರಯತ್ನಿಸುತ್ತಾರೆ. ಐಗೂರಿನ ವೆಂಕಟಾದ್ರಿ ನಾಯಕನನ್ನು ಸೆರೆಹಿಡಿಯಲು ವೆಲ್ಲೆಸ್ಲಿ ಸೈನ್ಯಕ್ಕೆ ಸಾಧ್ಯ ವಾಗುವುದಿಲ್ಲ. ಕೊನೆಗೆ ಪೂರ್ಣಯ್ಯನ ದಂಡು ಬಂದು ಮೋಸದಿಂದ ಆತನನ್ನು ಸೆರೆಹಿಡಿದದ್ದು ಲಾವಣಿರೂಪದಲ್ಲಿ ಪ್ರಕಟವಾಗಿದೆ. ೧೦-೦೨-೧೮೦೨ರಲ್ಲಿ ಆತನನ್ನು ಗಲ್ಲಿಗೇರಿಸಿದ ಘಟನೆ ಆತನ ಪ್ರಜೆಗಳಿಗೆ ನೋವನ್ನುಂಟು ಮಾಡಿತ್ತು. ಮುಂದೆ ಅಮರ ಸುಳ್ಯ ದಂಗೆಗೆ ಅದೇ ಮುಖ್ಯ ಕಾರಣವಾಯಿತು.

೧೮೦೪ರಲ್ಲಿ ಐಗೂರು ರಾಜ್ಯದಲ್ಲಿದ್ದ ಅಮರ ಸುಳ್ಯ ಸೀಮೆ ಮತ್ತು ಏಳು ಸಾವಿರ ಸೀಮೆಗಳನ್ನು ಅರಮನೆ ಸೀಮೆ ಎಂದು ಕರೆಯಲ್ಪಡುತ್ತಿದ್ದ ಕೊಡಗಿಗೆ ಸೇರಿಸಲಾಯಿತು. ಆತನ

೧.ಸ್ನೇಹಿತರನ್ನು ಆಯ್ಕೆ ಮಾಡುವಾಗ ನಿಧಾನದಿಂದಿರು. ಅವನನ್ನು ಬದಲಾಯಿಸುವಾಗ ಇನ್ನಷ್ಟು ನಿಧಾನವಾಗಿರು

ರಾಜ್ಯದ ಜನರು ಕೊಡಗಿನ ಅರಸರ ಆಳ್ವಿಕೆಯನ್ನು ಬಹಳ ಕಾಲ ಸ್ವೀಕರಿಸಿದಂತೆ ಕಂಡು ಬರುವುದಿಲ್ಲ. ಚಿಕ್ಕವೀರರಾಜನ ತಂಗಿ ಗಂಡ ಚನ್ನಬಸಪ್ಪ, ರಾಜನ ವಿರುದ್ಧ ಜನರನ್ನು ಸಂಘಟಿಸತೊಡಗುತ್ತಾನೆ. ಚಿಕ್ಕವೀರರಾಜನನ್ನು ಹದ್ದುಬಸ್ತಿನಲ್ಲಿಡಲು ಬ್ರಿಟಿಷರು ಚೆನ್ನಬಸಪ್ಪನನ್ನು ಬೆಂಬಲಿಸಿದಂತೆ ಕಂಡು ಬರುತ್ತದೆ. ಅದೇ ಕಾಲದಲ್ಲಿ ಬ್ರಿಟಿಷರು ಭಾರತದ ಎಲ್ಲಾ ಕಡೆ ರಾಜರನ್ನು ಒಂದಲ್ಲ ಒಂದು ರೀತಿಯಲ್ಲಿ ಎದುರು ಹಾಕಿಕೊಂಡಿರುತ್ತಾರೆ. 1831ರಲ್ಲಿ ಮೈಸೂರಿನ ಅರಸರ ಪದಚ್ಯುತಿಯಾಗುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಸಂಬಂಧಿಕನಾದ ಅರಪುರದ ಬಸಪ್ಪಾಜಿಯ ಅರಮನೆ ಗುಪ್ತಾಲೋಚನೆಯ ಕೇಂದ್ರವಾಗುತ್ತದೆ. ಇನ್ನೊಂದು ಕೇಂದ್ರವಾದ ತಿರುಚಿನಾಪಳ್ಳಿಯೊಂದಿಗೆ ಇವರಿಗೆ ನಿಕಟ ಸಂಬಂಧ ಏರ್ಪಡುತ್ತದೆ. ಅಷ್ಟರಲ್ಲಿಯೇ ಹುಲಿಕೊಂದ ನಂಜಯ್ಯನೆಂಬವನು ದೂರದ ಹೈದರಾಬಾದ್, ದೆಹಲಿ, ಲಾಹೋರ್‌ಗಳನ್ನು ಸಂಪರ್ಕಿಸಿ ಬರುತ್ತಾನೆ. ಇಡೀ ಭಾರತದ ಉದ್ದ ಅಗಲದಲ್ಲಿ ಬ್ರಿಟಿಷರ ಎದುರು ದಂಗೆ ಏಳಲು ಜನರು ಸಿದ್ಧರಾಗುತ್ತಾರೆ.

ಬ್ರಿಟಿಷರನ್ನು ಎದುರಿಸಿದ ಚಿಕ್ಕವೀರರಾಜ ತನ್ನವರಿಂದಲೇ ಮೋಸಕ್ಕೆ ಬಲಿಯಾಗಿ ಸೋಲುತ್ತಾನೆ. ಆತನನ್ನು ಗಲ್ಲಿಗೇರಿಸುವುದು, ಕೊಲ್ಲುವುದು ಅಥವಾ ಕೊಡಗಿನಲ್ಲೇ ಸೆರೆಯಲ್ಲಿಡುವುದು ತೊಂದರೆ ಎಂದು ತಿಳಿದು ಆತ ಸ್ವ ಇಚ್ಛೆಯಿಂದ ಕಾಶಿಗೆ ಹೋದನೆಂಬ ನಾಟಕ ೧೮೩೪ ರ ಮೇ ತಿಂಗಳಲ್ಲಿ ಅಭಿನಯಿಸಲ್ಪಡುತ್ತದೆ. ಸ್ವಾಮಿ ಭಕ್ತನಾದ ದಿವಾನ ಪೊನ್ನಪ್ಪ ಬೆಂಗಳೂರು ತನಕ ಚಿಕ್ಕವೀರರಾಜನೊಡನೆ ಹೋಗುತ್ತಾನೆ. ಬ್ರಿಟಿಷ್ ಆಳ್ವಿಕೆಗೆ ಜನ ಬೆಂಬಲ ಕೊಡಗಿನಲ್ಲಿ ಸಿಗದ ಕಾರಣ ಪೊನ್ನಪ್ಪನನ್ನುಹಿಂದೆ ಕರೆಸಿಕೊಳ್ಳಬೇಕಾಗುತ್ತದೆ.

ಆಗಿನ ಕಾಲದ ಜನರಲ್ಲಿ ರಾಜಭಕ್ತಿ ಬಹಳವಾಗಿತ್ತು. ದಂಗೆಯ ಸೂತ್ರಧಾರಿಗಳು ಇದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡರು. ಅಪ್ಪಾಜಿ ಅರಸನ ಮಗ ವೀರಪ್ಪ ಜೀವಂತ ಇದ್ದಾನೆ ಎಂಬ ಪ್ರಚಾರ ಪ್ರಾರಂಭವಾಯಿತು. ಅಪರಂಪಾರನೆಂಬ ಸನ್ಯಾಸಿಯೊಬ್ಬ ಕಾಣಿಸಿಕೊಳ್ಳುತ್ತಾನೆ. ಹುಲಿಕೊಂದ ನಂಜಯ್ಯ ಆತನೊಡನೆ ಸೇರಿಕೊಳ್ಳುತ್ತಾನೆ. ಸುಳ್ಯದ ಕೂಜುಗೋಡು ಮನೆಯಲ್ಲಿ ಇವರು ಆಶ್ರಯ ಪಡೆಯುತ್ತಾರೆ. ಆದರೂ ೧೮೩೫ರಲ್ಲಿ ಅಪರಂಪಾರನನ್ನು ಮಂಜರಾಬಾದಿನಲ್ಲಿ ಬಂಧಿಸುತ್ತಾರೆ. ಅದೇ ಕೆಲಸವನ್ನು ಮುಂದುವರಿಸಲು ವೀರಪ್ಪನ ಇನ್ನೊಬ್ಬ ಮಗನೆಂದು ಕಲ್ಯಾಣಪ್ಪನನ್ನು ತಯಾರು ಮಾಡುತ್ತಾರೆ. ಮುಂದಿನ ವರ್ಷ ಆತನ ಹೆಸರಲ್ಲಿ ಜನ ಸಂಘಟಿತರಾಗ ತೊಡಗುತ್ತಾರೆ. ೧೮೩೬ರಲ್ಲಿ ಕಲ್ಯಾಣಪ್ಪನನ್ನು ಬೈತೂರಲ್ಲಿ ಸೆರೆಹಿಡಿಯುತ್ತಾರೆ. ಆಗ ಕಲ್ಯಾಣಪ್ಪನ ಹೆಸರಲ್ಲಿ ಇನ್ನೊಬ್ಬನನ್ನು ಪರಿಚಯಿಸುವ ನಿರ್ಧಾರಕ್ಕೆ ಬರುತ್ತಾರೆ. ಪುಟ್ಟ ಬಸಪ್ಪ ಎಂಬಾತನನ್ನು ಹುಲಿಕೊಂದ ನಂಜಯ್ಯ ಆರಿಸಿ ಪೂಮಾಲೆ ಬೆಟ್ಟದಲ್ಲಿ ಆತನನ್ನು ಇರಿಸಿಕೊಂಡು ನಾನಾ ಭಾಗದ ಜನರಿಗೆ ಆತನನ್ನು ಕಲ್ಯಾಣ ಪ್ಪನೆಂದು ಪರಿಚಯಿಸುತ್ತಾನೆ.

ಪ್ರಭಾವಿ ಮುಖಂಡ ಕೆದಂಬಾಡಿ ರಾಮಯ್ಯಗೌಡನ ಮುಂದಾಳತ್ವದಲ್ಲಿ 1837ರ ಮಾರ್ಚ್ ೩೦ ರಂದು ಬೆಳ್ಳಾರೆಯಲ್ಲಿ ೨೦೦೦ ಸಶಸ್ತ್ರ ಜನರು ಸೇರಿ ಖಜಾನೆಯನ್ನು ವಶಕ್ಕೆ ತೆಗೆದುಕೊಳ್ಳುತ್ತಾರೆ. ಅದೇ ದಿನ ೨೦೦ ಸೈನಿಕರ ತಂಡ ಕುಂಚಡ್ಕ ತಿಮ್ಮ ಮತ್ತು ಕುಡೆಕಲ್ಲು ಪುಟ್ಟ ಇವರ ಮುಂದಾಳತ್ವದಲ್ಲಿ ಕಾಸರಗೋಡಿಗೆ ಹೋಗುತ್ತದೆ. ಅವರು ಏಪ್ರಿಲ್ ಎರಡರಂದು ಕಾಸರಗೋಡು, ಮೂರರಂದು ಕುಂಬ್ಳೆ, ನಾಲ್ಕರಂದು ಮಂಜೇಶ್ವರಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಅಲ್ಲಿ ತಮ್ಮ ಸರಕಾರದ ತಹಶೀಲ್ದಾರರಿಗೆ ಅಧಿಕಾರ ವಹಿಸಿ, ಎಲ್ಲಾ ಸರಕಾರಿ'ನೌಕರರಿಗೆ ಸಂಬಳ ವಿತರಿಸಿ, ತಮ್ಮ ಸರಕಾರಕ್ಕೆ ವಿಧೇಯರಾಗಿರುವುದಾಗಿ ಮುಚ್ಚಳಿಕೆ ಬರೆಸಿಕೊಳ್ಳುತ್ತಾರೆ. ಹಿಂದೆಯೇ ನಿಶ್ಚಯಿಸಿದ ಪ್ರಕಾರ ಏಪ್ರಿಲ್ ಐದರಂದು ಮಂಗಳೂರು ತಲುಪುತ್ತಾರೆ.

ಅದೇ ಮಾರ್ಚ್ ೩೦ ರಂದು ೨೦೦ ಸೈನಿಕರ ಇನ್ನೊಂದು ತಂಡ ಬಿಸ್ಲೆ ಮಾರ್ಗವಾಗಿ ಮಡಿಕೇರಿ ಕಡೆ ಹೊರಟಿರುತ್ತದೆ. ದಾರಿಯಲ್ಲಿ ಸಿಕ್ಕಿದ ಎಲ್ಲಾ ಸರಕಾರಿ ಕಛೇರಿಗಳನ್ನು ಖಜಾನೆಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾ ವಿರೋಧಿಸಿದವರನ್ನು ಸೆರೆಹಿಡಿಯುತ್ತಾ, ತಮ್ಮ ಕಡೆಯ ಅಧಿಕಾರಿಗಳನ್ನು ನೇಮಿಸುತ್ತಾ ಮುಂದುವರಿಯುತ್ತಾರೆ.

ಅದೇ ಮಾರ್ಚ್ ೩೦ರ ರಾತ್ರಿ ಬೆಳ್ಳಾರೆಯ ಘಟನೆಯ ವರದಿ ಕಲೆಕ್ಟರ್ ಲೆವಿನಿಗೆ ತಲುಪುತ್ತದೆ. ಮರುದಿನ ಬೆಳಿಗ್ಗೆ ೧೬೧ ಸೈನಿಕರೊಂದಿಗೆ ಹೊರಟು ಪುತ್ತೂರಿಗೆ ತಲುಪುವಾಗ ರಾತ್ರಿಯಾಗಿರುತ್ತದೆ. ಮರುದಿನ ನೋಡುವಾಗ ೧೨೦೦ ಕ್ಕೂ ಮೀರಿ ಸಶಸ್ತ್ರ ಜನರು ಆತನನ್ನು ಸುತ್ತುವರಿದುದನ್ನು ಕಂಡು ಕಂಗಾಲಾಗುತ್ತಾನೆ. ಏಪ್ರಿಲ್ ೨ರ ರಾತ್ರಿ ಮಂಗಳೂರಿಗೆ ಪಲಾಯನ ಮಾಡುತ್ತಾನೆ. ಅಲ್ಲಿ ನೋಡಿದರೆ ನಾಗರಿಕರು ಬ್ರಿಟಿಷರಿಗೆ ಅಸಹಕಾರ ಹಾಗೂ ಎದುರಾಳಿಗಳಿಗೆ ಭವ್ಯ ಸ್ವಾಗತ ನೀಡಿ ಅವರೊಂದಿಗೆ ಸೇರಿಕೊಂಡಿರುವುದು ಕಂಡು ಬರುತ್ತದೆ.

ಏಪ್ರಿಲ್ ೫ ರಂದು ಬಾವುಟಗುಡ್ಡದಲ್ಲಿ ಹಾರುತ್ತಿದ್ದ ಬ್ರಿಟಿಷರ ಧ್ವಜವನ್ನು ಇಳಿಸಿ ತಮ್ಮ ಧ್ವಜಾರೋಹಣ ಮಾಡುತ್ತಾರೆ. ಬ್ರಿಟಿಷ್ ಪ್ರಜೆಗಳಿಗೆ ಓಡಿ ಹೋಗಲು ಧೈರ್ಯಸಾಲದೆ ಕಂಟೋನ್‌ಮೆಂಟಿನ ಭದ್ರನೆಲೆಯಲ್ಲಿ ಅವಿತುಕೊಳ್ಳುತ್ತಾರೆ. ಮರುದಿನ ಹೊನ್ನಾವರದಿಂದ ಅರುವತ್ತು ಸೈನಿಕರು ಮದ್ದುಗುಂಡುಗಳೊಂದಿಗೆ ಬಂದ ಮೇಲೆ ಬ್ರಿಟಿಷ್ ಪ್ರಜೆಗಳನ್ನು ಅವರು ಸುತ್ತುವರಿದು ಬಹಳ ಸಾಹಸದಿಂದ ಹಡಗು ಹತ್ತಿಸಿ ಕಣ್ಣನೂರಿಗೆ ಕಳುಹಿಸುತ್ತಾರೆ.

ಬ್ರಿಟಿಷರ ಸೈನ್ಯದಲ್ಲಿ ಸುಭೇದಾರನಾಗಿದ್ದ ಗುಡ್ಡೆ ಅಪ್ಪಯ್ಯ ಅವರ ವಿರೋಧಿಗಳೊಂದಿಗೆ ಸೇರಿದ್ದು ಅವರಿಗೆ ದೊಡ್ಡ ಆತಂಕವಾಗುತ್ತದೆ. ಅಪ್ಪಯ್ಯನ ಸಹೋದರ ಗುಡ್ಡೆ ತಮ್ಮಯ್ಯ ಅರಸರ ಕಾಲದಲ್ಲಿ ಸುಳ್ಯದಲ್ಲಿ ಪಾರುಪತ್ಯಗಾರನಾಗಿದ್ದು ಅರಸರ ಪದಚ್ಯುತಿ ನಂತರ ದಂಗೆಯನ್ನು ರೂಪಿಸುವವರೊಡನೆ ಸೇರಿಕೊಂಡಿದ್ದನು. ಗುಡ್ಡೆ ಅಪ್ಪಯ್ಯನು ಮೇಲ್‌ಕೊಡಗಿಗೆ ಹಿಂತಿರುಗಿ ನಾಕುನಾಡು ಸುಬೇದಾರ ಮಾದಯ್ಯನಲ್ಲಿ ದಂಗೆಯಲ್ಲಿ

೨.ನಿನ್ನ ಸ್ನೇಹಿತನನ್ನು ಜಯಿಸಬೇಕಾದರೆ ಅದು ನೀನು ಅವನ ಮೇಲೆ ತೋರುವ ಪ್ರೀತಿಯಿಂದ ಮಾತ್ರ ಸಾಧ್ಯ

ಭಾಗವಹಿಸಲು ಪ್ರಚೋದಿಸುತ್ತಾನೆ. ಅವನ ಸ್ನೇಹಿತರಾದ ಇತರ ಸುಬೇದಾರರು ಮಡಿಕೇರಿಗೆ ದಾಳಿ ಇಡುವಾಗ ಸಹಕರಿಸಲು ಒಪ್ಪಿಕೊಳ್ಳುತ್ತಾರೆ. ಈ ವಿಚಾರವನ್ನು ಹೇಳಲು ಕುಂದಳ್ಳಿಯಲ್ಲಿ ಬಂದು ಇಳಿದುಕೊಂಡಿರುವ ಕೂಜುಗೂಡು ಅಪಯ್ಯ ಮತ್ತು ಮಲ್ಲಪ್ಪ ಸಹೋದರರಲ್ಲಿಗೆ ಗುಡ್ಡೆ ಅಪ್ಪಯ್ಯ ಹೋಗುತ್ತಾನೆ. ಅವರು ಕೊಡಗಿನ ಸುಬೇದಾರ ಅಪ್ಪಚ್ಚುವನ್ನು ಸೆರೆಹಿಡಿಯುತ್ತಾರೆ.

ಇತ್ತ ಕೊಡಗಿನಲ್ಲಿ ಕ್ಯಾ|| ಲೀಹಾರ್ಡಿಗೆ ಬೋಪು ದಿವಾನನ ಸಂಬಂಧಿಕರು ತಮ್ಮನ್ನು ವಿರೋಧಿಸಲು ಹೊರಟಿರುವುದು ಗೊತ್ತಾಗಿ ಆತನನ್ನು ಗದರಿಸುತ್ತಾನೆ. ಅವರ ಮನವೊಲಿಸುವ ಭರವಸೆಯ ಮಾತುಕೊಟ್ಟು ಮಾದಯ್ಯನಲ್ಲಿಗೆ ಹೋಗುತ್ತಾನೆ. ಅವನನ್ನು ಆಮಿಷಕ್ಕೆ ಬಲಿಬೀಳಿಸಿ ನಿಷ್ಠೆ ಬದಲಾಯಿಸುವಂತೆ ಮಾಡುತ್ತಾನೆ. ಕೊನೆಗೂ ಬ್ರಿಟಿಷರ ಕುತಂತ್ರ ಸಫಲವಾಗುತ್ತದೆ. ಕೊಡಗಿನ ಸೈನ್ಯದ ಬರುವಿಕೆಯ ನಿರೀಕ್ಷೆಯಲ್ಲಿದ್ದ ಕುಕ್ಕನ್ನೂರು ಚೆಣ್ಣಯ್ಯ, ಪೆರಾಜೆ ಕೃಷ್ಣಯ್ಯ, ಕರಣೀಕ ಸುಬ್ಬಯ್ಯ ಮೊದಲಾದವರು ಅವರನ್ನು ಸುಸ್ವಾಗತಿಸುತ್ತಾರೆ. ಆಗ ಅವರನ್ನು ಸುಲಭವಾಗಿ ಸೆರೆಹಿಡಿಯುತ್ತಾರೆ. ಇದೆ ನಾಟಕ ಕುಂದಳ್ಳಿಯಲ್ಲಿ ನಡೆಯುತ್ತದೆ.

ಆದರೆ ಅಪ್ಪಚ್ಚು ಮೊದಲಾದ ಕೊಡಗು ಸೈನ್ಯದ ಅಧಿಕಾರಿಗಳು ಇವರಲ್ಲಿ ಒತ್ತೆಯಾಳುಗಳಾಗಿದ್ದ ಕಾರಣ ಇವರೊಂದಿಗೆ ಒಪ್ಪಂದಕ್ಕೆ ಬರಬೇಕಾಗುತ್ತದೆ. ಆದರೂ ಸೆರೆಸಿಕ್ಕಿದ ನಾಲ್ಕು ಜನರನ್ನು ಗಲ್ಲಿಗೇರಿಸುತ್ತಾರೆ. ಮೇ ೨೭ ರಂದು ಲಕ್ಷ್ಮಪ್ಪ ಬಂಗರಸ, ಮೇ. ೩೦ ರಂದು ಉಪ್ಪಿನಂಗಡಿ ಮಂಜ, ಜೂನ್ ೧೯ ರಂದು ಪುಟ್ಟ ಬಸವ, ಅಕ್ಟೋಬರ್ ೩೧ ರಂದು ಗುಡ್ಡೆ ಅಪ್ಪಯ್ಯನನ್ನು ಗಲ್ಲಿ ಗೇರಿಸುತ್ತಾರೆ. ಖೈದಿಗಳ ಪೈಕಿ ಪುಟ್ಟಯ್ಯ, ಮುಂಗಣ್ಣ, ಬಂಗಾರಿ ಜೈಲಿನಲ್ಲಿ ಮೃತರಾಗುತ್ತಾರೆ. ಪೌಜುಧಾರಿ ಅದಾಲತ್‌ನಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಐದು ಜನರಿಗೆ ಮತ್ತೆ ವಿನಾಯಿತಿ ಸಿಗುತ್ತದೆ.

ಕುಕ್ಕನ್ನೂರು ಚೆಣ್ಣಯ್ಯ ಮತ್ತುಪೆರಾಜೆಯ ಕೃಷ್ಣಯ್ಯ ಇಬ್ಬರಿಗೆ ಮಾತ್ರ ಜೀವಾವಧಿ ಶಿಕ್ಷೆ ಆದಂತೆ ತಿಳಿದು ಬರುತ್ತದೆ. ಮದ್ರಾಸ್ ಪತ್ರಾಗಾರದಲ್ಲಿ ಸುರಕ್ಷಿತವಾಗಿ ಕೈದಿಗಳ ವಿಚಾರಣೆ ದಾಖಲೆಗಳು ಈ ದಂಗೆಯ ಬಗ್ಗೆ ಇನ್ನಷ್ಟು ಸತ್ಯಾಂಶಗಳನ್ನು ನೀಡಬಲ್ಲವು.

ದಿವಾನ್ ಲಕ್ಷ್ಮೀನಾರಾಯಣ ಒಳಸಂಚಿನಲ್ಲಿ ಭಾಗಿಯಾಗಿದ್ದಾನೆಂಬ ಅನುಮಾನದಿಂದ ಸೆರೆಮನೆ ಸೇರಬೇಕಾಯಿತು. ಆತನ ಹೆಂಡತಿಯ ಸಹೋದರ ಕೃಷ್ಣಯ್ಯ ಮತ್ತು ಮಗಳ ಗಂಡ ಕರಣಿಕ ಸುಬ್ಬಯ್ಯ ಶಿಕ್ಷೆಗೊಳಗಾಗುತ್ತಾರೆ. ದಿವಾನರ ತಮ್ಮ ರಾಮಪ್ಪಯ್ಯ ಇವರಿಬ್ಬರ ಪರಮ ಮಿತ್ರ, ಆತನೂ ದಂಗೆಯ ಒಳಸಂಚಿನಲ್ಲಿ ಭಾಗಿಯಾಗಿದ್ದ, ಆತ ಕೊಲ್ಲಲ್ಪಟ್ಟು ಇದು ದಂಗೆಯ ನಾಯಕ ರಾಮಯ್ಯ ಗೌಡರ ಅಪ್ಪಣೆಯಂತೆ ನಡೆದಿದೆ ಎಂಬ ಪ್ರಚಾರ ಉಂಟಾಗುತ್ತದೆ. ಆದರೂ ಕೂಡಾ ಬ್ರಿಟಿಷರ ಒಡೆದು ಆಳುವ ಈ ತಂತ್ರಕ್ಕೆ ಯಾರೂ ಬಲಿಯಾಗದೆ ಒಗ್ಗಟ್ಟು ಕಾಯ್ದುಕೊಂಡರು.

"ಕೊಡಗು ಬಂಡಾಯವೆಂದು ಕರೆಯಲ್ಪಡುವುದು ನಿಜವಾಗಿ ಹೇಳುವುದಾದರೆ ಗೌಡರ ಮೇಲ್ಬೀಳುವಿಕೆ. ಇವರು ಕೊಡಗರನ್ನು ಹೋಲುವ ಸ್ವಭಾವವನ್ನು ಹೊಂದಿದ್ದು ಘಾಟಿಯ ಪಶ್ಚಿಮ ಇಳಿಜಾರು ಪ್ರದೇಶದಲ್ಲಿರುವ ಜನಾಂಗ. 1870 ರಲ್ಲಿ ಮುದ್ರಿಸಲ್ಪಟ್ಟ ರೆವರೆಂಡ್ ಜಿ. ರಿಕ್ತರ್‌ನ ಗಜೆಟಿಯರ್ ಆಫ್ ಕೂರ್ಗ್‌ನಲ್ಲಿ ಈ ರೀತಿಯ ಅಭಿಪ್ರಾಯದ ಪ್ರಥಮ ವಾಕ್ಯದೊಂದಿಗೆ ಅಮರ ಸುಳ್ಯ ದಂಗೆಯನ್ನು ವಿವರಿಸಿದ್ದಾನೆ.

ಅಂದಿನ ಕಾಲದಲ್ಲಿ ಕೊಡಗರು ಮತ್ತು ಗೌಡರೊಳಗೆ ಒಂದು ರೀತಿಯಲ್ಲಿ ಕದನವೇ ನಡೆದಿತ್ತು. ಇದರ ಪರಿಣಾಮ ಶತಮಾನಗಳ ಕಾಲ ಮುಂದುವರಿಯುತ್ತಾ ಬಂದಿದೆ. ಕೊಡಗರು ಬ್ರಿಟಿಷರಿಗೆ ಇಡೀ ಭಾರತದಲ್ಲಿಯೇ ಅತ್ಯಂತ ನಂಬಿಗಸ್ತ ಜನಾಂಗವೆನ್ನಿಸಿಕೊಂಡರು. ಆದ ಕಾರಣವೇ ಸೈನ್ಯದಲ್ಲಿ ಅತೀ ಉನ್ನತ ಪದವಿಗೆ ಉತ್ತರಾಧಿಕಾರಿಗಳಾಗುವುದು ಮತ್ತು ಸೈನ್ಯದಲ್ಲಿ ಅನೇಕ ಗಣ್ಯ ಪದವಿಗಳನ್ನು ಗಿಟ್ಟಿಸಿಕೊಳ್ಳುವುದು ಸಾಧ್ಯವಾಯಿತು. ಗೌಡ ಜನಾಂಗದವರಿಗೆ ಬ್ರಿಟಿಷ್ ಆಳ್ವಿಕೆ ಕೊನೆದಿನಗಳಲ್ಲಿ ಪೋಲೀಸ್ ಕಾನ್ಸ್‌ಟೇಬಲ್, ಪೇದೆ, ಹಳ್ಳಿ ಶಾಲೆ ಮೇಸ್ಟರ ಚಾಕರಿ ಕೊಡುವ ಉದಾರತೆ ತೋರಿಸಿದರು. ಇದರಿಂದ ನೂರಹತ್ತು ವರ್ಷಗಳಲ್ಲಿ ಎರಡು ಜನಾಂಗಗಳ ಸಾಮಾಜಿಕ ಸ್ಥಾನಮಾನ ಗಳಲ್ಲಿ ಗಮನಾರ್ಹ ಅಂತರ ಹೆಚ್ಚಿತು.

ಇಡೀ ಭಾರತದಲ್ಲಿ ಹಿಂದೂ ಮುಸ್ಲಿಮರು ಮತ ಬೇಧವನ್ನು ಮರೆತು 1857 ರಲ್ಲಿಬ್ರಿಟಿಷರ ವಿರುದ್ಧ ಹೋರಾಡಿದರು. ಸಿಪಾಯಿದಂಗೆ ಎಂದು ಪ್ರಸಿದ್ಧವಾಗಿರುವ ಭಾರತದ ಈ ಪ್ರಥಮ ಸ್ವಾತಂತ್ರ್ಯ ಸಮರದಲ್ಲಿ ಕೊಡಗರು ಏನು ಮಾಡಿದರು? ಕೊಡವರ ಬೈಬಲ್, ಭಗವದ್ಗೀತೆ ಎಂಬುದಾಗಿ ಹೇಳಲ್ಪಡುತ್ತಿರುವ ಪಟ್ಟೋಲೆ ಪಳಮೆಯಲ್ಲಿ ಸಿಗುವ ವಿವರ ಹೀಗಿದೆ.

೧೮೫೭ರಲ್ಲಿ ಹಿಂದು ದೇಶದಲ್ಲಿ ಎದ್ದ ದೊಡ್ಡ ದಂಗೆಯಲ್ಲಿ, ಕೊಡಗರು ಇಂಗ್ಲೀಷ್ ಸರಕಾರಕ್ಕೆ ರಾಜ ಭಕ್ತಿಯನ್ನು ತೋರಿಸಿ ಕತ್ತಿ, ಕೋವಿ ಸಮೇತ ೫೦೦ ಮಂದಿ ಕೊಡಗರು ಪೆರ್ಯಾಪಟ್ಟಣದಲ್ಲಿ ಕಾದಿದ್ದರು. ದಂಗೆಯು ಅಡಗಿದ ಮೇಲೆ ಹಿಂತಿರುಗಿ ಬಂದರು.

ತದನಂತರ ಕೊಡಗು ಕಮೀಷನರಾಗಿದ್ದ ಜನರಲ್ ಕಬ್ಬನ್ ಸಾಹೇಬರು ಯುದ್ಧ ಸನ್ನದ್ಧರಾಗಿರುವಂತಹ ಕೊಡಗ ವೀರನೊಬ್ಬನ ನಕ್ಷೆ ಸಮೇತವಾದ ದೊಡ್ಡ ಬಿರುದಿನ ಮುದ್ರೆಯೊಡನೆ ಈ ಕೆಳಗಿನ ಇಸ್ತಿಹಾರವನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಪ್ರಸಿದ್ಧಿಗೊಳಿಸಿದನು.

'ಈ ಚಿಕ್ಕ ಜನಾಂಗದವರ ಉನ್ನತವಾದ ಲಕ್ಷಣವಾದ ಘನದಲ್ಲೂ, ರಾಜ ಭಕ್ತಿಯನ್ನೂ, ಧೀರತ್ವವನ್ನೂ ನೆನೆಸಿಕೊಂಡು ಮತ್ತುಬ್ರಿಟಿಷ್ ಸರಕಾರದ ಸಹಾಯದಲ್ಲಿ ವಿಶೇಷವಾದ ರಾಜ ಕಾರ್ಯವನ್ನು ಮಾಡಿರುವುದನ್ನು ಆಲೋಚಿಸಿಕೊಂಡು ಇಂಡ್ಯಾ ಸರಕಾರವು ನನ್ನಲ್ಲಿಟ್ಟು ಅಧಿಕಾರ ಶಕ್ತಿಯಿಂದ, ಆಯುಧಗಳನ್ನು ಹಿಡಿಯಬಾರದೆಂಬ ಕಾನೂನು ಈ ಪ್ರತಾಪವುಳ್ಳ ಕೊಡಗು ಜನರಿಗೆ ಲಗಾವು ಆಗುವುದಿಲ್ಲವೆಂದು ಎಲ್ಲರಿಗೂ ಅರಿಯುವಂತೆ ಪ್ರಸಿದ್ಧಗೊಳಿಸುವುದು ನನಗೆ ಸಂತೋಷಕರವಾದ ಕೆಲಸವಾಗಿರುತ್ತದೆ.

M.C. Cubbon, Commission.

- ಮುಂದುವರಿಯುತ್ತದೆ.

"ಬಹಿಷ್ಕರಿಸಿ"

ಏಳಿ ಎದ್ದೇಳಿ ಮತ್ತೊಮ್ಮೆ ವಿದೇಶಿ ಸಾಮಾನುಗಳನ್ನು ಬಹಿಷ್ಕರಿಸಿ!
ವಿದೇಶಿ ಪ್ರತಿಬಂಧನಕ್ಕೆ ಸರಿಯಾಗಿ ಉತ್ತರಿಸಿ !! ವಿದೇಶಿ ಸಾಮಾನುಗಳನ್ನು ಪೂರ್ಣ ಬಹಿಷ್ಕರಿಸಿ!!

ಇವುಗಳನ್ನು ಉಪಯೋಗಿಸಿ (ಸ್ವದೇಶಿ ಸಾಮಾನು)	ವಸ್ತು ಹೆಸರು	ಇವುಗಳನ್ನು ಉಪಯೋಗಿಸಬೇಡಿ (ವಿದೇಶಿ)
ಮೆಸ್ವಾಕ್, ನಿರ್ಮಾ, ಪ್ರೂಡೆಂಟ್, ಬಬೂಲ್ ವಿಕೋ, ವಜ್ರದಂತಿ, ಡಾಬರ, ಮಂಕಿಬ್ರಾಂಡ, ಅಮರ್ ಪ್ರಾಮೀಸ್, ಎಫಲ್‌ಮಿಂಟ್, ಅಜಯಾ, ಡಾಸ್ಟಾಂಗ್ ಮತ್ತು ಇತರ ದಂತ ಮಂಜನ.	ಟೂತ್ ಬ್ರಷ್, ಪೇಸ್ಟ್	ಕೋಲ್ಗೇಟ್, ಸಿಬಾಕಾ, ಕ್ಲೋಸ್ ಅಪ್, ಫೋರ್‌ಹೆನ್ಸ್, ನೀಮ, ಪೆಪ್ಸೊಡೆಂಟ್, ಸಿಗ್ನಲ್, ಏಮ್, ಟ್ರೂಡೆಲ್, ವಿಸ್ಡಂ.
ನಿರ್ಮಾ, ವಿಜಿಲ್, ಜೆಸ್ಮೀನ್, ಸ್ವಸ್ತಿಕ್, ಗೋಲ್ಡ್ ಮಿಸ್ಟ್ ಖಿಸ, ರೋಜ, ಸೀಗೆಕಾಯಿ ಸಿಂಥಾಲ್, ಮಾರ್ವೆಲ್, ಅಫಗಾನ್, ಕಸ್ತೂರಿ, ಮೈಸೂರು ಸ್ಯಾಂಡಲ್ ಸೋಪ್, ಇಮಾಮಿ ಗ್ಲಿಸರೀನ್ ಪ್ಲಸ್, ಚಂದ್ರಿಕಾ, ಮೆಡಿಮಿಕ್ಸ್, ಫೇರ್‌ಗ್ಲೊ, ಕುಟೀರ್	ಸ್ನಾನದ ಸಾಬೂನು	ಲಕ್ಸ್, ರೆಕ್ಸೋನಾ, ಲಿರಿಲ್, ಲೈಫ್‌ಬಾಯ್, ಪಿಯರ್ಸ್, ಮಾರ್ಗೊ, ಜಾನ್ಸನ್, ಪಾಂಡ್ಸ್, ಕ್ಲಿಯರ್ಸಿಲ್, ಡೆಟಾಲ್, ಬ್ರೀಜ್, ನೀಮ್, ಹಮಾಮ್, ಓಕೆ, ಜಯಾ, ಮೋತಿ, ಡೊಮ್, ಆಯುಶ್, ಫೇರ್ ಅಂಡ್ ಲವಲೀ
ಟಾಟಾ ಕಂಪೆನಿ, ಅಸ್ಸಾಮ್ ಚಹಾ, ಎಂ.ಆರ್.ಕಾಫಿ, ರಾಯಲ್ ಬೆಂಗಾಲ್, ಹಸ್‌ಮುಖ್, ರಾಯ್‌ಅಂಡ್ ಕಂಪನಿ, ಇಂಡಿಯನ್‌ಕಾಫಿ, ನ್ಯೂಟ್ರಾಮೂಲ್ ಗಿರಿನಾರ, ಮಾಲ್ಟೋವ, ಹಸುವಿನ ಹಾಲು+ ಬಾಳೇಹಣ್ಣು, ಕಣ್ಣನ್ ದೇವನ್, ಚಕ್ರ ಗೋಲ್ಡ್	ಚಹಾ ಕಾಫಿ ಟಾನಿಕ್	ಬ್ರೂಕ್ ಬಾಂಡ್, ಲಿಪ್ಟನ್, ಟೈಗರ್, ಗ್ರೀನ್ ಲೇಬಲ್, ತಾಜ್ ಮಹಲ್, ಪೋಲ್ಸನ, ಬೋರ್ನ್‌ವೀಟ, ಹಾರ್ಲಿಕ್ಸ್, ಕಾಂಪ್ಲಾನ್, ಡೈಮೆಂಡ್, ಬೂಸ್ಟ್, ನೆಸ್ಲೆ, ನೆಸಕೆಫೆ, ಮೈಲೋ.
ನಿರ್ಮಾ, ಡಬಲ್, ಜಿಜಿಜಿ, ವಿಮಲ್, ಹಿಪ್ಪೋಲಿನ್,ಗೋದ್ರೆಜ್, ಫೇನಾ, ಅರಸನ್ ಟಾಟಾ, ಟೀ ಸಿರೀಸ್, ಸಣ್ಣ ಉದ್ಯೋಗದಿಂದ ತಯಾರಿಸಲಾದ ಸಾಬೂನು, ಸುಂದರಿ	ಬಟ್ಟೆ ತೊಳೆಯುವ ಸಾಬೂನು	ಸನ್‌ಲೈಟ್, ರಿನ್, ವ್ಹೀಲ್, ಸರ್ಫ್, ಹಾರ್ಪಿಕ್, ಏರಿಯಲ್, ವಿಪ್ ವಾಯಿಲ್, ಚೆಕ್, ಟೈಡ್, ೫೦೫, ಚೆಕ್.
ಪಾರ್ಲೆ, ಸಾಟೆ, ಅಮುಲ್, ಬೇಕಮೇನ್ಸ್, ಶಾಲಿಮಾರ್, ಚಾಂಪಿಯನ್, ಶಾಂಗ್ರಿಲಾ, ಬೆಕಮೆನ್ಸ್, ಸಾಗರ್, ಬ್ರಿಟಾನಿಯಾ	ಬಿಸ್ಕೀಟ್ ಚಾಕ್ಲೇಟ್ ಪೆಪ್ಪರ್‌ಮಿಂಟ್	ಕ್ಯಾಡ್ಬರಿ ೫ ಸ್ಟಾರ್, ನೆಸ್ಲೆ, ಲಿಪ್ಟನ್, ಗ್ಲೂಕೋಸ್, ಮ್ಯಾಕ್ಸಿ, ಮಾಡರ್ನ್ ಬ್ರೌನ್ ಅಂಡ್ ಪಾಲ್ಸನ್, ಹಾಲ್ಸ್, ಚಿಕ್ಲೆಟ್ಸ್, ಆಲ್ಪೆನ್‌ಲೀಬೇ.
ಟೋಪಾಜ್, ಅಶೋಕ, ಭಾರತ, ಸಿಲ್ವರ್, ಸೂಪರ ಮ್ಯಾಕ್ಸ್, ಲೇಸರ್, ಎಸ್ಕಾರ್ಟ್	ಬ್ಲೇಡ್	7ಓ ಕ್ಲಾಸ್, ವಿಲ್ಬೇಜ್, ವಿಲ್ಮನ್, ಎರಸ್ಮಿಕ್, ಜಿಲ್ಲೆಟ್, ವಿಲ್ಕಿನ್ಸನ್
ನಿರ್ಮಾ, ಟಾಟಾ, ಅಫಗಾನ್, ಸಣ್ಣ ಉದ್ಯೋಗದ ಶಾಂಪೂ, ಹರ್ಬಲ್ ಅರ್ನಿಕಾ, ಹೇರ್ ಅಂಡ್ ಕೇರ್, ವೆಲವೆಟ್, ಸಿದ್ಧ, ಡಾಬರ್ ವಾಟಿಕಾ, ಮೀರಾ ಗೋದ್ರೇಜ್ ಶಿಕಾಕಾಯಿ	ಶ್ಯಾಂಪೂ	ಪಾಂಡ್ಸ್, ಹೇಲೋ, ಹೇನಾ, ಪಾಮೋಲಿವ್, ಕ್ಲೀನಿಕ್ ಸ್ಪೆಷಲ್, ಸನ್‌ಸಿಲ್ಕ್, ಓಲ್ಡಸ್ಪೈಸ್, ಕ್ಲಿಯರ್‌ಸಿಲ್, ಮೆಡಿಕೇರ್, ಬ್ರಿಂಗಲ್, ಪ್ಯಾಂಟೀನ್, ಆರ್ಗ್ಯಾನಿಕ್ಸ್, ಲ್ಯಾಕ್ಮೆ, ಕ್ಲಿನಿಕ್ ಆಲ್ ಕ್ಲೀಯರ್, ಹೆಡ್ ಅಂಡ್ ಶೋಲ್ಡರ್.
ವಿಕೋ ಬೋರೋಲಿನ್, ಇಮಾಮಿ, ಬೋರೋಪ್ಲಸ್, ಹಿಮಾನಿ ಬೋರೋಲ್ಯಾಂಡೋಲ್, ಜಯಶ್ರೀ, ಅಫಗಾನ್, ಕೈಡಿಲಾ, ಬೋರೋಲೀನ್	ಕ್ರೀಮು, ಮುಲಾಮು	ಕ್ಲಿಯರ್‌ಸಿಲ್, ಕ್ಲಿಯರ್ ಟೋನ್, ಬ್ಯೂಸಿಲ್, ಫೈರ್ ಅಂಡ್ ಲವಲೀ, ನಿವಿಯಾ, ಓಲ್ಡ ಸ್ಪೈಸ್, ಡೆಟಾಲ್, ಎ.ಎಫ್.ಡಿ.ಸಿ., ಬ್ರಿಲ್ ಕ್ರೀಮ್, ಪಾಂಡ್ಸ್, ಸುಪ್ರೀಮ್, ಚಾರ್ಮ್ಸ್, ಎನ್ ಫ್ರೆಶ್, ಆಯಿಲ್ ಆಫ್ ಓಲೆ ಫೇರ್ ಎಮ್
ಬೋರೋಪ್ಲಸ್, ಲ್ಯಾವೆಂಡೆರ್,ಲಿಂಬು, ತುಳಸಿ, ಮಾಡ, ಡಕ್, ಮುರುಗಾ, ಸಿಂಥಾಲ್ ಮಕಯಿ, ಹಲ್ ಕಿಸಾನ್, ಜಯ ಜವಾನ್, ಕ್ಯುಟಿಕ್ಯೂರ, ಮೈಸೂರು ಸ್ಯಾಂಡಲ್	ಪೌಡರ್	ನೈಸಿಲ್,ಲಿರಿಲ್, ಪಾಂಡ್ಸ್, ಜಾನ್ಸನ್ ಬೇಬಿ ಪೌಡರ್, ಡೆನಿಮ್, ಓಲ್ಡ ಸ್ಪೈಸ್, ನಿವಿಯಾ, ಫಾ, ಜೀ, ಡೆಟಾಲ್, ರೆಕ್ಸೋನ, ಲ್ಯಾಕ್ಮೆ, ಆಯಿಲ್ ಆಫ್ ಓಲೆ
ಜೈ ಕಿಸಾನ್, ಜೈಹಿಂದ್, ಚಾವಿ,ಬೇರೆ ಸ್ವದೇಶಿ, ಬ್ರ್ಯಾಂಡ್, ಸ್ವೀಕಾರ	ಕಡ್ಡಿಪೆಟ್ಟಿಗೆ	ಟೆಕ್ಕಾ, ಹೋಮ್ ಲೈಟ್, ವಿಮ್ಕೊ, ಷಿಪ್
ತಾಯಿಯ ಹಾಲು ಸರ್ವಶ್ರೇಷ್ಠ ಮತ್ತು ಅಮೂಲ್ಯವಿದೆ, ನವ ಶಿಶು ತಾಯಿಯ ಹಾಲು ಕುಡಿಯದಿದ್ದಲ್ಲಿ ಅದಕ್ಕೆ ತುಟಿಯ ಮೇಲೆ ಸವರಿ ಹಚ್ಚಿರಿ	ಹಾಲಿನ ಪೌಡರ್	ನೆಸ್ಟೆಲೆ, ನೆಸ್ಟಮ್, ಸಿ.ಪಿ.ಎಫ್., ಮಿಲ್ಕ ಮೇಡ್, ನೆಸ್ ಪ್ರೆ, ಫ್ಯಾರೆಕ್ಸ್ ಎವೆರಿಡೆ, ಸೆರೆಲ್ಯಾಕ್, ಗ್ಲಾಕ್ಸೊ, ಮೈಲೊ, ಲಾಕ್ಟೋಗಾನ್.
ಲಿಬರ್ಟಿ, ಪಾರಗಾನ್, ಲೂನಾರ್ಸ್, ಲಖಾನಿ, ಪ್ಲ್ಯಾಕ್ಸ್, ಭಾರತದ ಚರ್ಮ ಸಣ್ಣ ಉದ್ಯೋಗಗಳು	ಬೂಟ್ ಚಪ್ಪಲ್	ಬಾಟಾ, ಕರೋನಾ, ಪ್ಯೂಮಾ, ಅಡಿಡ್ಯಾಸ್, ನೈಕಿ, ರಿಬೋಕ್, ಉಡ್‌ಲ್ಯಾಂಡ್
ಓರಿಯಂಟ್, ಬಜಾಜ್, ಉಷಾ, ಸಿನ್ನಿ, ಖೈಥಾನ್, ಪೋಲರ್, ತ್ರೀವೇಲ್, ಬಂಗಾಲಿ ಲ್ಯಾಂಪ್, ಮೈಸೂರು ಲ್ಯಾಂಪ್, ಹಿಂದೂಸ್ತಾನಿ ಲ್ಯಾಂಪುಗಳು, ಆಂಕರ್, ಪ್ರಕಾಶ	ಪಂಕಾ ಮತ್ತು ವಿದ್ಯುತ್ ಸಲಕರಣೆ	ಜಿ.ಇ.ಸಿ, ರೈಲಿಜಾ, ಕ್ರಾಮ್ಪಟನ್ ಗ್ರೀವಸ್, ಫಿಲಿಪ್ಸ್ ಥಾಮ್ಸನ್, ಸಿಆಯ್ ಇಸೇನ್ಯೂ, ಸೀಮನ್ಸ್, ಸೀಮಾ, ರ್‍ಯಾಲೀಸ್.
ಎವರೆಡಿ, ಬಿ.ಪಿ.ಎಲ್., ಶಕ್ತಿಸೂಪರ್, ಸಿಲ್ವರ್, ಅನುಪಮ, ಡೀಲಕ್ಸ್, ಕೋಹಿನೂರ ಯೂನಿವರ್ಸಲ್	ಬ್ಯಾಟರಿ	ಜೀಪ್, ಜೀವನ್ ಸಾಥಿ, ನೋವಿನೋ, ತೋಷಿಬಾ, ಆನಂದ
ರಥ, ಪ್ಯಾರಚೂಟ್, ಸಫೋಲ, ರುಚಿ, ಅಮುಲ್, ಅಮೃತ, ಗಗನ, ಸನ್‌ಪ್ಯೂರ್ ಹನುಮಾನ್, ಧಾರಾ, ಅಶೋಕ, ರಾಕೇಟ್, ಪೋಸ್ಟ್ ಮ್ಯಾನ್, ಸಪ್ನಾ, ಜೆಮಿನಿ, ನಂದಿನಿ	ಎಣ್ಣೆ ಮತ್ತು ತುಪ್ಪ	ಡಾಲ್ಡ, ಸೋಯಾ, ರೀಫೈಂಡ್, ಕ್ರಿಸ್ಟಲ್, ಸನ್‌ಡ್ರಾಪ್, ಫ್ಲೋರಾ ವೈಟಲ್, ಅನಿಕಾ, ಎವರಿಡೆ.
ಟೊರಿನೋ, ಡಿಕ್ಸಿಕೋಲಾ, ನಿಂಬೂ ಶರಬತ್, ಎಳನೀರು, ರೂ ಅಫ್ಜಾ, ಮೂಸಂಬಿ ರಸ, ಮಾವಿನ ಹಣ್ಣಿನ ರಸ, ಮೊಸರು ಮತ್ತು ಮಜ್ಜಿಗೆ, ಕಬ್ಬಿನ ರಸ, ರಸ್ನಾ ರಿಯಲ್ ಲೈಫ್	ಪಾನಿಯ	ಪೆಪ್ಸಿ, ೭ ಅಪ್, ಕೋಕ ಕೋಲ, ಫಾಂಟ, ಥಮ್ಸ್‌ಅಪ್, ಟೀಮ್, ಡ್ಯೂ ಗೋಲ್ಡ್ ಸ್ಪಾಟ್, ಲಿಮ್ಕ, ಕಿಸಾನ್, ಮಾಜಾ, ಸ್ಲೈಸ್, ಸಿಟ್ರಾ.
ದಿನ್‌ಶ್, ಜಾಯ್, ಗೋಕುಲ್, ಮಿಲ್ಕ್ ಫುಡ್, ಅಮುಲ್, ಎಂ.ಟಿ.ಆರ್.	ಐಸ್ ಕ್ರಿಮ್	ಕ್ಯಾಡ್ಬರಿ, ರಿನಾಲ್ಡ, ಕ್ವಾಲಿಟಿ ವಾಲ್ಸ್, ಡಾಲಾಪ್ಸ್
ಆರ್ಮಿ ಆಯಿಲ್, ಡೆಲ್ಟಾ, ವಿಲ್ಸನ್, ಕ್ಯಾಮ್ಲಿನ್, ಲಕ್ಸರ್, ಷಾರ್ಪ್ ರೆನಾಲ್ಡ್ಸ್, ಟುಡೆ ಕ್ಯಾಮೆಲ್ ಸೆಲ್ಲೋ	ಪೆನ್	ಪಾರ್ಕರ್, ಸ್ಟಿಪ್ ಎಯರ್, ನಿಕರ್ಸನ್, ರೋಟೋಮ್ಯಾಕ್.
ಸಾಫ್ಟ್ ಟಚ್, ರಿಯಲ್, ಲೇಡಿ ಕೇರ್	ಸ್ಯಾನಿಟರಿ ನ್ಯಾಪ್ಕಿನ್	ಕೇರ್ ಫ್ರೀ, ಸ್ಟೇಫ್ರೀ, ವಿಸ್ಪರ್, ಕಾಂಪಿಟ್

ಳ.ಯಾರ ಮುಂದೆ ನಿನ್ನ ಭಾವನೆಗಳನ್ನು ಬಹಿರಂಗವಾಗಿ ಹೇಳಿಕೊಳ್ಳಲು ಸಾಧ್ಯವೋ ಅವನೇ ಸ್ನೇಹಿತ

ಎರಡು ಹನಿ ಹಸಿ ಹಾಲು, ಲಿಂಬು ಅಥವಾ ಮೊಸರು ಕಲಿಸಿ, ಇಮಾಮಿ ಮೈತ್ರಿ ಅಫಘಾನ, ಪಿಚಾನ, ಡಿಲಕ್ಸ್, ಬೇರೆ ಉದ್ಯೋಗದ ಉತ್ಪಾದನೆ, ವಿಕೊ, ಗೋದ್ರೇಜ್	ಷೇವಿಂಗ್ ಕ್ರೀಮ್	ಓಲ್ಡ್ ಸ್ಪೈಸ್, ಪಾಮೋಲಿವ್, ನಿವಿಯಾ, ಪಾಂಡ್ಸ್, ಪ್ರೀಮಿಯಂ ಎರಾಸ್ಮಿಕ್, ಮೆಂಥೋಲ್, ಡೆನಿಮ್, ಫ್ರೆಶ್‌ಬ್ಲೂ.
ಬೋರೋಲಿನ್, ಬೋರೋಪ್ಲಸ್, ಪಟಕದ ಪುಡಿ	ಆಫ್ಟರ್ ಷೇವ್ ಲೋಷನ್	ಓಲ್ಡ್ ಸ್ಪೈಸ್,ಪಾಂಡ್ಸ್, ಡೆನಿಮ್.
ಇಂಡಾನಾ, ಪ್ರಿಯಾ, ಆರ್.ಕೆ., ರಸ್ನಾ, ರುಚಿಕ ಕೃಷಿ	ಸಾಸ್, ಜ್ಯಾಮ್, ಜೆಲ್ಲಿ	ಮ್ಯಾಗಿ, ಕಿಸಾನ್, ಬ್ರೌನ್ ಅಂಡ್‌ಪಾಲ್ಸನ್, ಬೇಕ್ ಫೀಲ್ಡ್
ಎಲ್ಲಾ ಮನೆಗಳಲ್ಲಿ ಮಾಡಲಾಗುವ ಚಿಪ್ಸ್ ಮತ್ತು ಚಕ್ಕುಲಿಗಳು, ಸ್ಪೈಡ್ ಮೇಕರ್	ಬಟಾಟಾ ಚಿಪ್ಸ್	ರಫಲ್ಸ್, ಫನ, ಮೂರ್ಚ, ಹೊಸ್ಟೆಸ್, ಅಂಕಲ್ ಚಿಪ್ಸ್, ಬಿನ್ನಿಸ್ ಟಾಫರ್ ಮನ್ಸ್
ಅಮುಲ್, ನ್ಯೂಟ್ರಿನ್	ಟಾಫಿ	೫ ಸ್ಟಾರ್, ಎಕ್ಲೇರ್ಸ್, ಚೋಕೋಬಾರ್, ಓಲ್ಡ್ ಜಮೈಕಾ ಚೋಕೋ ವಿಕ್ಸ್‌ರೋಸ್ಟ್, ಅಲ್ಪೆನೆಲೀಬೆ, ಕ್ಯಾಡ್ಬರಿ ಜೆಮ್ಸ್, ಮಿಲ್ಕ್ ಬಾರ್
ಎಂ.ಎಸ್.ಪಿ., ಬಿಡಿ ಉಪ್ಪು, ಅಂಕುರ್, ಆಕಾರ್, ದಾಂಡಿ, ಟಾಟಾ	ಉಪ್ಪು	ಕಿಸಾನ್ ಅನ್ನಪೂರ್ಣ, ಕ್ಯಾಪ್ಟನ್ ಕುಕ್, ಕ್ರಿಸ್ಟಲ್.
ಕ್ಲಾಸಿಕ್, ಸ್ಯಾನಿಫ್ರೆಶ್	ಟಾಯಲೆಟ್ ಸುಗಂಧ	ಹಾರ್ಪಿಕ್, ಫೆನೋಲೈನ್, ಲೈಜಾಲ್
ಸೈಕಲ್ ಬ್ರಾಂಡ್, ಗೋಪಿಕಾ, ವಾಸು, ಮೈಸೂರು ಸ್ಯಾಂಡಲ್, ಹರಿಪ್ರಿಯ, ವಿಷ್ಣು ಪರ್ಫ್ಯೂಮರೀಸ್	ಅಗರಬತ್ತಿ	ಹೇಜ್, ಗ್ಲೇಡ್, ಗಂಗಾ
ಹೆಚ್.ಎಂ.ಟಿ. ಟೈಟನ್, ಅಜಂತಾ, ಆರ್‌ಪಾಟ್	ಗಡಿಯಾರ	ಸಿಟಿಜನ್, ರ್‍ಯಾಡೊ, ಒಮೇಗಾ, ಸೀಕೊ.
		ಆಜಾದಿ ಬಚಾವೊ ಆಂದೋಲನ ಕೈಪಿಡಿ.

ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರ ಹೇಳಿಕೆ.

ಆಯ್ದ ಐದು ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ.

ಕೊಡಗು ಗೌಡ ವಿದ್ಯಾಸಂಘದ ವತಿಯಿಂದ ಜಿಲ್ಲೆಯಲ್ಲಿ ತೀರಾ ಹಿಂದುಳಿದಿರವ ಗ್ರಾಮಗಳನ್ನು ಗುರುತಿಸಿ ಆ ಗ್ರಾಮಗಳಲ್ಲಿನ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಹಾಗೂ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಗುವುದು ಎಂದು ಸಂಘದ ಅಧ್ಯಕ್ಷ ಹೊಸೂರು ರಮೇಶ್ ಜೋಯಪ್ಪ ತಿಳಿಸಿದರು.

ಇತ್ತಿಚೇಗೆ ಪತ್ರಿಕಾ ಭವನದಲ್ಲಿ ಕರೆಯಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಚೇರಂಗಾಲದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಒಂದನೇ ಮೊಣ್ಣಂಗೇರಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೆರವನಾಡು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಚರಂಡೇಟಿ ಹಾಗೂ ತಣ್ಣಿಮಾನಿ ಪ್ರಾಥಮಿಕ ಶಾಲೆಗಳಲ್ಲಿನ ಒಟ್ಟು 200 ಮಂದಿ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಗುವದು ಎಂದು ಅವರು ವಿವರಿಸಿದರು.

ಅಲ್ಲದೆ, ಕೊಡಗಿನ ವಿವಿಧ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ 25 ಮಂದಿ ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೂ ಪುಸ್ತಕ ನೀಡಲಾಗುವುದು ಎಂದಿರುವ ಅವರು, ಪ್ರೌಢ ಶಾಲಾ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಗೌಡ ಜನಾಂಗದ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಿದ್ದು, ಅರ್ಹ ವಿದ್ಯಾರ್ಥಿಗಳು ಜೂನ್ 30 ರ ಒಳಗಾಗಿ ಅಂಕಪಟ್ಟಿಯ ನಕಲು ಪ್ರತಿಯೊಂದಿಗೆ ಅರ್ಜಿ ಸಲ್ಲಿಸುವಂತೆ ಕೋರುತ್ತಾರೆ.

ಮುಂದುವರಿದು ಪ್ರತಿ ವರ್ಷದಂತೆ ಈ ವರ್ಷವೂ 7 ನೇ, 10 ನೇ ದ್ವಿತೀಯ ಪಿಯುಸಿ ಹಾಗೂ ಪದವಿ ತರಗತಿಗಳಲ್ಲಿ ಅತಿ ಹೆಚ್ಚು ಅಂಕಗಳಿಸಿರುವ ಗೌಡ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವದು ಎಂದ ಅವರು, ಗ್ರಾಮ ಹಾಗೂ ನಗರಗಳಲ್ಲಿ ಪ್ರತ್ಯೇಕವಾಗಿ ಪ್ರತಿಭಾವಂತರ ಆಯ್ಕೆ, ಪದವಿ ಪೂರ್ವ ಹಾಗೂ ಪದವಿ ತರಗತಿಗಳಲ್ಲಿ ಕಲೆ, ವಾಣಿಜ್ಯ ಹಾಗೂ ವಿಜ್ಞಾನ ವಿಷಯಗಳಲ್ಲಿ ಪ್ರತ್ಯೇಕವಾಗಿ ಗುರುತಿಸಿ ಸನ್ಮಾನ, ಅಲ್ಲದೆ ಇಂಜನಿಯರಿಂಗ್, ಮೆಡಿಕಲ್ ಮತ್ತಿತರ ವೃತ್ತಿಪರ ಶಿಕ್ಷಣದಲ್ಲಿ ರ್‍ಯಾಂಕ್ ವಿಜೇತರಾದವರಿಗೆ, ವಿಜ್ಞಾನ, ಕಲೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸಾಧನೆ ತೋರಿದವರಿಗೆ ಸನ್ಮಾನಿಸಿ ಗೌರವಿಸಲಾಗುವುದು. ಅರ್ಹ ಪ್ರತಿಭಾವಂತರು ಜುಲೈ 31 ರ ಒಳಗಾಗಿ ಅರ್ಜಿ ಸಲ್ಲಿಸುವಂತೆ ತಿಳಿಸಿದರು.

ಗೊಂದಲ ನಿವಾರಣೆಗೆ ಆಗ್ರಹ

ಸಿ.ಇ.ಟಿ. ಕುರಿತು ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಸಾಕಷ್ಟು ಗೊಂದಲದ ನಿವಾರಣೆಗೆ ಸೂಕ್ತ ಹಾಗೂ ತುರ್ತು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿರುವ ಅವರು ಪ್ರಸ್ತುತ ಅಕ್ಷರದಾಸೋಹ ಹೆಸರಿನಲ್ಲಿ ಒಂದರಿಂದ ಐದನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ನೀಡಲಾಗುವ ಮಧ್ಯಾಹ್ನದ ಉಚಿತ ಊಟದ ವ್ಯವಸ್ಥೆಯನ್ನು ಕೊಡಗು ಹಾಗೂ ಇತರ ಮಲೆನಾಡು ಪ್ರದೇಶಗಳಲ್ಲಿ 7 ನೇ ತರಗತಿವರೆಗೆ ವಿಸ್ತರಿಸುವಂತೆ ಒತ್ತಾಯಿಸಿದರು.

ಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಕೆ. ಆರ್. ವಿದ್ಯಾಧರ್, ಜಂಟಿ ಕಾರ್ಯದರ್ಶಿ ಅಂಬೆಕಲ್ ನವೀನ್ ಕುಶಾಲಪ್ಪ ನಿರ್ದೇಶಕರುಗಳಾದ ಪರ್ಲಕೋಟಿ ಕಾವೇರಪ್ಪ ಹಾಗೂ ಕೋಡಿ ಚಂದ್ರಶೇಖರ್ ಉಪಸ್ಥಿತರಿದ್ದರು.

-ಸಂಗಾತಿ

ಮೈಸೂರಿನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿ ನಿಲಯಕ್ಕೆ ಸೇರ ಬಯಸುವ ಜನಾಂಗದ ವಿದ್ಯಾರ್ಥಿಗಳಿಂದ ಅರ್ಜಿ ಕೋರಲಾಗಿದೆ.

ಶುಭ ವಿವಾಹ

ಮಡಿಕೇರಿ ತಾಲ್ಲೂಕು ಬಿಳಿಗೇರಿ ಗ್ರಾಮದ ದಂಬೆಕೋಡಿ ಸುಕುಮಾರ ಮತ್ತು ಪದ್ಮ ದಂಪತಿಗಳ ಮಗ ಪ್ರೀತಮ್‌ನಿಗೂ ಮತ್ತು ಬಾಡಗ ಗ್ರಾಮದ ಕೇಕಡ ನಾಣಯ್ಯ ಮತ್ತು ಭಾಗ್ಯ ದಂಪತಿಗಳ ಪುತ್ರಿ ಯೋಗಿತಾಳ ವಿವಾಹವು ದಿನಾಂಕ 18-5-2003 ರಲ್ಲಿ ಮಡಿಕೇರಿಯಲ್ಲಿರುವ ಕ್ರಿಷ್ಟಲ್ ಹಾಲ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು.

ವಿರಾಜಪೇಟೆ ತಾಲ್ಲೂಕು ಕೈಕೇರಿ ಗ್ರಾಮದ ಪಡಿಕ್ಕಲ್ ಮಾದಪ್ಪನವರ ಮಗ ಸಂತೋಷ್‌ನಿಗೂ ಮತ್ತು ಮೂರ್ನಾಡು ಗ್ರಾಮದ ನಾಟೋಳನ ಜಗನ್ನಾಥ್‌ನವರ ಪುತ್ರಿ ಶರ್ಮಿಳಾಳಿಗೂ ವಿವಾಹವು ದಿನಾಂಕ 14-5-2003 ರಲ್ಲಿ ಸಿದ್ದಾಪುರದ ಸ್ವರ್ಣಮಾಲಾ ಕಲ್ಯಾಣ ಮಂಟಪದಲ್ಲಿ ಬಾರಿ ವಿಜೃಂಭಣೆಯಿಂದ ಮದುವೆ ನಡೆಯಿತು.

ಮಡಿಕೇರಿ ತಾಲ್ಲೂಕು ಮರಗೋಡು ಗ್ರಾಮದ ಪಾಂಡನ ಪ್ರಕಾಶ್ ಮತ್ತು ಪುಷ್ಪವೇಣಿ ದಂಪತಿಗಳ ಪುತ್ರಿ ಮೆಲೋಡಿ ಎಂಬ ವಧುವಿಗೂ ಬಲಮುರಿ ಗ್ರಾಮದ ಚೀಯಪ್ಪನ ಲೇಟ್ ಗಣಪತಿ ಮತ್ತು ಚಂದ್ರಮ್ಮ ದಂಪತಿಗಳ ಪುತ್ರ ಹರೀಶ್ ಎಂಬ ವರನಿಗೂ ದಿನಾಂಕ 25-5-2003 ರಲ್ಲಿ ವಿವಾಹವು ಮರಗೋಡು ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮೈಸೂರು ನಿವಾಸಿ ತೆಕ್ಕಡೆ ಪೂಣಚ್ಚನವರ ಪುತ್ರ Capt. ಟಿ.ಪಿ. ದಿನೇಶ್‌ನಿಗೂ ಮತ್ತು ತಿರುಚ್ಚಿನಪಳ್ಳಿಯ ವನಜ ಕಿರಣನವರ ಮಗಳು ಲೆಫ್ಟಿನೆಂಟ್ ದರ್ಶನ್ ಪಾಲ್ ಕೌರ್ ಇವರ ಆರತಕ್ಷತೆಯು ಮೈಸೂರಿನ ಕೆಯಿನ್ಸ್ ಹೊಟೇಲಿನಲ್ಲಿ ದಿನಾಂಕ 25-5-2003 ರಲ್ಲಿ ನೆರವೇರಿತು.

ಕುಶಾಲನಗರ ನಿವಾಸಿ ಎಡಿಕೇರಿ ಚಿಣಪ್ಪ ಮತ್ತು ರುಕ್ಮಿಣಿ ದಂಪತಿಗಳ ಮಗ ಸುಜಿತ್ ಎಂಬ ವರನಿಗೂ ಕಟ್ಟೆಮಾಡು ಗ್ರಾಮದ ಕಾಂಗೀರ ಪೂಣಚ್ಚನವರ ಮಗಳು ಪ್ರೀತುವಿಗೂ ಮರಗೋಡು ಗೌಡ ಸಮಾಜ ಕಲ್ಯಾಣ ಮಂಟಪದಲ್ಲಿ ದಿನಾಂಕ 22-5-2003 ರಲ್ಲಿ ಮದುವೆ ನೆರವೇರಿತು.

ನಂಜರಾಯಪಟ್ಟಣದ ಚಿಯಂಡಿರ ಪಾಪಯ್ಯನವರ ಪುತ್ರಿ ಮೇನಕಾ (ಶಾಲಿ)ಳಿಗೂ ಮತ್ತು ಸೋಮವಾರಪೇಟೆ ತಾಲ್ಲೂಕಿನ ಕಿಬ್ಬೆಟ್ಟಗ್ರಾಮದ ಕಾಳಪ್ಪನವರ ಪುತ್ರ ಗಿರೀಶ್‌ನಿಗೂ ಕುಶಾಲನಗರ ಗೌಡ ಸಮಾಜದಲ್ಲಿ ದಿನಾಂಕ 9-6-2003 ರಲ್ಲಿ ವಿಜೃಂಭಣೆಯಿಂದ ಮದುವೆ ನೆರವೇರಿತು.

ಮಡಿಕೇರಿ ನಿವಾಸಿ ಅಂಬೆಕಲ್ಲು ಕುಶಾಲಪ್ಪ ಮತ್ತು ಸುಶೀಲ ದಂಪತಿಗಳ ಪುತ್ರ ವಿನೋದ್‌ನಿಗೂ ಭದ್ರಗೊಳಗ್ರಾಮದ ಮೇಡ್ತನ ವಸಂತನವರ ಪುತ್ರಿ ಸುಕನ್ಯಳಿಗೂ ದಿನಾಂಕ 22-6-2003 ರಲ್ಲಿ ಮಡಿಕೇರಿಯಲ್ಲಿರುವ ಜಿ.ಇ.ಸಿ. ಯುಟಿಲಿಟಿ ಹಾಲ್‌ನಲ್ಲಿ ಬಹು ವಿಜೃಂಭಣೆಯಿಂದ ಮದುವೆ ನಡೆಯಿತು.

ಚೋಡುಪಾಲು ನಿವಾಸಿ ಚೆರಿಯಮನೆ ದಿ|| ಚಿಣಪ್ಪನವರ ಮಗ ನರೇಶ್‌ಕುಮಾರ್‌ನಿಗೂ ಮತ್ತು ಅಪ್ಪಂಗಳ ನಿವಾಸಿ ಮುಕ್ಕಾಟಿ ತಮ್ಮಯ್ಯನವರ ಪುತ್ರಿ ತನುಜಳಿಗೂ ದಿನಾಂಕ 9-6-2003 ರಂದು ಮಡಿಕೇರಿಯ ಕ್ರಿಸ್ಟಲ್‌ಹಾಲ್‌ನಲ್ಲಿ ಮದುವೆಯು ನಡೆಯಿತು.

ನಿಧನ

ಭಾಗಮಂಡಲ ನಾಡು ಸಂಣಪುಲಿಕೋಟು ಗ್ರಾಮದ ಉದಿಯನ ಮುತ್ತಪ್ಪನವರು ದಿನಾಂಕ 1-6-2003 ರಂದು ತಮ್ಮ 65 ನೇ ವಯಸ್ಸಿನಲ್ಲಿ ನಿಧನರಾದರು. ಶ್ರೀಯುತರು ಪತ್ನಿ ಮತ್ತು ಮಗ ಅಲ್ಲದೆ ಅಪಾರ ಬಂದುವರ್ಗವನ್ನು ಆಗಲಿದ್ದಾರೆ.

ವರದಿ: ಇಂದಿರಾ, ಮೈಸೂರು.

ಇಡೀ ರಸ್ತೆ

ಪಿಳ್ಳಿ: ಚಾಂಪ, ಚಾಂಪ ಕಳ್ಳು ಕುಡ್ದವು ರಸ್ತೇಲಿ ಯಾಕೆ ಅಡ್ಡಡ್ಡ ಹೋದು?

ಚಾಂಪ: ಕಳ್ಳ್ ಕುಡ್ದ ಮ್ಯಾಲೆ ಬುದ್ದಿ ಉಸಾರಾದೆ

ಪಿಳ್ಳಿ: ಬುದ್ದಿ ಉಸಾರಾದರೆ ಅಡ್ಡಡ್ಡ ಹೋಕುತ ಉಟ್ಟಾ?

ಚಾಂಪ: ರಸ್ತೆ ಅಗಲ ಇರ್‍ಕ್ನ ಯಾಕೆ ಒಂದ್ ಬದಿಂದ ಹೋದುತ ರಸ್ತೆ ಅಡ್ಡಡ್ಡಕ್ಕೆ ಹೋದು ಸರಿತ್ತೇಳಿ ಹೋದು.

-ತೊತ್ತಿಯನ ಮಿಥುನ, ಬಾಡಗ.

ಕೊತ್ತಿಗೆ ನಪ್ಪಿನ ಶಕ್ತಿ ಕಮ್ಮಿ, ಆದ್ರೆ ನಾಯಿದ್ ವಿರುದ್ಧ ಗಡ
ನಾಯಿ ಬಾಲ ಆಡಿಸಿದರೆ ಅದ್ ಸ್ನೇಹ ಸೂಚಕ ಗಡ
ಕೊತ್ತಿ ಬಾಲ ಆಡಿಸಿದರೆ ಅದ್ ಎಚ್ಚರಿಕೆಯ ಸಂಕೇತಗಡ

-ಪ್ರಭಾಕರ ಪಟ್ಟಡ.

ನಗೆ ಹನಿ

ಪುಟ್ಟು: ಯಾಕೋ ಅಳ್ತಿದ್ದೀಯಾ?

ಕಿಟ್ಟು: ನನ್ನ ನಾಯಿ ಮರಿ ಕಾಣಿಸ್ತಿಲ್ಲ

ಪುಟ್ಟು: ಅದನ್ನು ನೋಡಿದ್ರೆ ಗುರುತು ಸಿಗುತ್ತೇನು?

ಕಿಟ್ಟು: ಹೌದು ಅದರ ಬಾಲ ಬಗ್ಗಿದೆ ಮತ್ತು ಆಗಾಗ್ಗ ಬಾಲವನ್ನು ಅಲ್ಲಾಡಿಸುತ್ತದೆ.

-ಕೋಡಿಯಡ್ಕ ರಮೇಶ್, ಮಕ್ಕಂದೂರು.

ಓ.ಐಶ್ವರ್ಯ ಹಲವು ಸ್ನೇಹಿತರನ್ನು ತಂದುಕೊಡುತ್ತದೆ. ಕಷ್ಟ ಅವರು ಎಂತಹವರೆಂಬುದನ್ನು ತಿಳಿಸುತ್ತದೆ.



ದಿ|| ಬಾರಿಕೆ ಪೂಣಚ್ಚ

ಜನನ: 6-6-1935 ಮರಣ: 9-7-2001

ದ್ವಿತೀಯ ವರ್ಷದ ಪುಣ್ಯಸ್ಮರಣೆ

ನೀವು ನಮ್ಮೆಲ್ಲರನ್ನು ಅಗಲಿ ಎರಡು ವರುಷ ಕಳೆದರೂ ನಿಮ್ಮ ಸ್ನೇಹಮಯ ಆದರ್ಶ ಜೀವನದ ಚಿರನೆನಪು ಆಗಿಂದಾಗ್ಗೆ ಮರುಕಳಿಸುತ್ತಿದೆ. ನಿಮ್ಮ ಆತ್ಮವು ಚಿರಶಾಂತಿಯಿಂದ ಇರಲೆಂದು ಪ್ರಾರ್ಥಿಸುತ್ತಿರುವೆವು.

ಪತ್ನಿ: ಬಾರಿಕೆ ಮೀನಾಕ್ಷಿ, ಮಗ: ದಿನೇಶ್ ಕುಮಾರ್, ಮಗಳು : ಲತ

ಸೊಸೆ: ಕೀರ್ತಿ, ಅಳಿಯ : ಪ್ರಸನ್ನ, ಮೊಮ್ಮಕ್ಕಳು : ಪ್ರಜ್ವಲ್, ಸ್ಪಂದನ, ಮಹೇಶ್, ಗಣಪತಿ ಹಾಗೂ ಅಪಾರ ಬಂಧು ಬಳಗದವರು, ಮಡಿಕೇರಿ. Ph. : 229219

ವಿಳಾಸ : ಗುರುಕೃಪಾ, ಹೊಸ ಕೈಗಾರಿಕೆ ಬಡಾವಣೆ, ಮಡಿಕೇರಿ.



ದಿ|| ಕುಂಜಿಲನ ಎನ್. ದೇವಯ್ಯ

ಮರಣ: 28-6-2000

ತೃತೀಯ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ 3 ವರ್ಷಗಳು ಕಳೆದರು ನಿಮ್ಮ ನೆನಪುಗಳು, ನೀವು ನಮಗಾಗಿ ಶ್ರಮಿಸಿದ ಆ ದಿನಗಳು ಮತ್ತು ನೀಡುತ್ತಿದ್ದ ಪ್ರೀತಿ ವಾತ್ಸಲ್ಯಗಳನ್ನು ಸದಾ ನೆನಪಿಸಿಕೊಳ್ಳುತ್ತಾ, ಭಗವಂತನು ನಿಮ್ಮ ದಿವ್ಯಾತ್ಮಕ್ಕೆ ಸದಾ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ಪತ್ನಿ : ದೇವಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.

ಪ್ರಕಟಣೆ: ಕುಂಜಿಲನ ರಮೇಶ್, 979, 6 ನೇ 'ಎ' ಮುಖ್ಯರಸ್ತೆ, ಎಚ್.ಎಂ.ಟಿ. ಲೇಔಟ್, ಆರ್.ಟಿ. ನಗರ, ಬೆಂಗಳೂರು - 32, Ph. : 080/3634001



ದಿ||ಅಂಚೆಮನೆ ಚಿಣಮ್ಮ

ಅಭ್ಯತ್ ಮಂಗಲ ಜನನ: 12-4-1924 ಮರಣ: 27-6-1999

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮೆಲ್ಲರನ್ನು ಅಗಲಿ ನಾಲ್ಕು ವರ್ಷ ಕಳೆದರು ನಿಮ್ಮ ಸವಿನೆನಪು, ಆದರ್ಶಮಯ ಜೀವನ ಶೈಲಿಗಳು ಆಗಿಂದಾಗ್ಗೆ ಮರು ಕಳಿಸುತ್ತದೆ. ನಿಮ್ಮ ನಿಶ್ಕಲ್ಮಶ ದಿವ್ಯಾತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ಅನುದಿನವು ನೀಡಲೆಂದು ನಾವುಗಳು ಪ್ರಾರ್ಥಿಸುವೆವು.

ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಹಾಗೂ ಅಪಾರ ಬಂಧು ಬಳಗದವರು.

ಪ್ರಕಟಣೆ: ಅಂಚೆಮನೆ ಗಣೇಶ್, ನಂ. 173, ನಾಲ್ಕನೇ ಕ್ರಾಸ್, 2 ನೇ ಹಂತ, ಕೆಸರೆ, ಮೈಸೂರು-7, Ph. : 0821-2496246



ದಿ||ಮೊಟ್ಟೇರ ಮಂದಣ್ಣ ಡಾಲು

ಜನನ: 15-6-1947 ಮರಣ: 10-7-1998

5 ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಐದು ವರ್ಷಗಳು ಸಂದಿವೆ. ನಿಮ್ಮ ಸವಿನೆನಪು ನಮ್ಮ ಮನೆಯ ಬೆಳಕಾಗಿಯೇ ಇದೆ. ಭಗವಂತನು ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ ನೀಡಲಿ ಎಂದು ನಾವು ಅನುದಿನವು ಪ್ರಾರ್ಥಿಸುತ್ತಿರುವೆವು.

ಪತ್ನಿ : ಮೊಟ್ಟೇರ ಬೋಜಮ್ಮ ಮಂದಣ್ಣ

ಮಕ್ಕಳು : ವಿಜಯ್ ಮತ್ತು ಅಜಯ್,

ವಿಳಾಸ: ಡಾಲು ವಿಲ್ಲಾ 18ನೇ ಬ್ಲಾಕ್, ಜಯನಗರ, ಮಡಿಕೇರಿ.

ನಿಧನ

ಚೇರಂಗಾಲ ಗ್ರಾಮದ ಕಾನೆಹಿತ್ಲು ದಿ|| ಪೂವಯ್ಯನವರ ಧರ್ಮಪತ್ನಿ ಗಂಗಮ್ಮನವರು ದಿನಾಂಕ 27-6-2003 ರ ಶುಕ್ರವಾರ ದಿನ ನಿಧನರಾದರು. ಮೃತರಿಗೆ 103 ವರ್ಷ ಪ್ರಾಯವಾಗಿದ್ದು ಮೂವರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ವರದಿ: ಪೂಜಾರಿ ಸುಮನ್ ರಮೇಶ್, ಮಡಿಕೇರಿ.

ಕೊಡಗ್ ಸಂಗಾತಿನ ಒಲೆಗೊಂದರಂಗೆ ಕೊಂಡ್ ಓದಿಕ್ಕೆ ಮರೆಕ್ಕಾಗದ್ !

Reg. No. KA/SK/MYS-88/2003 Registered : 10-01-96 TCI Kar. 09592

ಶೌರ್ಯ ಪ್ರಶಸ್ತಿಗೆ ಮಕ್ಕಳಿಂದ ಅರ್ಜಿ ಆಹ್ವಾನ

ಮಕ್ಕಳ ದಿನದ ಅಂಗವಾಗಿ ನೀಡುವ ರಾಜ್ಯ ಮಟ್ಟದ ಶೌರ್ಯ ಪ್ರಶಸ್ತಿಯಾಗಿ ರಾಜ್ಯ ಮಕ್ಕಳ ಕಲ್ಯಾಣ ಪರಿಷತ್ತು ಅರ್ಜಿಗಳನ್ನು ಆಹ್ವಾನಿಸಿದೆ.6 ರಿಂದ 18 ವಯೋಮಿತಿ ಮಕ್ಕಳಿಗೆ ಈ ಪ್ರಶಸ್ತಿ ನೀಡಲಾಗುವುದು. ಪ್ರಶಸ್ತಿ ಪಡೆಯುವ ಮಕ್ಕಳಿಗೆ 10 ನೇ ತರಗತಿ ಮುಗಿಸುವ ವರೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪ್ರತಿವರ್ಷ 2 ಸಾವಿರ ರೂ. ನೀಡಲಾಗುವುದು. ನವೆಂಬರ್ 14 ರಂದು ನಡೆಯುವ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಈ ಮಕ್ಕಳಿಗೆ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಒಂದು ಸಾವಿರ ರೂ. ನಗದು ಪ್ರಶಸ್ತಿ ಪತ್ರ ಪದಕ ನೀಡಲಾಗುವುದು.ಈ ಪ್ರಶಸ್ತಿ ಪಡೆದ ಮಕ್ಕಳಲ್ಲಿ ಹೆಚ್ಚು ಶೌರ್ಯ ಹಾಗೂ ಚಾತುರ್ಯ ಪ್ರಕಟಿಸಿರುವ ಮಕ್ಕಳನ್ನು ರಾಷ್ಟ್ರೀಯ ಶೌರ್ಯ ಪ್ರಶಸ್ತಿಗೆ ಪರಿಗಣಿಸುವಂತೆ ಭಾರತೀಯ ಮಕ್ಕಳ ಕಲ್ಯಾಣ ಮಂಡಳಿಗೆ ಶಿಫಾರಸ್ಸು ಮಾಡಲಾಗುವುದು. ಮಕ್ಕಳ ಪರವಾಗಿ ಅವರ ಪೋಷಕರು, ಶಿಕ್ಷಕರು, ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳು ಜುಲೈ 31 ರೊಳಗೆ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಕಲ್ಯಾಣ ಮಂಡಳಿ, ಶಿಶುರಕ್ಷಾ 135, 3 ನೇ ಅಡ್ಡರಸ್ತೆ, ನಂದಿದುರ್ಗರಸ್ತೆ, ಜಯಮಹಲ್ ಎಕ್ಸ್‌ಟೆನ್ಸ್‌ಷನ್ ಬೆಂಗಳೂರು - 560 046 ಇಲ್ಲಿಗೆ ಸಲ್ಲಿಸಬೇಕು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

- ಸಂಗಾತಿ

ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ (ರಿ)

C/o ಕೊಡಗು ಗೌಡ ವಿದ್ಯಾರ್ಥಿನಿಲಯ, ಜಯಲಕ್ಷ್ಮೀಪುರಂ, ಮೈಸೂರು - 12

ವಿಶೇಷ ಪ್ರಕಟಣೆ

ನಮ್ಮ ಜನಾಂಗದಲ್ಲಿರುವ ಇಬ್ಬರು ಕಡುಬಡವ ಅನಾಥ ಮಕ್ಕಳನ್ನೂ ಗುರುತಿಸಿ, ಅಂಥವರನ್ನು ನಮ್ಮ ಸಂಘದ ವತಿಯಿಂದ ವಿದ್ಯಾಭ್ಯಾಸ ನೀಡುವ ಉದ್ದೇಶವಿಟ್ಟುಕೊಂಡಿರುವುದರಿಂದ, ನಮ್ಮ ಜನಾಂಗದಲ್ಲಿ ಯಾವುದೇ ಪ್ರತಿಭಾವಂತ ಕಡು ಬಡವ ಅಥವಾ ಅನಾಥ ಮಕ್ಕಳಿದ್ದಲ್ಲಿ ಅಂಥವರ ಹೆಸರು, ಮನೆ ಹೆಸರು, ತಂದೆ ಹೆಸರು, ಹಾಗೂ ಪೂರ್ತಿ ವಿವರ ಮತ್ತು ವಿಳಾಸದೊದಿಗೆ ನಮ್ಮ ಸಂಘದ ಕಾರ್ಯದರ್ಶಿಯವರಿಗೆ ಮೇಲ್ಕಂಡ ವಿಳಾಸಕ್ಕೆ ತಿಳಿಸಬೇಕೆಂದು ವಿನಂತಿ. ಹೆಚ್ಚಿನ ಮಾಹಿತಿಗಾಗಿ ಅಧ್ಯಕ್ಷರು ಅಥವಾ ಕಾರ್ಯದರ್ಶಿ ಇವರನ್ನು ಸಂಪರ್ಕಿಸಿರಿ.

ಕೊಂಬಾರನ ಸುಬ್ಬಯ್ಯ
ಕಾರ್ಯದರ್ಶಿ: **0821/ 2302650**

ತಡಿಯಪ್ಪನ ಕುಮಾರ ಜಯ, ಅಧ್ಯಕ್ಷರು.
: 0821/ 2363574

ಪುಣ್ಯ ವಧು-ವರರ ಅನ್ವೇಷಣಾ ಕೇಂದ್ರ ಸುಂಟಿಕೊಪ್ಪ

(ನಮ್ಮ ಮೂಲಕ ಒಂದಾದ ನವದಂಪತಿಗಳಿಗೆ ಶುಭ ಕಾಮನೆಗಳು)

1) ಸೋಮವಾರ ಪೇಟೆ ತಾಲ್ಲೂಕು, ನೇಗಳ್ಳಿ, ಕರ್ಕಳ್ಳಿ ಗ್ರಾಮದ ಕಾಫಿ ಬೆಳೆಗಾರರಾದ ಶ್ರೀಮತಿ ಶ್ರೀ ಹೆಚ್. ಸಿ. ಮಾದಪ್ಪನವರ ಪುತ್ರ ಪ್ರವೀಣ್ ಹಾಗೂ ನೆಲ್ಲಿಹುದಿಕೇರಿಯ ದುರ್ಗೇಶ್‌ರವರ ಪುತ್ರಿ ಮುಕ್ತ ಇವರ ವಿವಾಹವೂ ತಾರೀಖು 27-3-2003 ರಂದು ಸೋಮವಾರ ಪೇಟೆಯ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು.

2) ಸೋಮವಾರಪೇಟೆ ತಾಲ್ಲೂಕು ನಾಗವಾಲ ಗ್ರಾಮದ ಎಡಿಕೇರಿ ಸಣ್ಣಯ್ಯನವರ ಪುತ್ರ ಬೋಪಯ್ಯ ಹಾಗೂ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ವಾಸವಿರುವ ರಾಮು ಅವರ ಪುತ್ರಿ ರೇಖಾ ಇವರ ವಿವಾಹವೂ 6-4-2003 ರಂದು ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.

3) ಮೈಸೂರಿನ ಕುವೆಂಪುನಗರದಲ್ಲಿ ವಾಸವಿರುವ ಅಚ್ಚುಪಟ್ಟೀರ ಗಣೇಶ್‌ರವರ ಪುತ್ರಿ ಸಹನಾ ಹಾಗೂ ಬೆಂಗಳೂರಿನಲ್ಲಿ ವಾಸವಿರುವ ಬೆಳ್ಯನ ಈರಪ್ಪನವರ ಪುತ್ರ ಡಾ|| ತೇಜಸ್ ಇವರ ವಿವಾಹವು ತಾರೀಖು 10-3-2003 ರಂದು ಮೈಸೂರಿನ ಶಾರದದೇವಿನಗರದಲ್ಲಿರುವ ಶ್ರೀರಂಗ ಸಮುಧಾಯ ಭವನದಲ್ಲಿ ವಿಜೃಂಭಣೆಯಿಂದ ನಡೆಯಿತು.

4) ಸುಂಟಿಕೊಪ್ಪದ ನಾಕೂರು ಶಿರಂಗಾಲ ಗ್ರಾಮದ ಗೋವಿಂದಮ್ಮನ ದಿ. ಅಪ್ಪಯ್ಯನವರ ಪುತ್ರ ಜೈಯು ಹಾಗೂ ಪಾರಾಣೆ ಕಿರಂದಾಡು ಗ್ರಾಮದ ಪಾಡಿಚೇಟ್ಟೀರ ಭೀಮಯ್ಯನವರ ಪುತ್ರಿ ದಿವ್ಯ ಇವರ ವಿವಾಹವು ತಾ|| 5-6-2003 ರಂದು ಮಡಿಕೇರಿಯ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.

5. ನಂಜರಾಯಪಟ್ಟಣದ ಚೀಯಂಡಿ ಪಾಪಯ್ಯನವರ ಪುತ್ರಿ ಮೇನಕಾ ಹಾಗೂ ಸೋಮವಾರ ಪೇಟೆ ತಾಲ್ಲೂಕು ಕಿಬ್ಬೆಟ್ಟ ಗ್ರಾಮದ ಕಾಫಿ ಬೆಳೆಗಾರರಾದ ಕಾಳಪ್ಪನವರ ಪುತ್ರ ಗಿರೀಶ್ ಇವರ ವಿವಾಹವು ತಾರೀಖು 9-6-2003 ರಂದು ಕುಶಾಲನಗರದ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.

6. ಮಡಿಕೇರಿಯ ವಿನೋದ್ ಮೆಡಿಕಲ್ಸ್ ಮಾಲೀಕರಾದ ಅಂಬೆಕಲ್ ಕುಶಾಲಪ್ಪನವರ ಪುತ್ರ ವಿಮೋದ್ ಹಾಗೂ ಪಾಲಿಬೆಟ್ಟದ ಮೇಡತ್ತನ ಎ. ವಸಂತನವರ ಪುತ್ರಿ ಶುಭ ಇವರ ವಿವಾಹವು ತಾ|| 22-6-2003 ರಂದು ಮಡಿಕೇರಿಯ ಜಿ.ಇ.ಸಿ. ಯುಟಿಲಿಟಿ ಹಾಲ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು.

7. ಕುಶಾಲನಗರದ ಕುದುಪಜೆ ದಿ|| ಮೇದಪ್ಪನವರ ಪುತ್ರ ರವಿ ಹಾಗೂ ಕುಶಾಲನಗರದ ಬಾರನ ಗಣಪತಿಯವರ ಪುತ್ರಿ ಭಾರತಿ ಇವರ ವಿವಾಹ ಆರತಕ್ಷತೆಯು ತಾ|| 2-7-2003 ರಂದು ಮಡಿಕೇರಿಯ ಬ್ರಹ್ಮಗಿರಿ ಕಂಪರ್ಟ್ಸ್ ಹೋಟೇಲ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು.

ಶ್ರೀಮತಿ ಕಡ್ಯದ ರತಿ ಅರುಣ್‌ಕುಮಾರ್
ವಿಳಾಸ : "ಪುಣ್ಯ" ವಧು-ವರರ ಅನ್ವೇಷಣಾ ಕೇಂದ್ರ, ಸುಂಟಿಕೊಪ್ಪ, ಕೊಡಗು.
ದೂರವಾಣಿ : **958276-662083, Mobile : 94482 28861**

Kodagu Sangathi Kannada Fortnightly Edited, Published, Printed by **Pattada Sheelamani, # 12058**
"Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/2404290.
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.